ಗುರಿ, ನೀತಿ, ನಿಯಮ ಮತ್ತು ಸಂಘಟನೆ

AIMS, POLICY, RULES & ORGANISATION

ಭಾಗ - III
ರೇಂಜರ್ ವಿಭಾಗ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

#39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು 560 001
ದೂ.: 080-22260017, 22267470, shq@bsgkarnataka.org
shanthigruha@scout.org.in, shantigruha@bsgkarnataka.org
www.bsgkarnataka.org

The Bharat Scouts & Guides

STRUCTURE OF THE ORGANISATION



ಗುರಿ–ನೀತಿ – ನಿಯಮ ಮತ್ತು ಸಂಘಟನೆ

ಭಾಗ - 3

ರೇಂಜರ್ ವಿಭಾಗ

ಪ್ರಕಟಣೆ 2018

(30.12.2014ರ ರಾಷ್ಟ್ರೀಯ ಪರಿಷತ್‌ನಲ್ಲಿ ಅನುಮೋದನೆಗೊಂಡ ತಿದ್ದುಪಡಿಗಳನ್ನೊಳಗೊಂಡಿದೆ.)

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಕರ್ನಾಟಕ ರಾಜ್ಯ ಪ್ರಧಾನ ಕಛೇರಿ

ಗುರಿ-ನೀತಿ-ನಿಯಮ ಮತ್ತು ಸಂಘಟನೆ (ಗು.ನೀ.ನಿ.ಸಂ.) ರೇಂಜರ್ ವಿಭಾಗ
ಪ್ರಕಾಶಕರು: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, # 39, "ಶಾಂತಿಗೃಹ",
ಅರಮನೆ ರಸ್ತೆ, ಬೆಂಗಳೂರು-560 001.
ದೂರವಾಣಿ : ರಾಜ್ಯ ಕೇಂದ್ರ ಕಛೇರಿ : 22260017
ರಾಜ್ಯ ಗೈಡ್ ಕಛೇರಿ : 22267470

ಮೊದಲ ಮುದ್ರಣ : 2004
ಎರಡನೆ ಮುದ್ರಣ : 2018

© ಹಕ್ಕುಗಳು : ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ
ಪ್ರತಿಗಳು : 1000
ಪುಟಗಳು : xiv+124=138
ಬೆಲೆ : ರೂ. 35/-

ಮುದ್ರಕರು :
ಸತ್ಯಶ್ರೀ ಪ್ರಿಂಟರ್ಸ್ ಪ್ರೈ. ಲಿ.
16/1, 2ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ,
ಕಸ್ತೂರಿಬಾ ನಗರ, ಮೈಸೂರು ರಸ್ತೆ,
ಬೆಂಗಳೂರು-560 026
ದೂರವಾಣಿ : 080-2674 8811

ಮುಖ್ಯ ಆಯುಕ್ತರ ನುಡಿ

ಮನುಷ್ಯನ ಜೀವನದಲ್ಲಿ 15 ರಿಂದ 25ರವರೆಗಿನ ವಯೋಮಾನ ತನ್ನ ಜೀವನದ ಗುರಿ ಸಾಧನೆಗೆ, ವ್ಯಕ್ತಿತ್ವ ವಿಕಸನಕ್ಕೆ ಬಹು ಮುಖ್ಯವಾದ ಅವಧಿ. ಈ ವಯೋಮಾನದ ಯುವಕ-ಯುವತಿಯರಲ್ಲಿ ಶಿಸ್ತು, ನಾಯಕತ್ವ, ಭಾವೈಕ್ಯತೆಯನ್ನು ಬೆಳೆಸುವ ಜೊತೆಗೆ ಸೇವಾ ಮನೋಭಾವವನ್ನು ಮೂಡಿಸುವ ನಿಟ್ಟಿನಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿ ಮಹತ್ತರ ಪಾತ್ರ ವಹಿಸುತ್ತಿದೆ. ಈ ಚಳವಳಿಯಲ್ಲಿರುವ ರೇಂಜರ್ಸ್/ ರೋವರ್ಸ್‌ಗಳು ಈ ಎಲ್ಲಾ ಗುಣಗಳನ್ನು ಮೈಗೂಡಿಸಿಕೊಂಡು ಉತ್ತಮ ನಾಗರಿಕರಾಗುತ್ತಿರುವುದು ಹೆಮ್ಮೆಯ ಹಾಗೂ ಸಂತೋಷದ ವಿಚಾರ.

ರೇಂಜರ್ಸ್ ಮತ್ತು ರೋವರ್ಸ್‌ಗಳಿಗೆ ಸಂಸ್ಥೆಯ ಮೂಲ ಧ್ಯೇಯೋದ್ದೇಶಗಳು ಮನವರಿಕೆಯಾಗಬೇಕು. ನಿಯಮಾನುಸಾರ ತರಬೇತಿಗಳನ್ನು ಪಡೆಯಬೇಕು. ಅಂತಾರಾಷ್ಟ್ರೀಯ ಸಂಸ್ಥೆಯಾದ ಸ್ಕೌಟ್ಸ್ ಮತ್ತು ಗೈಡ್ಸ್‌ನಲ್ಲಿ ಮಾಹಿತಿ ಹಾಗೂ ತರಬೇತಿಯ ವಿಷಯಗಳ ನ್ನೊಳಗೊಂಡ ಬಹುತೇಕ ಪುಸ್ತಕಗಳು ಆಂಗ್ಲ ಭಾಷೆಯಲ್ಲಿರುತ್ತವೆ. ಆದರೆ ಸಮಾಜದ ಎಲ್ಲ ವರ್ಗದ ಮತ್ತು ಕೆಳಸ್ತರದ ಯುವತಿಯರೂ ಈ ಚಳವಳಿಯಲ್ಲಿ ಭಾಗವಹಿಸಬೇಕೆನ್ನುವ ಮಹತ್ತರ ಉದ್ದೇಶವನ್ನು ಹೊಂದಿರುವ ಈ ಸಂಸ್ಥೆಗೆ ಹೆಚ್ಚು ಹೆಚ್ಚು ಯುವಕ/ಯುವತಿಯರನ್ನು ಆಕರ್ಷಿಸುವ ಹಿನ್ನೆಲೆಯಲ್ಲಿ ನಮ್ಮ ನೆಲದ ಭಾಷೆಯಲ್ಲಿಯೂ ಈ ಮಾಹಿತಿಗಳು ಸಿಗಬೇಕು. ತಾಂತ್ರಿಕತೆ ಮತ್ತು ಕಂಪ್ಯೂಟರೀಕರಣ ವ್ಯಾಪಿಸುತ್ತಿರುವ ಈ ಕಾಲದಲ್ಲಿಯೂ ಇಂತಹ ಕೈಪಿಡಿಗಳು, ಪುಸ್ತಕಗಳು ಅನಿವಾರ್ಯವೆನಿಸಿವೆ.

ಕರ್ನಾಟಕದಲ್ಲಿ ಈ ಚಳವಳಿ ಇಷ್ಟೊಂದು ಪರಿಣಾಮಕಾರಿ ಯಾಗಿದ್ದರೆ, ಇದರಲ್ಲಿ ಅನೇಕ ಮಹನೀಯರ ಪರಿಶ್ರಮ ಅಡಗಿದೆ. ಅವರಲ್ಲಿ, ಆಂಗ್ಲ ಭಾಷೆಯಲ್ಲಿರುವ ಅನೇಕ ಮಾಹಿತಿ ಪುಸ್ತಕಗಳನ್ನು

ಕನ್ನಡಕ್ಕೆ ಅನುವಾದ ಮಾಡಿರುವ, ಇಂದಿಗೂ ಆ ಕಾಯಕವನ್ನು ಮುಂದುವರೆಸುತ್ತಿರುವ ಅನೇಕ ಮಹನೀಯರ ಪಾತ್ರ ದೊಡ್ಡದು.

ಅದೇ ರೀತಿ ಕರ್ನಾಟಕ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ರೇಂಜರ್ಸ್ ಗಳಿಗೆ ಉಪಯೋಗವಾಗುವ " ಗುರಿ, ನೀತಿ, ನಿಯಮ ಮತ್ತು ಸಂಘಟನೆ " ಎಂಬ ಹೆಸರಿನಲ್ಲಿ ಭಾಗ–3 ನ್ನು ಪ್ರಕಟಿಸುತ್ತಿರುವುದು ಶ್ಲಾಘನೀಯ. ಈ ಭಾಷಾಂತರ ಕಾರ್ಯದಲ್ಲಿ ಚಳವಳಿಯ ನಾಯಕಿಯಾದ ಶ್ರೀಮತಿ ಬಿ.ವಿ.ರಾಮಲತಾ ರವರು ಎಲ್ಲ ಅನುಭವಿ ನಾಯಕಿಯವರ ಸಹಕಾರ ಮತ್ತು ಮಾರ್ಗದರ್ಶನದೊಂದಿಗೆ ಈ ಕೃತಿಯನ್ನು ರಚಿಸಿದ್ದಾರೆ. ಅವರೆಲ್ಲರಿಗೂ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಕೃತಿಗೆ ನಮ್ಮ ಚಳವಳಿಯ ಹಿರಿಯ ನಾಯಕರೂ, ನಾಡಿನ ಶ್ರೇಷ್ಠ ಸಾಹಿತಿಗಳೂ ಆದ ಡಾ|| ಗೊ.ರು.ಚನ್ನಬಸಪ್ಪರವರು ಆಶಯ ನುಡಿ ಬರೆದುಕೊಟ್ಟಿರುವುದರಿಂದ ಕೃತಿಯ ಮೌಲ್ಯ ಮತ್ತಷ್ಟು ಹೆಚ್ಚಾಗಿದೆ.

ಕನ್ನಡ ಭಾಷೆಯಲ್ಲಿರುವ ಈ ಕೃತಿ ನಮ್ಮ ರಾಜ್ಯದ ಎಲ್ಲಾ ವರ್ಗಗಳ ಮತ್ತು ಗ್ರಾಮೀಣ ಭಾಗದ ಯುವತಿಯರನ್ನು ತಲುಪಿದಲ್ಲಿ ಅನುಕೂಲವಾಗುತ್ತದೆ. ವಯಸ್ಕ ನಾಯಕಿಯರು ಈ ಪುಸ್ತಕದ ಎಲ್ಲಾ ಅಧ್ಯಾಯಗಳನ್ನು ಅಮೂಲಾಗ್ರವಾಗಿ ಓದಿ, ಮನನ ಮಾಡಿಕೊಂಡು ರೇಂಜರ್ಸ್‌ಗಳಿಗೆ ಸಮರ್ಪಕವಾಗಿ ಸ್ಫೂರ್ತಿ ತುಂಬುವಲ್ಲಿ ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ರೇಂಜರ್ಸ್‌ಗಳನ್ನು ಆಕರ್ಷಿಸುವಲ್ಲಿ ಈ ಪುಸ್ತಕ ಪೂರಕವಾಗಲೆಂದು ಆಶಿಸುತ್ತೇನೆ.

(ಪಿ.ಜಿ.ಆರ್.ಸಿಂಧ್ಯ)

ಆಶಯ ನುಡಿ

ಸರ್ಕಾರದ ಆಡಳಿತವಿರಲಿ, ಸಾಮಾಜಿಕ ವ್ಯವಸ್ಥೆಯಿರಲಿ, ಸಾಂಸ್ಥಿಕ ನಿರ್ವಹಣೆಯಿರಲಿ–ನಿರ್ವಾಹಕರಿಗೆ ಅವುಗಳ ಗುರಿ, ನೀತಿ, ನಿಯಮ ಮತ್ತು ಸಂಘಟನೆಗಳ ಬಗೆಗೆ ಪೂರ್ಣ ಜ್ಞಾನವಿರಬೇಕಾಗುತ್ತದೆ. ಅಂತಹ ಜ್ಞಾನವಿಲ್ಲದೆ ಇದ್ದಾಗ, ನಿರ್ವಹಣೆಯಲ್ಲಿ ಕುಂದು–ಕೊರತೆಗಳು ಕಾಣಿಸಿಕೊಳ್ಳುತ್ತವೆ. ಅದರಲ್ಲೂ ಸ್ಕೌಟ್ಸ್ ಮತ್ತು ಗೈಡ್ಸ್‌ನಂತಹ ಸ್ವಯಂಸೇವಾ ಸಂಸ್ಥೆಗಳ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲುಗೊಳ್ಳುವಂತಹ ವಿವಿಧ ಹಂತದ ಶಿಕ್ಷಕರು ಮತ್ತು ತರಬೇತುದಾರರಿಗಂತೂ ಈ ಅರಿವು ಅತ್ಯಂತ ಅಗತ್ಯವಾಗುತ್ತದೆ.

ಕರ್ನಾಟಕ ರಾಜ್ಯ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ಕ್ಷೇತ್ರ ಕಾರ್ಯ ನಿರ್ವಾಹಕರಿಗೆ ಅಗತ್ಯವಾದ ಮಾಹಿತಿ ಜ್ಞಾನ ಒದಗಿಸುವ ಸಲುವಾಗಿ ನಾನಾ ರೂಪದ ಪುಸ್ತಕಗಳನ್ನು ಪ್ರಕಟಿಸುತ್ತಿದೆ. ಶೈಕ್ಷಣಿಕ ಮಹತ್ವದ ಈ ಪುಸ್ತಕಗಳನ್ನು ಚಳವಳಿಯಲ್ಲಿ ಸುದೀರ್ಘ ಅನುಭವವಿರುವ ಕ್ಷೇತ್ರತಜ್ಞರೇ ರಚಿಸುತ್ತಾರೆ. ಕೆಲವು ಸಂದರ್ಭಗಳಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಷ್ಟ್ರೀಯ ಸಂಸ್ಥೆಯ ಪ್ರಕಟಣೆಗಳನ್ನು ಕನ್ನಡಕ್ಕೆ ಅನುವಾದಿಸಿ ಕೊಡಲಾಗುತ್ತಿದೆ.

ಪ್ರಸ್ತುತ "ಗುರಿ, ನೀತಿ, ನಿಯಮ ಮತ್ತು ಸಂಘಟನೆ" ಕೃತಿಯು ರೇಂಜರ್ ವಿಭಾಗಕ್ಕೆ ಸಂಬಂಧಿಸಿದ್ದು, ಇದನ್ನು ಮೂಲ ಇಂಗ್ಲೀಷಿನಿಂದ ಕನ್ನಡಕ್ಕೆ ಅನುವಾದ ಮಾಡಿಕೊಟ್ಟಿರುವ ಸೋದರಿ ಬಿ.ವಿ.ರಾಮಲತಾ ಅವರಿಗೆ ನನ್ನ ಅಭಿನಂದನೆಗಳು.

ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ಘನತೆ ಮತ್ತು ಗೌರವಗಳ ದೃಷ್ಟಿಯಿಂದ ಚಳವಳಿಯ ಬಂಧುಗಳೆಲ್ಲ ಸಂಸ್ಥೆಯ ಪ್ರಕಟಣೆಗಳನ್ನು ಶ್ರದ್ಧಾಸಕ್ತಿಯಿಂದ ಓದಿ, ಅವುಗಳ ಪ್ರಯೋಜನವನ್ನು ಪಡೆದುಕೊಳ್ಳುವಂತಾಗಲಿ ಎಂದು ಆಶಿಸುತ್ತೇನೆ.

- ಗೊ.ರು. ಚನ್ನಬಸಪ್ಪ

ಮುನ್ನುಡಿ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯು ಇತ್ತೀಚಿನ ದಿನಗಳಲ್ಲಿ ರೇಂಜರ್‌ಗಳನ್ನು (ಯುವತಿಯರನ್ನು) ತನ್ನತ್ತ ಸೆಳೆಯುತ್ತಿರುವುದು ನಿಜಕ್ಕೂ ಹರ್ಷವನ್ನುಂಟು ಮಾಡುತ್ತಿದೆ. ಹದಿಹರೆಯದವರಿಗೆ ರೇಂಜರ್ಸ್ ವಿಭಾಗದ ಚಟುವಟಿಕೆಗಳು ಸಮಾಜಮುಖಿ, ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಲ್ಲಿ ಬಹಳ ಸ್ಫೂರ್ತಿದಾಯಕವಾದ ಉತ್ತಮ ಸಾಧನ. ಈ ವಯೋಮಾನದವರಲ್ಲಿ, ದೈಹಿಕ ಮತ್ತು ಮಾನಸಿಕ ಒತ್ತಡಗಳು ಸ್ವಾಭಾವಿಕವಾಗಿದ್ದು ಅದನ್ನು ನಿಗ್ರಹಿಸುವಲ್ಲಿ ಈ ಚಳವಳಿಯಲ್ಲಿ ಚಟುವಟಿಕೆಗಳ ಪಾತ್ರ ಹಿರಿಯದಾದುದು. ಇಂದಿನ ಯುವತಿಯರು ನಾಳಿನ ದೇಶದ ನಾಗರಿಕರು. ಅವರಲ್ಲಿ ದೇಶಾಭಿಮಾನ, ಸಮಾಜಸೇವೆ, ಕರ್ತವ್ಯಪಾಲನೆ, ಶಿಸ್ತು ಹಾಗೂ ಗುರಿ ಸಾಧನೆಗೆ, ರೇಂಜರ್ ವಿಭಾಗದ ಕಾರ್ಯಕ್ರಮಗಳು ಬಹಳ ಫಲಪ್ರದವಾಗಿರುತ್ತದೆ.

ಈ ದಿಶೆಯಲ್ಲಿ ರಾಷ್ಟ್ರೀಯ ಸಂಸ್ಥೆಯ ನಿಗದಿತ ಹಾಗೂ ಪರಿಷ್ಕರಿಸಲ್ಪಟ್ಟ ಪಠ್ಯಕ್ರಮವನ್ನು ಇಂಗ್ಲೀಷ್‌ನಲ್ಲಿ ಪ್ರಕಟಿಸಿದೆ. ಇದನ್ನು ಶ್ರೀಮತಿ ಬಿ.ವಿ. ರಾಮಲತ, ರಾಜ್ಯ ಜಂಟಿ ಕಾರ್ಯದರ್ಶಿ ಅವರು ಕನ್ನಡಕ್ಕೆ ಭಾಷಾಂತರಿಸಿರುವುದು, ತುಂಬಾ ಉಪಯುಕ್ತತೆ ಪಡೆಯಲಿದೆ. ಕರ್ನಾಟಕದ ಹಳ್ಳಿ-ನಗರಗಳ ವಿದ್ಯಾರ್ಥಿನಿಯರಿಗೆ ಮಾತೃಭಾಷೆಯಲ್ಲಿ ಮೂಡಿಬಂದಿರುವುದು ಕಳಕಳಿಯ ಸಂಗತಿ. ಶ್ರೀಮತಿ ಬಿ.ವಿ. ರಾಮಲತಾರವರ ಶ್ರಮಕ್ಕೆ ನನ್ನ ಹಾರ್ದಿಕ ಕೃತಜ್ಞತೆಗಳು. ಈ ನಿಟ್ಟಿನಲ್ಲಿ ಅವರೊಡನೆ ಸಹಕರಿಸಿದ ಶ್ರೀಮತಿ ಕಮಲಾಕ್ಷಿ ಹೆಗಡೆ, ಶ್ರೀಮತಿ ಮಂಜುಳ .ಸಿ, ರಾಜ್ಯ ಸಂಘಟನಾ ಆಯುಕ್ತರು (ಗೈಡ್) ಮತ್ತು ಶ್ರೀಮತಿ ಕೆ.ವಿ. ಶ್ಯಾಮಲ, ರಾಜ್ಯ ತರಬೇತಿ ಆಯುಕ್ತರು (ಗೈಡ್) ಇವರಿಗೂ ಧನ್ಯವಾದಗಳು.

ಈ ಪುಸ್ತಕವು ಓದುಗರ, ರೇಂಜರ್‌ಗಳ ದಳನಾಯಕಿಯರ, ತರಬೇತುದಾರರ ಮನಮುಟ್ಟಿ ಪರಿಶ್ರಮ ಸಾರ್ಥಕತೆಯನ್ನು ಪಡೆಯಲಿ ಎಂದು ನನ್ನ ತುಂಬುಮನದ ಹಾರೈಕೆಗಳು.

ಗೀತಾ ನಟರಾಜ್
ರಾಜ್ಯ ಆಯುಕ್ತರು (ಗೈಡ್)

ನನ್ನ ನುಡಿ

ಜೀವನದಲ್ಲಿ ಸದವಕಾಶಗಳು ದೊರಕುವುದು ಒಂದು ಸೌಭಾಗ್ಯ. ಅಂತೆಯೇ ನನ್ನ ಈ ಬರವಣಿಗೆಯೂ ಅನಿರೀಕ್ಷಿತ. ಅದೊಂದು ದಿನ ದಿ॥ ಎಸ್.ಕೆ. ಪ್ರಭಾರವರು, ಜಂಟಿ ಕಾರ್ಯದರ್ಶಿಯಾಗಿದ್ದಾಗ, ನನ್ನನ್ನು ಕರೆದು "ಗುರಿ, ನೀತಿ, ನಿಯಮ ಮತ್ತು ಸಂಘಟನೆ" ರೇಂಜರ್ ವಿಭಾಗದಲ್ಲಿ ಬಹಳಷ್ಟು ಬದಲಾವಣೆಗಳಾಗಿರುವುದರಿಂದ ಅದನ್ನು ಕನ್ನಡಕ್ಕೆ ಭಾಷಾಂತರಿಸಿ ಎಂದು ತಿಳಿಸಿದರು.

ರೇಂಜರ್ ವಿಭಾಗ ನಾನು ಇಷ್ಟಪಟ್ಟು ಆರಿಸಿಕೊಂಡ ವಿಭಾಗ. ಕಾಲೇಜಿನಲ್ಲಿ ಓದುತ್ತಿರುವ ಮತ್ತು ಇತರ ಹದಿಹರೆಯದ ಹೆಣ್ಣುಮಕ್ಕಳಿಗೆ ಸ್ಕೌಟ್ಸ್ ಮತ್ತು ಗೈಡ್ಸ್‌ನಲ್ಲಿ ಇರುವ ವಿಷಯಗಳು ಮತ್ತು ತರಬೇತಿ ಬಹು ಮುಖ್ಯವೆಂದು ನನ್ನ ಅನಿಸಿಕೆ. ಆದ್ದರಿಂದ ನನ್ನ ಕೈಲಾದ ಮಟ್ಟಿಗೆ ಭಾಷಾಂತರವನ್ನು ನಗರದ ಹಾಗೂ ಹಳ್ಳಿಯ ಯುವತಿಯರಿಗೆ ಅರ್ಥವಾಗುವಂತೆ ಮಾಡಿದ್ದೇನೆ. ಕೆಲವೆಡೆ ರೇಂಜರ್ ಹಾಗೂ ರೇಂಜರ್ ನಾಯಕಿಯರಿಗೆ ಕಲಿಕೆಯಲ್ಲಿ ಸಹಕಾರಿಯಾಗುವುದೆಂಬ ಆಶಯದಿಂದ ಇಂಗ್ಲೀಷ್ ಪದಗಳನ್ನು ಹಾಗೆಯೇ ಬಳಸಿದ್ದೇನೆ. ಏನಾದರೂ ಲೋಪದೋಷಗಳು ಕಂಡುಬಂದಲ್ಲಿ ನನ್ನ ಗಮನಕ್ಕೆ ತರುವಿರಾಗಿ, ಓದುಗರಿಗೆ ಪ್ರಾರ್ಥನೆ.

ಈ ಕಾರ್ಯದಲ್ಲಿ ನನ್ನನ್ನು ಗುರುತಿಸಿ ಉತ್ತೇಜನ ನೀಡಿದ ದಿ॥ ಎಸ್.ಕೆ.ಪ್ರಭಾ ಅವರಿಗೆ ಚಿರಋಣಿಯಾಗಿದ್ದೇನೆ. ಭಾಷಾಂತರದಲ್ಲಿ ಸಹಕಾರ ನೀಡಿದ ಶ್ರೀಮತಿ ಕಮಲಾಕ್ಷಿ ಹೆಗಡೆರವರಿಗೆ ಆಭಾರಿಯಾಗಿದ್ದೇನೆ ಮತ್ತು ಮಾರ್ಗದರ್ಶನ ನೀಡಿದ ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು, ಪ್ರಕಟಣಾ ಸಮಿತಿಯ ಅಧ್ಯಕ್ಷರಾದ ಶ್ರೀ ಗೊ.ರು.ಚನ್ನಬಸಪ್ಪ, ಶ್ರೀಮತಿ ಗೀತಾ ನಟರಾಜ್, ರಾಜ್ಯ

ಆಯುಕ್ತರು, ಶ್ರೀಮತಿ ಮಂಜುಳಾ ಸಿ., ರಾಜ್ಯ ಸಂಘಟನಾ ಆಯುಕ್ತರು(ಗೈ), ಶ್ರೀಮತಿ ಕೆ.ವಿ. ಶಾಮಲ, ರಾಜ್ಯ ತರಬೇತಿ ಆಯುಕ್ತರು (ಗೈ), ಶ್ರೀಮತಿ ಬಿ.ಡಿ. ಶಾಂತ, ಎಲ್.ಟಿ.(ಗೈ), ಶ್ರೀಮತಿ ಎನ್.ಕೆ. ಛಾಯ, ಎಲ್.ಟಿ.(ಗೈ) ಅವರಿಗೆ ನನ್ನ ಕೃತಜ್ಞತೆಗಳು

- ಜಿ.ವಿ ರಾಮಲತಾ
ರೇಂಜರ್ ಲೀಡರ್
ಜಂಟಿ ರಾಜ್ಯ ಕಾರ್ಯದರ್ಶಿ (ಗೈ)

ಒಳ ಪುಟಗಳಲ್ಲಿ

ಮುಖ್ಯ ಆಯುಕ್ತರ ನುಡಿ v

ಆಶಯ ನುಡಿ vii

ಮುನ್ನುಡಿ viii

ನನ್ನ ನುಡಿ x

I. 14 ಅಂಶಗಳ ಕಾರ್ಯಕ್ರಮ ಆದರ್ಶಗಳು

1. ರೇಂಜರ್ / 3
2. ರೇಂಜರ್ ತಂಡ / 3
3. ರೇಂಜರ್ ನಾಯಕಿ ಮತ್ತು ಸಹನಾಯಕಿ / 4
4. ರೇಂ.ನಾ. ಮತ್ತು ಸ.ನಾ. – ಅರ್ಹತೆ / 5
5. ರೇಂ.ನಾ. ಮತ್ತು ಸ.ನಾ. – ಸಮವಸ್ತ್ರ / 6
6. ಜಲರೇಂಜರ್ ನಾ–ಸನಾ: ಸಮವಸ್ತ್ರ / 10
7. ವಾಯು ರೇಂಜರ್ ನಾ–ಸನಾ: ಸಮವಸ್ತ್ರ / 11
8. ಅಷ್ಟಕ ಪದ್ಧತಿ / 11
9. ಜೇಷ್ಠ ರೇಂಜರ್ ಸಂಗಾತಿ / 11
10. ರೇಂಜರ್ ಸಂಗಾತಿ / 11
11. ದ್ವಿತೀಯ ಸಂಗಾತಿ / 12
12. ತಂಡದ ಮಂತ್ರಾಲೋಚನಾ ಸಭೆ / 12
13. ರೇಂಜರ್ / 13
14. ರೇಂಜರ್ ಆಕಾಂಕ್ಷಿ / 13
15. ಪ್ರವೇಶದ ಪರೀಕ್ಷೆಗಳು / 14

16. ರೇಂಜರ್/ಜಲರೇಂಜರ್/ವಾಯು ರೇಂಜರ್ ಸಮವಸ್ತ್ರ / 19
17. ರೇಂಜರ್‌ಗಳ ಪ್ರಗತಿ ಯೋಜನೆ / 22
18. ನೈಪುಣ್ಯತಾ ಹುರಿಗಳು / 23
19. ನಿಪುಣ ಪದಕ ಪರೀಕ್ಷೆಗಳು / 23
20. ರಾಜ್ಯ ಪುರಸ್ಕಾರ ರೇಂಜರ್ / 29
21. ರಾಷ್ಟ್ರಪತಿ ರೇಂಜರ್ ಪ್ರಶಸ್ತಿ / 35
22. ರೇಂಜರ್ ಪ್ರಾವೀಣ್ಯತಾ ಪದಕಗಳು / 42
23. ಸೇವಾ ರೇಂಜರ್ / 46
24. ರೇಂಜರ್ಸ್ ಹೊರಸಂಚಾರ, ಚಾರಣ ಮತ್ತು ಶಿಬಿರಗಳು / 47

II. ವಿಶೇಷ ಶಾಖೆಗಳು

ಅ) ವಿಸ್ತರಿಸಿದ ಗೈಡಿಂಗ್ / 49
ಆ) ಜಲ ಗೈಡಿಂಗ್ / 50
ಇ) ವಾಯು ಗೈಡಿಂಗ್ / 50
ಈ) ಭಾರತ್ ಸ್ಕೌಟ್ ಮತ್ತು ಗೈಡ್ಸ್ ಸಾಹಸ ಸಂಘ / 50

III. ಅನುಬಂಧ

ಅ. ರೇಂಜರ್ ಪ್ರಾವೀಣ್ಯತಾ ಪದಕ ಪರೀಕ್ಷೆಗಳಿಗೆ ತಿಳಿಯಬೇಕಾದ ಮುಖ್ಯಾಂಶಗಳು / 56
ಆ. ಪ್ರಾದೇಶಿಕ ಆಸಕ್ತಿ ಪದಕ / 117
ಇ. ರೇಂಜರ್ ಪ್ರತಿಜ್ಞೆ ಮತ್ತು ನಿಯಮ / 121

ರೇಂಜರ್ ವಿಭಾಗ

14 ಅಂಶಗಳ ಕಾರ್ಯಕ್ರಮ ಆದರ್ಶಗಳು

ಯುವತಿಯು ರೇಂಜರ್ ಕಾರ್ಯಕ್ರಮವನ್ನು ಪೂರ್ಣಗೊಳಿಸುವುದರೊಳಗೆ ಈ ಕೆಳಕಂಡಂತೆ ಅವಳು ಸಾಮರ್ಥ್ಯವನ್ನು ಹೊಂದುತ್ತಾಳೆ.

1. ಗೈಡಿಂಗ್ ಅನ್ನು ಜೀವನಶೈಲಿಯನ್ನಾಗಿ ಅಳವಡಿಸಿಕೊಳ್ಳುತ್ತಾಳೆ.
2. ಸಕ್ರಿಯವಾಗಿ ಪಾಲ್ಗೊಳ್ಳುವ ನಾಗರಿಕಳಾಗುತ್ತಾಳೆ.
3. ತನ್ನ ಕೌಶಲ, ವೃತ್ತಿಪರ ಹಾಗೂ ಇತರೆ ಚಟುವಟಿಕೆಗಳನ್ನು ಉತ್ತಮಪಡಿಸಿಕೊಂಡು ತಾನೂ ಸ್ವಾವಲಂಬಿಯಾಗಿ ಇತರರಿಗೂ ಸಹಾಯ ಮಾಡುವಂತಹವಳಾಗುತ್ತಾಳೆ.
4. ಆತ್ಮಗೌರವವುಳ್ಳ ಇತರರ ಅನುಭವವನ್ನು ಗೌರವಿಸುವಂತಹ ಪ್ರಾಯೋಗಿಕ ವ್ಯಕ್ತಿಯಾಗಿ ಹೊರಹೊಮ್ಮುತ್ತಾಳೆ.
5. ಸಮುದಾಯ ಅಭಿವೃದ್ಧಿಯಲ್ಲಿ ತನ್ನ ಜವಾಬ್ದಾರಿಯಿದೆ ಎಂದು ಅರ್ಥಮಾಡಿಕೊಂಡು, ಸಮುದಾಯ ಅಭಿವೃದ್ಧಿ ಕಾರ್ಯಗಳನ್ನು ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಮಾಡುತ್ತಾಳೆ.
6. ಮಾನವರಿಗೂ, ದೇವರಿಗೂ ಸೇವೆ ಮಾಡುವಂತಹ ಸುಸಂಸ್ಕೃತ ಧಾರ್ಮಿಕ ಜೀವನವನ್ನು ನಡೆಸುತ್ತಾಳೆ.
7. ಭವಿಷ್ಯದಲ್ಲಿ ತನ್ನನ್ನು ಅರ್ಥಮಾಡಿಕೊಳ್ಳುವಂತಹ ಹಾಗೂ ಹೊಂದಿಕೊಳ್ಳುವಂತಹ ಜೀವನ ಸಂಗಾತಿಯನ್ನು ಆರಿಸಿಕೊಂಡು ಸಾಮರಸ್ಯದಿಂದ ವೈವಾಹಿಕ ಜೀವನವನ್ನು ನಡೆಸುತ್ತಾಳೆ.

8. ಸಾರ್ವಜನಿಕ ಸ್ವತ್ತನ್ನು ರಕ್ಷಿಸಲು ಶಕ್ತಿಮೀರಿ ಪ್ರಯತ್ನಿಸುತ್ತಾಳೆ.

9. ತನ್ನ ಸೇವೆಯನ್ನು ದೇಶಕ್ಕೆ ಸಲ್ಲಿಸಲು ಹಾಗೂ ವಿಶ್ವಭ್ರಾತೃತ್ವದೆಡೆ ಒಲುಮೆಯನ್ನು ಬೆಳೆಸಿಕೊಳ್ಳಲು ಸಿದ್ಧಳಾಗುತ್ತಾಳೆ. ಅಂದರೆ ಮಾನವರಲ್ಲಿ ಶಾಂತಿ ಹಾಗೂ ಸದ್ಭಾವನೆಯನ್ನು ಮೂಡಿಸುತ್ತಾಳೆ.

10. ರೇಂಜರಿಂಗ್ ಕೌಶಲ ಮತ್ತು ಮೌಲ್ಯಗಳನ್ನು ಉಪಯೋಗಿಸಿ ಇತರರಿಗೆ ಸಹಾಯ ಮಾಡುವಾಗ ಸಕಾರಾತ್ಮಕ ಭಾವನೆಗಳೊಂದಿಗೆ ಮಾನವೀಯ ಮೌಲ್ಯಗಳಿಗೆ ಒಲವನ್ನು ತೋರಿಸುತ್ತಾ ಶಕ್ತಿಮೀರಿ ಪ್ರಯತ್ನಿಸುತ್ತಾಳೆ.

11. ನಮ್ಮ ರಾಷ್ಟ್ರ ಪರಂಪರೆ ಹಾಗೂ ಸಂಸ್ಕೃತಿಯನ್ನುಳಿಸಿ ಬೆಳೆಸುವುದರಲ್ಲಿ ಮಾನವೀಯ ಮೌಲ್ಯಗಳಿಗೆ ಒಲುಮೆಯನ್ನು ತೋರಿಸುತ್ತಾ ತೊಡಗಿಸಿಕೊಳ್ಳುತ್ತಾಳೆ.

12. ರಾಷ್ಟ್ರೀಯ ಭಾವೈಕ್ಯತೆ, ಜನಸಂಖ್ಯಾ ಶಿಕ್ಷಣ, ಪರಿಸರ ಸಂರಕ್ಷಣೆ, ನೈರ್ಮಲ್ಯ ಮುಂತಾದ ರಾಷ್ಟ್ರೀಯ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಉತ್ತೇಜನ ನೀಡುತ್ತಾಳೆ.

13. ಇಷ್ಟಪಟ್ಟು ಗುಂಪಿನೊಂದಿಗೆ ಬೆಳೆಯುವಂತಹ ಸುರಿತ ನಾಯಕಿಯಾಗುತ್ತಾಳೆ.

14. ಜಾಗತಿಕ ಆಗುಹೋಗುಗಳಲ್ಲಿ ತಿಳುವಳಿಕೆಯನ್ನು ಹೊಂದಿರುತ್ತಾಳೆ.

1. ರೇಂಜರ್ (Ranger)

ಭಾರತೀಯ ಪೌರತ್ವ ಹೊಂದಿರುವ 15 ವರ್ಷ ತುಂಬಿರುವ 25 ವರ್ಷ ತುಂಬದೇ ಇರುವ ಯುವತಿಯು, ಈ ಹಿಂದೆ ಗೈಡ್ ಆಗಿರಲಿ, ಆಗದಿರಲಿ, ರೇಂಜರ್ ಆಕಾಂಕ್ಷಿ (Ranger aspirant) ಆಗಬಹುದು. ರೇಂಜರ್ ಆದವರು 25 ವರ್ಷಗಳ ನಂತರ ಸೇವಾರೇಂಜರ್ (Ranger in Service) ಆಗಿ 35 ವರ್ಷಗಳವರೆಗೆ ಮುಂದುವರಿಯಬಹುದು. 25 ವರ್ಷ ತುಂಬಿದ ಯುವತಿಯು ರೇಂಜರ್ ಆಗಲು ಅನರ್ಹಳು.

ಅಗತ್ಯವಿದ್ದಲ್ಲಿ ರಾಜ್ಯ ಪ್ರಧಾನ ಆಯುಕ್ತರ ಅನುಮತಿಯ ಮೇರೆಗೆ ರಾಷ್ಟ್ರಪತಿ ರೇಂಜರ್ ಆಗಲು ರೇಂಜರ್‌ಗಳಿಗೆ 3 ವರ್ಷ ಕಾಲಾವಕಾಶವನ್ನು ವಿಸ್ತರಿಸಬಹುದು. ಈ ಅನುಮತಿಯನ್ನು 25 ವರ್ಷ ತುಂಬುವುದರೊಳಗೆ ಪಡೆಯಬೇಕು ಮತ್ತು ರಾಷ್ಟ್ರೀಯ ಸಂಸ್ಥೆಗೆ ವರದಿಯನ್ನು ಸಲ್ಲಿಸಬೇಕು.

2. ರೇಂಜರ್ ತಂಡ (Ranger Team)

i) ರೇಂಜರ್ ತಂಡವು ಕನಿಷ್ಠ 6 ಮತ್ತು ಗರಿಷ್ಠ 24 ಸದಸ್ಯರನ್ನು ಹೊಂದಿರಬೇಕು.

ii) ಗುಂಪು ಇದ್ದರೆ, ರೇಂಜರ್ ತಂಡವು, ಬುಲ್‌ಬುಲ್ಸ್ ಮತ್ತು ಗೈಡ್ಸ್‌ಗಳನ್ನು ಹೊಂದಿರುವ ಗುಂಪಿನ ಸದಸ್ಯ ತಂಡವಾಗುತ್ತದೆ. ಗುಂಪು ಇಲ್ಲದಿದ್ದರೆ ರೇಂಜರ್ ತಂಡ ಒಂದನ್ನೇ ಗುಂಪು ಎಂದು ಪರಿಗಣಿಸಲಾಗುವುದು.

iii) ರೇಂಜರ್ ತಂಡವು ಈ ವಿಭಾಗದ ವಿಧಿಯ ಪ್ರಕಾರ ನೋಂದಾಯಿಸಿ ಕೊಳ್ಳಬೇಕು.

iv) ಎಲ್ಲ ರೇಂಜರ್ ತಂಡಕ್ಕೂ ಒಂದು ಹೆಸರಿರಬೇಕು. ಗುಂಪಿನ ಸದಸ್ಯತ್ವ ಹೊಂದಿದ್ದರೆ, ತಂಡವು ಆ ಗುಂಪಿನ ಹೆಸರನ್ನೇ ಪಡೆಯುವುದು. ಇಲ್ಲವಾದರೆ ಸ್ಥಳೀಯ ಸಂಸ್ಥೆಯ ಅಥವಾ ಇತಿಹಾಸ ಪ್ರಸಿದ್ಧರಾದ ಮಹಿಳೆಯರ ಹೆಸರನ್ನು ಪಡೆಯುವುದು. ಪ್ರತಿ ತಂಡವೂ ಸ್ಥಳೀಯ ಅಥವಾ ಜಿಲ್ಲಾ ಸಂಸ್ಥೆಯು ಗೊತ್ತುಪಡಿಸಿದ ಕ್ರಮಸಂಖ್ಯೆಯನ್ನು ಹೊಂದಿರುವುದು.

3. ರೇಂಜರ್ ನಾಯಕಿ ಮತ್ತು ಸಹನಾಯಕಿ (Ranger Leader & Assistant Leader)

i) ಪ್ರತಿತಂಡವೂ ಒಂದು ರೇಂಜರ್ ನಾಯಕಿಯನ್ನು ಹೊಂದಿರಬೇಕು. 6 ರೇಂಜರ್ಸ್‌ಗೆ ಒಂದು ಸಹನಾಯಕಿಯಂತೆ, ಒಂದಕ್ಕಿಂತ ಹೆಚ್ಚು ಸಹನಾಯಕಿಯರನ್ನು ಹೊಂದಿರಬಹುದು.

ii) ರಾಜ್ಯ ಪ್ರಧಾನ ಆಯುಕ್ತರು ಸ್ಥಳೀಯ ಅಥವಾ ಜಿಲ್ಲಾ ಸಂಸ್ಥೆಯ ಮತ್ತು ಜಿಲ್ಲಾ ಗೈಡ್ ಆಯುಕ್ತರ ಶಿಫಾರಸ್ಸಿನ ಮೇರೆಗೆ, ಜಿಲ್ಲಾ ಗೈಡ್ ಆಯುಕ್ತರೊಡನೆ ಸಮಾಲೋಚಿಸಿ, ನಾಯಕಿ ಮತ್ತು ಸಹನಾಯಕಿ ಯರನ್ನು ನೇಮಕ ಮಾಡುವರು. ನೇಮಕ ಮಾಡಿದ ನಾಯಕಿ ಮತ್ತು ಸಹನಾಯಕಿಯರಿಗೆ ಸನ್ನದ್ದನ್ನು ನೀಡಲಾಗುತ್ತದೆ.

iii) ಗುಂಪಿನ ಸದಸ್ಯರಾಗಿದ್ದಲ್ಲಿ ಗುಂಪಿನ ನಾಯಕರ ಮೇಲ್ವಿಚಾರಣೆಯಲ್ಲಿ ರೇಂಜರ್ ನಾಯಕಿ ಮತ್ತು ಸಹನಾಯಕಿ ಎಲ್ಲರಿಗೂ ಅನ್ವಯಿಸುವ ಸಾಮಾನ್ಯ ಕಾರ್ಯಕ್ರಮಗಳನ್ನು ನಿರ್ವಹಿಸುವರು. ಆದರೆ ರೇಂಜರ್ ತಂಡದ ಕಾರ್ಯಕ್ರಮಗಳಿಗೆ ಮತ್ತು ಆಗುಹೋಗುಗಳಿಗೆ ರೇಂಜರ್ ನಾಯಕಿಯರೇ ಜವಾಬ್ದಾರರಾಗುತ್ತಾರೆ. ರೇಂಜರ್ ತಂಡಕ್ಕೆ ಸಂಬಂಧಿಸಿದ ಹಣಕಾಸು, ಶಿಸ್ತು ಮತ್ತು ಆಡಳಿತದ ವಿಚಾರಗಳನ್ನು

ತಂಡದ ಮಂತ್ರಾಲೋಚನಾ ಸಭೆಯಲ್ಲಿ (Team Council) ಚರ್ಚಿಸಲಾಗುತ್ತದೆ. ಸಹನಾಯಕಿಯರು ತಂಡದ ಕೆಲಸ ಕಾರ್ಯಗಳಲ್ಲಿ ನಾಯಕಿಗೆ ಸಹಾಯ ಮಾಡುವರು.

4. ರೇಂಜರ್ ನಾಯಕಿ ಮತ್ತು ಸಹನಾಯಕಿಯರ ಅರ್ಹತೆಗಳು

i) 21 ವರ್ಷ ತುಂಬಿದ ಮಹಿಳೆ ರೇಂಜರ್ ನಾಯಕಿ ಅಥವಾ ಸಹನಾಯಕಿಯಾಗಬಹುದು.

ii) ರೇಂಜರ್ ನಾಯಕಿ/ ಸಹನಾಯಕಿಯು ಯಾವುದಾದರೂ ವಿಷಯದಲ್ಲಿ ಪದವಿ ಅಥವಾ ತತ್ಸಮಾನವಾದ ಅರ್ಹತೆಯನ್ನು ಹೊಂದಿರಬೇಕು. ವಿಶೇಷ ಪರಿಸ್ಥಿತಿಗಳಲ್ಲಿ ರಾಜ್ಯ ಮುಖ್ಯ ಆಯುಕ್ತರು ಈ ನಿಬಂಧನೆಯನ್ನು ಮೆಟ್ರಿಕ್ಯುಲೇಷನ್ (Matriculation)ವರೆಗೆ ಒಪ್ಪಬಹುದು.

iii) ನಾಯಕಿಯು ಸತ್‌ಚಾರಿತ್ರ್ಯ, ಸನ್ನಡತೆ ಮತ್ತು ಉತ್ತಮ ಪೂರ್ವಇತಿಹಾಸವನ್ನು ಹೊಂದಿರಬೇಕು.

iv) ನಾಯಕಿಯರಿಗೆ ಗೈಡ್ ಚಳವಳಿಯ ಅರಿವಿರಬೇಕು. ಈ ಚಳವಳಿಯಲ್ಲಿ ಅನುಸರಿಸುವ ತತ್ವಗಳ ಬಗ್ಗೆಯೂ ಅರಿವಿರಬೇಕು. ಚಳವಳಿಯ ಧಾರ್ಮಿಕ ಹಾಗೂ ನೈತಿಕ ಬುನಾದಿಯನ್ನು ಮೆಚ್ಚಬೇಕು ಹಾಗೂ ಗುರಿ, ನೀತಿ, ನಿಯಮ ಮತ್ತು ಸಂಘಟನೆಯ ಬಗ್ಗೆ ಅರಿತು ತನ್ನ ಕಾರ್ಯದಲ್ಲಿ ಇವುಗಳನ್ನು ಅಳವಡಿಸಿಕೊಳ್ಳಬೇಕು.

v) ಇವರಿಗೆ ಯುವತಿಯರೊಂದಿಗೆ ಒಡನಾಡುವ ವಿಶೇಷ ಆಸಕ್ತಿ ಇರಬೇಕು.

vi) ಇವರು ರಾಷ್ಟ್ರೀಯ ಸ್ಕೌಟ್ ಗೈಡ್ ಸಂಸ್ಥೆಯು ಗೊತ್ತುಪಡಿಸಿದ ಎಲ್ಲಾ ತರಬೇತಿಗಳನ್ನು ತೃಪ್ತಿಕರವಾಗಿ ನೇಮಕ ಮಾಡಿದ ಎರಡು ವರ್ಷದೊಳಗೆ ಸಂಪೂರ್ಣಗೊಳಿಸಬೇಕು.

vii) ರೇಂಜರ್ ತಂಡದ ಚಟುವಟಿಕೆಗಳಿಗೆ ಪ್ರತ್ಯೇಕ ಕೊಠಡಿಯನ್ನು ಗೊತ್ತುಪಡಿಸಿಕೊಳ್ಳಬೇಕು.

viii) ಇವರಿಗೆ ತಮ್ಮ ಸಮುದಾಯದ ಸಾಮಾಜಿಕ ಅವಶ್ಯಕತೆಗಳು ತಿಳಿದಿರಬೇಕು.

5. ರೇಂಜರ್ ನಾಯಕಿ ಮತ್ತು ಸಹನಾಯಕಿಯರ ಸಮವಸ್ತ್ರ

ಅ) **ಕಡ್ಡಾಯ:** ಸಮವಸ್ತ್ರವನ್ನು ಈ ಕೆಳಕಂಡಂತೆ ಧರಿಸಬೇಕು:

ಸಲ್ವಾರ್–ಕಮೀಜ–ದುಪ್ಪಟ್ಟ: ಅಪಾರದರ್ಶಕ ಸಾದಾ ಬಿಳಿಯ ವಸ್ತ್ರದ ಕಮೀಜ ಮತ್ತು ಸಲ್ವಾರ್ ಧರಿಸಬೇಕು. ಕಮೀಜ್‌ನ ಉದ್ದ ಮೊಳಕಾಲಿನವರೆಗಿರಬೇಕು. ಇದರ ಮೇಲೆ ಎರಡು ಮುಚ್ಚಿಕೆ ಇರುವ ಜೇಬುಗಳು ಮತ್ತು ಪಾರ್ಶ್ವದಲ್ಲಿ ಎರಡು ಪಾರ್ಶ್ವಜೇಬುಗಳು (ಜುಬ್ಬದ ಜೇಬಿನಂತೆ) ಇರಬೇಕು. ಮೊಳಕೈಗಿಂತ ತೋಳಿನ ಉದ್ದ 8 ಸೆಂ.ಮೀ. ಮೇಲಿರಬೇಕು. ಅಂಚನ್ನು 4 ಸೆಂ.ಮೀ. ಮೇಲಕ್ಕೆ ಮಡಿಚಿ ಹೊಲಿದಿರಬೇಕು. ತೆರೆದ ಕ್ರೀಡಾ ಕತ್ತುಪಟ್ಟಿ (open sports collar) ಮತ್ತು ಎರಡು ಭುಜಪಟ್ಟಿ (Epaulettes) ಇರಬೇಕು.

ಸಲ್ವಾರ್ ಮತ್ತು ಕಮೀಜ ಬಿಗಿಯಾಗಿರಬಾರದು. ದುಪ್ಪಟ್ಟವನ್ನು ಕಡು (dark) ಆಕಾಶನೀಲಿ ಬಣ್ಣದ ಅಪಾರದರ್ಶಕ ವಸ್ತ್ರದಿಂದ ತಯಾರಿಸಿಕೊಳ್ಳಬೇಕು.

ಅಥವಾ

ಗಿಡ್ಡ ಲಂಗ ಮತ್ತು ರವಿಕೆ (Midi Skirt & Blouse)

ಗಿಡ್ಡಲಂಗವನ್ನು ಅಪಾರದರ್ಶಕ ಕಡು ಆಕಾಶನೀಲಿ ಬಣ್ಣದ ವಸ್ತ್ರದಿಂದ ಹೊಲಿಸಿಕೊಳ್ಳಬೇಕು. ಎರಡು ಪಾರ್ಶ್ವಜೇಬುಗಳು ಇರಬೇಕು. ಹಿಂದೆ ಸ್ವಲ್ಪ ಸೀಳಿರಬೇಕು. ಮಿಡಿಯ ಉದ್ದ ಮೊಣಕಾಲು ಮತ್ತು ಪಾದದ ಮಧ್ಯದಷ್ಟಿರಬೇಕು.

ರವಿಕೆಯನ್ನು ಅಪಾರದರ್ಶಕ ಸಾದಾ ಬಿಳಿಯ ವಸ್ತ್ರದಿಂದ ತಯಾರಿಸಿಕೊಳ್ಳಬೇಕು. ಎರಡು ಮುಚ್ಚಿಕೆಯುಳ್ಳ ಮೇಲುಜೇಬು ಇರಬೇಕು. ಇದರ ತೋಳು ಮೊಣಕೈಯಿಂದ 8 ಸೆಂ.ಮೀ. ಮೇಲಿರಬೇಕು. ಅಂಚನ್ನು 4 ಸೆಂ.ಮೀ. ಮೇಲಕ್ಕೆ ಮಡಿಚಿ ಹೊಲಿದಿರಬೇಕು. ತೆರೆದ ಕ್ರೀಡಾ ಕತ್ತುಪಟ್ಟಿ ಮತ್ತು ಎರಡು ಭುಜಪಟ್ಟಿ (Epaulettes) ಇರಬೇಕು. ಉದ್ದ ಸೊಂಟದಿಂದ 8 ಸೆಂ.ಮೀ. ಕೆಳಗಿರಬೇಕು. ರವಿಕೆಯ ಪಾರ್ಶ್ವಗಳು ಸೊಂಟದಿಂದ ಕೆಳಕ್ಕೆ ಸೀಳಿರಬೇಕು. ಉಡುಪು ಬಿಗಿಯಾಗಿರಬಾರದು.

ಸೀರೆ ಮತ್ತು ರವಿಕೆ

ಸೀರೆ ಅಪಾರದರ್ಶಕ ಕಡು ಆಕಾಶನೀಲಿ ಬಣ್ಣದ್ದಾಗಿರಬೇಕು.

ರವಿಕೆಯನ್ನು ಅಪಾರದರ್ಶಕ ಸಾದಾ ಬಿಳಿಯ ವಸ್ತ್ರದಿಂದ ತಯಾರಿಸಿಕೊಳ್ಳಬೇಕು. ಎರಡು ಮುಚ್ಚಿಕೆಯುಳ್ಳ ಮೇಲುಜೇಬು ಇರಬೇಕು. ಇದರ ತೋಳು ಮೊಣಕೈಯಿಂದ 8 ಸೆಂ.ಮೀ. ಮೇಲಿರಬೇಕು. ಅಂಚನ್ನು 4 ಸೆಂ.ಮೀ. ಮೇಲಕ್ಕೆ ಮಡಿಚಿ ಹೊಲಿದಿರಬೇಕು. ತೆರೆದ ಕ್ರೀಡಾ ಕತ್ತುಪಟ್ಟಿ ಮತ್ತು ಎರಡು ಭುಜಪಟ್ಟಿ (Epaulettes) ಇರಬೇಕು. ಉದ್ದ ಸೊಂಟದಿಂದ 8 ಸೆಂ.ಮೀ. ಕೆಳಗಿರಬೇಕು. ರವಿಕೆಯ ಪಾರ್ಶ್ವಗಳು ಸೊಂಟದಿಂದ ಕೆಳಕ್ಕೆ ಸೀಳಿರಬೇಕು. ಉಡುಪು ಬಿಗಿಯಾಗಿರಬಾರದು.

ii) **ಸೊಂಟಪಟ್ಟಿ (Belt):** ರಾಷ್ಟ್ರೀಯ ಸಂಸ್ಥೆ ಸರಬರಾಜು ಮಾಡುವ, ಹಿತ್ತಾಳೆ ಅಧಿಕೃತ ಜೋಡಕ (Buckle) ಹೊಂದಿರುವ, ಕಂದುಬಣ್ಣದ ನೈಲೆಕ್ಸ್ ಸೊಂಟಪಟ್ಟಿಯನ್ನು ಧರಿಸುವುದು.

iii) **ಕಂಠವಸ್ತ್ರ (Scraf):** ಹಸಿರು, ನೇರಳೆ ಮತ್ತು ಹಳದಿ ಬಣ್ಣಗಳನ್ನು ಹೊರತುಪಡಿಸಿ, ಸ್ಥಳೀಯ ಅಥವಾ ಜಿಲ್ಲಾ ಸಂಸ್ಥೆ ಅನುಮೋದಿಸಿದ

ನಿಮ್ಮ ಆಯ್ಕೆಯ ಬಣ್ಣದ ತ್ರಿಭುಜಾಕಾರದ ಕಂಠವಸ್ತ್ರವನ್ನು ನಿಮ್ಮ ತಂಡಕ್ಕೆ ಮಾಡಿಸುವುದು. ಇದನ್ನು ಭುಜ ಮತ್ತು ಕತ್ತುಪಟ್ಟಿ ಸುತ್ತುವರಿಸಿ ಉಂಗುರದ (ಕಂಠವಸ್ತ್ರದ ಉಂಗುರ–Woggle) ಮೂಲಕ ಹಾಯಿಸಿ ಹಾಕಿಕೊಳ್ಳಬೇಕು. ಕಂಠವಸ್ತ್ರವು ಕನಿಷ್ಠ 70 ಸೆಂ.ಮೀ. ಗರಿಷ್ಠ 80 ಸೆಂ.ಮೀ. ಪಾರ್ಶ್ವವುಳ್ಳ ತ್ರಿಕೋನ ವಸ್ತ್ರವಾಗಿರಬೇಕು.

iv) **ಕಾಲುಚೀಲ**: ಕಂದುಬಣ್ಣದ (Camel Colour) ಕಾಲುಚೀಲ ಧರಿಸುವುದು.

v) **ಪಾದರಕ್ಷೆ**: ಕಪ್ಪು ಚರ್ಮದ ಪಾದಮುಚ್ಚುವ ಚರ್ಮದ ಅಥವಾ ಕ್ಯಾನ್‌ವಾಸ್ ಬೂಟು ಧರಿಸುವುದು. ಆರೋಗ್ಯದ ಕಾರಣಗಳಿದ್ದರೆ, ಎತ್ತರದ ಹಿಮ್ಮಡಿ ಇಲ್ಲದ ಕಪ್ಪು ಬಣ್ಣದ 'ಸ್ಯಾಂಡಲ್ಸ್' (ಕಟ್ಟುವ ಚಪ್ಪಲಿ) ಅನ್ನು ಉಪಯೋಗಿಸಬಹುದು.

vi) **ಕೇಶಾಲಂಕಾರ**: ಕೇಶವನ್ನು ಅಚ್ಚುಕಟ್ಟಾಗಿ ಕಟ್ಟಿರಬೇಕು. ಅಥವಾ ಸಾದಾ ಕಪ್ಪು ಕೇಶಬಂಧಕ (Hair Band) (ಭುಜದ ಮಟ್ಟಕ್ಕೆ ಕೂದಲಿರುವವರು) ಧರಿಸುವುದು.

vii) **ಸದಸ್ಯತ್ವದ ಪದಕ**: ಹಸಿರು ಹಿನ್ನೆಲೆಯ ಮೇಲೆ ಹಳದಿ ಬಣ್ಣದ ಫ್ಲೂರಡೆಲಿಸ್, ಅದರ ಮಧ್ಯೆ ತ್ರಿದಳ, ಅದರ ಮಧ್ಯೆ ಅಶೋಕ ಚಕ್ರ ಹೊಂದಿರುವ ಬಟ್ಟೆಯ ಭಾರತ ಸ್ಕೌಟ್ ಮತ್ತು ಗೈಡ್ ಲಾಂಛನವನ್ನು ಎಡತೋಳಿನ ಮಧ್ಯೆ ಧರಿಸುವುದು.

viii) **ಭುಜಪದಕ** : ಎಡ ಬಲಭುಜಪಟ್ಟಿಯ ಕೆಳಗೆ ಕಿರುಬಾಗಿದ ಬಿಳಿಯ 6ರಿಂದ 8 ಸೆಂ.ಮೀ. ಉದ್ದದ ಮತ್ತು 1.5 ಸೆಂ.ಮೀ. ಅಗಲದ ಪಟ್ಟಿಯ ಮೇಲೆ ಕೆಂಪುಬಣ್ಣದಲ್ಲಿ ಗುಂಪಿನ ಸಂಖ್ಯೆ ಜಿಲ್ಲಾ/ರಾಜ್ಯದ ಹೆಸರನ್ನು ಹೊಂದಿರುವ ಪಟ್ಟಿಯನ್ನು ಧರಿಸುವುದು.

ix) **ವಿಶ್ವಗೈಡ್ ಪದಕ** : ವಸ್ತ್ರಪಟ್ಟಿಯು ವಿಶ್ವಗೈಡ್ ಪದಕವನ್ನು ಬಲತೋಳಿನ ಮಧ್ಯದಲ್ಲಿ ಧರಿಸುವುದು.

x) ರಾಷ್ಟ್ರೀಯ ಸಂಸ್ಥೆಯವರು ಸರಬರಾಜು ಮಾಡಿರುವ ತ್ರಿವರ್ಣ ಧ್ವಜದೊಂದಿಗೆ ದಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಪಟ್ಟಿಯನ್ನು ಬಲಜೇಬಿನ ಮೇಲೆ ಧರಿಸುವುದು. ಇದರ ಅಳತೆ 11 ಸೆಂ.ಮೀ. × 2 ಸೆಂ.ಮೀ. ಮತ್ತು ಧ್ವಜದ ಅಳತೆ 3 ಸೆಂ.ಮೀ × 2 ಸೆಂ.ಮೀ. ಇರಬೇಕು.

xi) **ಉಣ್ಣೆಯ ಮೇಲಂಗಿ (Cordigan)**: ಸಾದಾ ಕಪ್ಪು ಬಣ್ಣದ ಸ್ವೆಟರ್ ಧರಿಸುವುದು. ಕಾಲಕ್ಕೆ ಅನುಗುಣವಾಗಿ ಅರೆ ತೋಳಿನ ಕಪ್ಪು ಉಣ್ಣೆ ಅಂಗಿಯನ್ನು ಧರಿಸಬಹುದು.

ಆ. ಐಚ್ಛಿಕವಾದುವು (Optional)

i) **ಶಿಬಿರದ ಸಮವಸ್ತ್ರ (Camp Uniform)**: ವಿಧಿಪೂರ್ವಕ ಸಮಾರಂಭ ಹೊರತುಪಡಿಸಿ, ಶಿಬಿರದಲ್ಲಿ ಕಡುನೀಲಿ ಬಣ್ಣದ ಅಪಾರದರ್ಶಕ ಸಲ್ವಾರ್ ಕಮೀಜ್ ಮತ್ತು ದುಪ್ಪಟ್ಟ ಧರಿಸಬಹುದು. ಮೇಲೆ ತಿಳಿಸಿದ ಮಾದರಿಯನ್ನು ಅನುಸರಿಸುವುದು.

ii) **ಹೊರ ಸಂಚಾರದ ಸಮವಸ್ತ್ರ (During Outing & Hiking)**: ಹೊರ ಸಂಚಾರ ಅಥವಾ ಚಾರಣದ ಸಮಯದಲ್ಲಿ ಕಡುನೀಲಿ ಬಣ್ಣದ ಜೀನ್ಸ್, ರಾಷ್ಟ್ರೀಯ ಸಂಸ್ಥೆಯವರಿಂದ ಸರಬರಾಜಾದ ಜೇಬಿನ ಮೇಲೆ **'Bharat Scouts & Guides'** ಲಾಂಛನವಿರುವ ಆಕಾಶ ನೀಲಿ ಬಣ್ಣದ 'T' ಷರ್ಟ್‌ನ್ನು ಧರಿಸಬಹುದು.

iii) ಹೊರ ಸಂಚಾರದಲ್ಲಿ 'P' Capಅನ್ನು ಧರಿಸಬಹುದು.

iv) **ಕರಿಯ ಪೌಚ್** (Pouch): ಕರಿಯ ಪೌಚ್ (ಅಥವಾ ಸಣ್ಣಚೀಲ) ಧರಿಸಬಹುದು. ಆದರೆ ಪೌಚನ್ನು ಯಾವ ವಿಧಿಪೂರ್ವಕ ಸಮಾರಂಭದಲ್ಲಿಯೂ ಧರಿಸಬಾರದು.

v) **ಲೋಹದ ಪದಕ**: ಸಮವಸ್ತ್ರ ಧರಿಸದೇ ಇರುವಾಗ ಲೋಹದ ಸದಸ್ಯತ್ವದ ಲೋಹದ ಪದಕವನ್ನು ಧರಿಸಬಹುದು.

vi) **ಸೂತ್ರ ಮತ್ತು ಸೀಟಿ** : ಶ್ವೇತ ಸೂತ್ರದೊಂದಿಗೆ ಸೀಟಿಯನ್ನು ಕತ್ತಿನಲ್ಲಿ ಧರಿಸಬಹುದು.

vii) **ಒಡವೆಗಳು**: ಅವರವರ ಧರ್ಮದಲ್ಲಿ ಧರಿಸಲೇಬೇಕಾದ ಒಡವೆಯನ್ನು ಬಿಟ್ಟು ಬೇರೆ ಒಡವೆಗಳನ್ನು ಧರಿಸಬಾರದು.

viii) **ಶ್ರೇಣಿ ಪದಕ (Rank Badge)**: ಪದಕವು ಶ್ವೇತಲೋಹದ ವಿವಿಧ ಬಣ್ಣಗಳ ಭಾರತ್ ಸ್ಕೌಟ್ ಮತ್ತು ಗೈಡ್ ಲಾಂಛನವನ್ನು ಹೊಂದಿರುತ್ತದೆ. ಬಣ್ಣಗಳು ಈ ಕೆಳಗಿನಂತಿವೆ.

ಅ) **ರೇಂಜರ್ ನಾಯಕಿ ಪದಕ**: ಕೆಂಪುಬಣ್ಣದ ಲಾಂಛನದ ಸುತ್ತಲೂ ಕೆಂಪುಬಣ್ಣದ ಅಂಚನ್ನು ಹೊಂದಿರುತ್ತದೆ. ಇದನ್ನು ಬಲಜೇಬಿನಿಂದ (Saree Blouse ಅಥವಾ Skirt Blouse) 4 ಸೆಂ.ಮೀ. ಮೇಲೆ ಧರಿಸುವುದು. ಸಲ್ವಾರ್ ಕಮೀಜ್ ಧರಿಸುವವರು ದುಪ್ಪಟ್ಟದ ಬಲಭಾಗದ ಮೇಲೆ ಧರಿಸುವುದು.

ಆ) **ಸಹನಾಯಕಿ ಪದಕ**: ಸಹನಾಯಕಿಯ ಪದಕವು ಕೆಂಪು ಬಣ್ಣದ ಲಾಂಛನದ ಸುತ್ತಲೂ ಹಸಿರು ಅಂಚನ್ನು ಹೊಂದಿರುತ್ತದೆ. ಇದನ್ನು ಮೇಲೆ ಹೇಳಿದಂತೆ ಧರಿಸುವುದು.

6. ಜಲರೇಂಜರ್ ನಾಯಕಿ–ಸಹನಾಯಕಿ: ಸಮವಸ್ತ್ರ

ಇವರೂ ಸಹ ರೇಂಜರ್ ನಾಯಕಿ ಮತ್ತು ಸಹನಾಯಕಿಯರ ಸಮವಸ್ತ್ರದ ಮಾದರಿಯನ್ನೇ ಧರಿಸುವುದು ಬಲಜೇಬಿನ ಮೇಲೆ ಜಲರೇಂಜರ್ ಪದಕವನ್ನು ಧರಿಸುವುದು.

7. ವಾಯು ರೇಂಜರ್ ನಾಯಕಿ–ಸಹನಾಯಕಿ: ಸಮವಸ್ತ್ರ

ಇವರೂ ಸಹ ರೇಂಜರ್ ನಾಯಕಿ ಮತ್ತು ಸಹನಾಯಕಿಯರ ಸಮವಸ್ತ್ರದ ಮಾದರಿಯನ್ನೇ ಧರಿಸುವುದು ಮತ್ತು ಬಲಜೇಬಿನ ಮೇಲೆ ವಾಯು ರೇಂಜರ್ ಪದಕವನ್ನು ಧರಿಸುವುದು.

8. ಅಷ್ಟಕ ಪದ್ಧತಿ (Patrol System)

i) ರೇಂಜರ್ ತಂಡದಲ್ಲಿ ಅಷ್ಟಕಪದ್ಧತಿ ಕಡ್ಡಾಯವಲ್ಲ.

ii) ರೇಂಜರ್ ತಂಡವು ಇಚ್ಛಿಸಿದಲ್ಲಿ, ಅವಶ್ಯಕವಾದಾಗ ನಿರ್ದಿಷ್ಟ ಉದ್ದೇಶಕ್ಕಾಗಿ, ಯೋಜನಾ ಚಟುವಟಿಕೆಗಳಿಗಾಗಿ ಅಥವಾ ಶಾಶ್ವತವಾಗಿ ಅಷ್ಟಕಗಳನ್ನು ರಚಿಸಿಕೊಳ್ಳಬಹುದು.

9. ಜೇಷ್ಠ ರೇಂಜರ್ ಸಂಗಾತಿ (Senior Ranger Mate):

i) ತಂಡವು ಇಚ್ಛಿಸಿದಲ್ಲಿ ಒಬ್ಬ ರೇಂಜರ್ ಸಂಗಾತಿಯನ್ನು ಜೇಷ್ಠ ರೇಂಜರ್ ಸಂಗಾತಿಯನ್ನಾಗಿ ನೇಮಕ ಮಾಡುವುದು. ಜೇಷ್ಠ ರೇಂಜರ್ ಸಂಗಾತಿಯು ರೇಂಜರ್ ನಾಯಕಿಗೆ ಸಹಾಯ ಮಾಡುವಳು.

ii) ಇವಳು ರೇಂಜರ್ ಸಮವಸ್ತ್ರ ಪದಕಗಳನ್ನು ಧರಿಸುವುದರ ಜೊತೆಗೆ 1.5 ಸೆಂ.ಮೀ. ಅಗಲದ 3 ಕೆಂಪು ಪಟ್ಟಿಯನ್ನು 1 ಸೆಂ.ಮೀ. ಅಂತರ ದಲ್ಲಿ ಎಡತೋಳಿನ ಅಂಚಿನ ಮೇಲ್ಭಾಗದಲ್ಲಿ ಹೊಲಿದುಕೊಳ್ಳುವುದು.

10. ರೇಂಜರ್ ಸಂಗಾತಿ (Ranger Mate)

ರೇಂಜರ್ ತಂಡನಾಯಕಿ ಅನುಮೋದನೆ ಪಡೆದು ರೇಂಜರ್ ಸಂಗಾತಿಯನ್ನು ಪ್ರತಿವರ್ಷವೂ ಚುನಾಯಿಸತಕ್ಕದ್ದು. 5ರಿಂದ 6 ರೇಂಜರ್ಸ್‌ಗಳಿಗೆ ಒಬ್ಬ ರೇಂಜರ್ ಸಂಗಾತಿಯನ್ನು ಮಾಡಲಾಗುವುದು. ಸಂಗಾತಿಯು ರೇಂಜರ್ ನಾಯಕಿಗೆ ತಂಡದ ಕಾರ್ಯಕಲಾಪಗಳಲ್ಲಿ

ಸಹಾಯಮಾಡುವಳು. ರೇಂಜರ್ ಸಂಗಾತಿಯು ರೇಂಜರ್ ಸಮವಸ್ತ್ರ, ಪದಕಗಳನ್ನು ಧರಿಸಿ 1.5 ಸೆಂ.ಮೀ. ಇರುವ ಎರಡು ಕೆಂಪುತೋಳುಪಟ್ಟಿಯನ್ನು ಎಡತೋಳಿನ ಮೇಲೆ ಅಂಚಿನ ಮೇಲ್ಭಾಗದಲ್ಲಿ 1 ಸೆಂ.ಮೀ. ಅಂತರದಲ್ಲಿ ಮೇಲೆ ಧರಿಸುವಳು.

11. ದ್ವಿತೀಯಳು (Second)

ರೇಂಜರ್ ಸಂಗಾತಿ ತನ್ನ ಕೆಲಸಕಾರ್ಯಗಳಲ್ಲಿ ಸಹಾಯಕ್ಕಾಗಿ ದ್ವಿತೀಯೆಯನ್ನು ನೇಮಕ ಮಾಡಿಕೊಳ್ಳುವಳು. ಇವಳು ಸಹ ರೇಂಜರ್ ಸಮವಸ್ತ್ರವನ್ನು ಧರಿಸಿ 1.5 ಸೆಂ.ಮೀ. ಇರುವ ಒಂದು ಕೆಂಪುತೋಳುಪಟ್ಟಿಯನ್ನು ಎಡತೋಳಿನ ಅಂಚಿನ ಮೇಲ್ಭಾಗದಲ್ಲಿ ಧರಿಸುವಳು.

12. ತಂಡದ ಮಂತ್ರಾಲೋಚನಾ ಸಭೆ (Team Council)

i) ಈ ಸಭೆಗೆ ಸನ್ನದ್ದು ಹೊಂದಿರುವ ರೇಂಜರ್ ನಾಯಕಿ, ಸಹನಾಯಕಿಯರು, ರೇಂಜರ್ ಸಂಗಾತಿಯರು ಮತ್ತು ತಂಡವು ಚುನಾಯಿಸಿದ ರೇಂಜರ್‌ಗಳು ಸದಸ್ಯರಾಗಿರುವರು. ಯಾರಾದರೊಬ್ಬ ರೇಂಜರ್ ಸಂಗಾತಿ ಅಥವಾ ರೇಂಜರ್, ತಂಡದ ಮಂತ್ರಾಲೋಚನಾ ಸಭೆಯ ಅಧ್ಯಕ್ಷೆಯಾಗಿಯೂ ಮತ್ತು ಮತ್ತೊಬ್ಬಳು ಕಾರ್ಯದರ್ಶಿ ಯಾಗಿಯೂ ಕೆಲಸ ಮಾಡುವರು.

ii) ಕಾರ್ಯಯೋಜನೆಗಳನ್ನು ರೂಪಿಸುವ, ಶಿಸ್ತಿನ ಸಮಸ್ಯೆಗಳು, ಹಣಕಾಸು ವ್ಯವಹಾರ ಹಾಗೂ ಆಡಳಿತಾತ್ಮಕ ವಿಷಯಗಳನ್ನು ಈ ಸಭೆಯಲ್ಲಿ ಚರ್ಚಿಸಿ ತೀರ್ಮಾನಗಳನ್ನು ಕೈಗೊಳ್ಳಲಾಗುವುದು.

ಸೂಚನೆ: ರೇಂಜರ್ ತಂಡದಲ್ಲಿ ರೇಂಜರ್‌ಗಳ ಸಂಖ್ಯೆ ಕಡಿಮೆ ಇದ್ದು ತಂಡದ ಮಂತ್ರಾಲೋಚನಾ ಸಭೆಯನ್ನು ರೂಪಿಸುವ ಅವಶ್ಯಕತೆ ಇಲ್ಲದೆ ಇದ್ದರೆ ಪೂರ್ಣ ತಂಡವು ಈ ಸಭೆಯಲ್ಲಿ

ಭಾಗವಹಿಸುವುದು. ಆದರೆ ರೇಂಜರ್ ಮತ್ತು ರೇಂಜರ್ ಆಕಾಂಕ್ಷೆಗೆ ಸಂಬಂಧಿಸಿದ ವಿಷಯಗಳನ್ನು ರೇಂಜರ್‌ಗಳೇ ನೋಡಿಕೊಳ್ಳುವರು/ನಿರ್ಧರಿಸುವರು.

13. i) **ರೇಂಜರ್:** ಭಾರತೀಯ ಪೌರತ್ವ ಹೊಂದಿರುವ, ಹಿಂದೆ ಗೈಡ್ ಆಗಿರುವ ಅಥವಾ ಗೈಡ್ ಆಗದೆ ಇರುವ, 15 ವರ್ಷ ತುಂಬಿರುವ, 25 ವರ್ಷ ತುಂಬದೆ ಇರುವ ಯುವತಿಯನ್ನು ರೇಂಜರ್ ಆಕಾಂಕ್ಷಿ ಪಟ್ಟಿಗೆ ಸೇರಿಸಿಕೊಳ್ಳಬಹುದು. ಈ ಹಿಂದೆ ಗೈಡ್ ಆಗದೆ ಇದ್ದರೆ, ಪ್ರವೇಶ ಪರೀಕ್ಷೆಯನ್ನು ಮುಗಿಸಿ ಗೈಡ್ ನಿಯಮವನ್ನು ಒಪ್ಪಿಕೊಂಡು ಪ್ರತಿಜ್ಞೆಯನ್ನು ಮಾಡಿ ದೀಕ್ಷೆಯನ್ನು ಸ್ವೀಕರಿಸಬೇಕು. ಗೈಡ್ ಆಗಿದ್ದಲ್ಲಿ ಮತ್ತೊಮ್ಮೆ ಪ್ರತಿಜ್ಞೆಯನ್ನು ಪುನರುಚ್ಚರಿಸಬೇಕು.

ii) **ರೇಂಜರ್ ಬದುಕಿನ 3 ಹಂತಗಳು:**

ಅ) ರೇಂಜರ್ ಆಕಾಂಕ್ಷಿ ಆ) ರೇಂಜರ್ ಇ) ಸೇವಾರೇಂಜರ್

iii) **ರೇಂಜರ್ ಆಕಾಂಕ್ಷಿಯಾಗಿ ದೀಕ್ಷೆ ಪಡೆಯುವ ಮುನ್ನ 15 ವರ್ಷ ಮತ್ತು 3 ತಿಂಗಳು ತುಂಬಿರಬೇಕು ಮತ್ತು 3 ತಿಂಗಳು ಪ್ರವೇಶ ಪರೀಕ್ಷೆಗೆ ಕೆಲಸ ಮಾಡಿರಬೇಕು.**

14. **ರೇಂಜರ್ ಆಕಾಂಕ್ಷಿ:**

ಅ) ರೇಂಜರ್ ಆಕಾಂಕ್ಷಿಯಾಗುವ ಮುನ್ನ 15 ವರ್ಷ ತುಂಬಿರಬೇಕು.

ಆ) ಮೊದಲೇ ಗೈಡ್ ಆಗಿದ್ದ ಅಥವಾ ರೇಂಜರ್ ಆಕಾಂಕ್ಷಿಯಾಗಿ ಗೈಡ್ ಪ್ರವೇಶ್ ಪದಕ ಪರೀಕ್ಷೆಯನ್ನು ಪೂರ್ಣಗೊಳಿಸಿರುವ ರೇಂಜರ್ ಆಕಾಂಕ್ಷಿಯು ರೇಂಜರ್ ಸಮವಸ್ತ್ರವನ್ನು ಧರಿಸಬಹುದು.

15. ಪ್ರವೇಶದ ಪರೀಕ್ಷೆಗಳು

i) ಬಾಲಕರಿಗಾಗಿ ಸ್ಕೌಟಿಂಗ್ (Scouting for Boys), Girl guiding in India (ಗರ್ಲ್ ಗೈಡ್ ಮಾರ್ಗದರ್ಶಿ) ಮತ್ತು ರೇಂಜರಿಂಗ್ ಬಗ್ಗೆ ನಿಗದಿಮಾಡಿರುವ ಪುಸ್ತಕಗಳನ್ನು ಓದಿರಬೇಕು.

ii) ರೇಂಜರ್ ತತ್ವಗಳನ್ನು ಒಪ್ಪಿಕೊಂಡು ಚಟುವಟಿಕೆಗಳನ್ನು ಮಾಡುವ ಆಸಕ್ತಿ ತೋರಿಸಬೇಕು. ನಿತ್ಯ ಜೀವನದಲ್ಲಿ ನಿಯಮವನ್ನು ಅನುಸರಿಸಿ ಪ್ರತಿಜ್ಞೆಯನ್ನು ಪಾಲಿಸಬೇಕು.

iii) ಬಿ.ಪಿ.ಯವರ 6 ವ್ಯಾಯಾಮಗಳು ಮತ್ತು ಸಾಧಾರಣ ಕವಾಯತು ತಿಳಿದಿರಬೇಕು.

iv) ಈ ಹಿಂದೆ ಗೈಡ್ ಆಗಿರದ ಯುವತಿಯು ತಂಡಕ್ಕೆ ಸೇರಲು ಇಚ್ಛಿಸಿದಲ್ಲಿ, ಈ ಕೆಳಗೆ ನಮೂದಿಸಿರುವ ಗೈಡ್ ಪ್ರವೇಶ್ ಪರೀಕ್ಷೆಯ ಅವಶ್ಯಕತೆಗಳನ್ನು ಪೂರ್ಣಗೊಳಿಸಿ, ಕನಿಷ್ಠ 3 ತಿಂಗಳಾದರೂ ದೀಕ್ಷೆಗೆ ಮೊದಲು ರೇಂಜರ್ ಆಕಾಂಕ್ಷಿಯಾಗಿ ಕೆಲಸ ಮಾಡಿರಬೇಕು.

ಪ್ರವೇಶನ ಅವಶ್ಯಕತೆಗಳು : Requirements of Pravesh

i. ಗೈಡಳು ಚಳವಳಿಯ ಬಗ್ಗೆ ಅಮೂಲ್ಯ ಜ್ಞಾನ ಹೊಂದಿರಬೇಕು.

ii. ಗೈಡಿಂಗ್ ಮೂಲದ ಸಂಕ್ಷಿಪ್ತ ಮಾಹಿತಿ. ಜೊತೆಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮೂಲ ಸಿದ್ಧಾಂತ ವಾದ, ನಿರೂಪಣೆ, ಉದ್ದೇಶ, ಮೂಲತತ್ವ ಮತ್ತು ವಿಧಾನದ ಬಗ್ಗೆ ವಿಷಯ ತಿಳಿದಿರಬೇಕು.

a. ಗೈಡ್ ಪ್ರತಿಜ್ಞೆ ಮತ್ತು ನಿಯಮ.

b. ಗೈಡ್ ಧ್ಯೇಯ, ಸಂಕೇತ, ವಂದನೆ, ಎಡಗೈ ಹಸ್ತಲಾಘವ

c. ದೈನಿಕ ಸತ್ಕಾರ್ಯ ಮತ್ತು ಅದರ ಒಂದು ತಿಂಗಳ ದಿನಚರಿ.

d. ಗೈಡ್/ ರೇಂಜರ್ ಸಮವಸ್ತ್ರ ಅದರ ಭಾಗಗಳು ಮತ್ತು ಧರಿಸುವ ಕ್ರಮ

e. ರಾಷ್ಟ್ರಧ್ವಜ, ವಿಶ್ವಗೈಡ್ ಧ್ವಜ, ಭಾರತ್ ಸ್ಕೌಟ್ ಮತ್ತು ಗೈಡ್. ಧ್ವಜ – ಇವುಗಳ ರಚನೆ ಮತ್ತು ಮಹತ್ವ

f. ರಾಷ್ಟ್ರಗೀತೆಯನ್ನು ಸರಿಯಾಗಿ ಹಾಡುವುದು.

g. ಸಂಸ್ಥೆಯ ಪ್ರಾರ್ಥನೆ ಮತ್ತು ಧ್ವಜಗೀತೆಯನ್ನು ಹಾಡುವುದು.

h. ಕನಿಷ್ಠ 4 ದಳದ ಸಭೆಯಲ್ಲಿ ಭಾಗವಹಿಸುವುದು.

i. ಅವಳು ಅಷ್ಟಕ ಜೊತೆ 4 ಗಂಟೆಗಳ ಕಾಲ ಹೊರ ಸಂಚಾರ ಕೈಗೊಳ್ಳಬೇಕು.

(iv) ಪರೀಕ್ಷೆಗಳ ನಂತರ ರೇಂಜರ್ ನಾಯಕಿಗೆ ಭಾಷೆಕೊಡುವುದರ ಮೂಲಕ ದೀಕ್ಷೆ ಪಡೆಯುವಳು. ಸಮವಸ್ತ್ರ ಮತ್ತು ಸದಸ್ಯತ್ವ ಪದಕ ಧರಿಸಲು ಅರ್ಹಳಾಗುವಳು.

(ಅ) **ಸದಸ್ಯತ್ವ ಪದಕ (Membership Badge):** ಕೆಂಪು ಪಟ್ಟಿಯ ಮೇಲೆ ಹಳದಿ ಫ್ಲೂರಡೆಲಿಸ್, ಅದರ ಮಧ್ಯೆ ತ್ರಿದಳ, ಅದರ ಮಧ್ಯೆ ಅಶೋಕ ಚಕ್ರವನ್ನು ಹೊಂದಿರುತ್ತದೆ. ಸದಸ್ಯತ್ವ ಪದಕವನ್ನು ಎಡತೋಳಿನ ಮಧ್ಯಭಾಗದಲ್ಲಿ ಧರಿಸುವುದು. ಸದಸ್ಯತ್ವ ಪದಕವನ್ನು ಸಂಬಂಧಪಟ್ಟ ಸ್ಥಳೀಯ ಅಥವಾ ಜಿಲ್ಲಾ ಸಂಸ್ಥೆಯು ನೀಡುತ್ತದೆ.

ಸೂಚನೆ:a) ಗೈಡ್ಸ್‌ಗಳು ಪ್ರತಿದಿನ ಕನಿಷ್ಠ ಒಂದು ಒಳ್ಳೆಯ ಕೆಲಸ ಮಾಡುವ ಹವ್ಯಾಸ ಬೆಳೆಸಿಕೊಳ್ಳಲು ಪ್ರೋತ್ಸಾಹಿಸಬೇಕು.

b. **ಗೈಡ್ ಪ್ರತಿಜ್ಞೆ–Guide Promise :** ನಾನು ನನ್ನ ಗೌರವಸಾಕ್ಷಿಯಾಗಿ ಕೈಲಾದ ಮಟ್ಟಿಗೆ, ದೇವರಿಗೂ ಮತ್ತು ನನ್ನ ದೇಶಕ್ಕೂ ನನ್ನ ಕರ್ತವ್ಯವನ್ನು ಸಲ್ಲಿಸುತ್ತೇನೆಂದು

ಇತರರಿಗೆ ಸಹಾಯ ಮಾಡುತ್ತೇನೆಂದು ಗೈಡ್ ನಿಯಮವನ್ನು ಪಾಲಿಸುತ್ತೇನೆಂದು, ಪ್ರತಿಜ್ಞೆ ಮಾಡುತ್ತೇನೆ.

"On my honour, I promise that I will do my best to do my duty to God and my country, to help other people and to obey the Guide Law."

(ಇ) ಗೈಡ್ ನಿಯಮ–Guide Law :

i)	ಗೈಡ್ ವಿಶ್ವಾಸಾರ್ಹಳು	- **A Guide is trustworthy.**
ii)	ಗೈಡ್ ನಿಷ್ಠಾವಂತಳು	- **A Guide is loyal**
iii)	ಗೈಡ್ ಎಲ್ಲರ ಮಿತ್ರಳು ಮತ್ತು ಇತರ ಗೈಡ್‌ಗಳಿಗೆ ಸೋದರಿಯಾಗಿರುವಳು.	– **A guide is friend to all and a sister to every other Guide.**
iv)	ಗೈಡ್ ವಿನಯಶೀಲಳು	– **A Guide is courteous.**
v)	ಗೈಡ್ ಪ್ರಾಣಿಮಿತ್ರಳು ಮತ್ತು ಪ್ರಕೃತಿ ಪ್ರೇಮಿಯಾಗಿರುವಳು	– **A Guide is a friend to animals and loves nature**
vi)	ಗೈಡ್ ಶಿಸ್ತುಳ್ಳವಳು ಮತ್ತು ಸಾರ್ವಜನಿಕ ಆಸ್ತಿಯನ್ನು ರಕ್ಷಿಸಲು ಸಹಾಯ ಮಾಡುವಳು.	– **A Guide is disciplined and helps to protect public property.**
vii)	ಗೈಡ್ ಧೈರ್ಯವಂತಳು	– **A Guide is Courageous.**
viii)	ಗೈಡ್ ಮಿತವ್ಯಯಿಯಾಗಿರುವಳು	– **A Guide is thrifty.**
ix)	ಗೈಡ್ ಕಾಯಾ, ವಾಚಾ, ಮನಸಾ ಪರಿಶುದ್ಧಳು	– **A Guide is pure in thought, word and deed.**

(ಈ) ಗುರಿ–Motto : ಸೇವೆ–Service

ದೃಢಕಾಯ, ಜಾಗೃತ ಮನಸ್ಸು ಮತ್ತು ನೈತಿಕ ಬಲವರ್ಧನೆಯಿಂದ ಮಾತ್ರ ಇದನ್ನು ಸಾಧಿಸಲು ಸಾಧ್ಯ.

ಉ) **ಗೈಡ್ ಸಂಕೇತ–Guide Sign**: ಬಲಗೈಯನ್ನು ಭುಜದ ಮಟ್ಟಕ್ಕೆ ಎತ್ತಿ, ಅಂಗೈ ಮುಂದೆಮಾಡಿ ಮೂರು ಬೆರಳುಗಳನ್ನು ನೇರವಾಗಿ ಚಾಚಿ. ಕಿರುಬೆರಳಿನ ಮೇಲೆ ಹೆಬ್ಬೆರಳನ್ನಿರಿಸಿ ಗೈಡ್ ಸಂಕೇತವನ್ನು ಮಾಡುವುದು.

ಊ) **ವಂದನೆ–Salute**: ವಂದಿಸುವಾಗ ಚುರುಕಾಗಿ ಬಲಗೈಯನ್ನು ಮೇಲಕ್ಕೆ ಎತ್ತಿ, ಸಂಕೇತ ಹಸ್ತ ಮುದ್ರೆ ಮಾಡಿ, ಅದರ ಮಧ್ಯ ಬೆರಳನ್ನು ಬಲಹುಬ್ಬಿನ ತುದಿಗೆ ತಾಗಿಸಲಾಗುವುದು. ವಂದಿಸಿದ ನಂತರ ಚುರುಕಾಗಿ ಕೈಯನ್ನು ಕೆಳಕ್ಕೆ ತರುವುದು.

ಜಲರೇಂಜರ್

ಮೇಲಿನ ರೇಂಜರ್ ಪ್ರವೇಶ ಪರೀಕ್ಷೆಗಳ ಜೊತೆಗೆ ಜಲರೇಂಜರ್‌ಗೆ ಗೊತ್ತುಪಡಿಸಿರುವ ಈ ಕೆಳಗಿನ ಪರೀಕ್ಷೆಗಳಲ್ಲೂ ಅರ್ಹತೆ ಪಡೆಯಬೇಕು.

1. ನೀರಿನಲ್ಲಿ (ನದಿ, ಸಮುದ್ರ, ಕೆರೆ) ಸುರಕ್ಷತಾ ಕ್ರಮದ ಅರಿವು ಇರಬೇಕು.
2. ದೋಣಿಯಲ್ಲಿ ಪಯಣಿಸುವಾಗ ಮಾಡಬೇಕಾದ ಮತ್ತು ಮಾಡಬಾರದ **(Do's & Dont's)** ಚಟುವಟಿಕೆಗಳನ್ನು ತಿಳಿದಿರಬೇಕು.
3. ದೋಣಿಯ ಭಾಗಗಳು, ಪಟ, ಲಂಗರು, ಹುಟ್ಟುಗಳ ಬಗೆಗಿನ ಅರಿವು ಇರಬೇಕು.
4. ಸೆಮಫೋರ್ ವಿಧಾನದ ಸಂಕೇತ ಭಾಷೆಯನ್ನು ಕಲಿತಿರಬೇಕು.
5. ನಿಮ್ಮ ಸ್ಥಳದಲ್ಲಿ ಕಾಣುವ, ಜಲಯಾನಕ್ಕೆ ರಾತ್ರಿಕಾಲದಲ್ಲಿ ಅವಶ್ಯಕವಾದ ಕನಿಷ್ಠ 3 ನಕ್ಷತ್ರ ಪುಂಜಗಳನ್ನು ಗುರುತಿಸಬೇಕು.

ವಾಯು ರೇಂಜರ್ (Air Ranger)

ಗ್ರಾಮೀಣ ರೇಂಜರ್

i) ಮೇಲೆ ಹೇಳಿದ ರೇಂಜರ್‌ಗೆ ಅನ್ವಯಿಸುವ ಪಠ್ಯಕ್ರಮ ಗ್ರಾಮೀಣ ರೇಂಜರ್‌ಗೂ ಅನ್ವಯಿಸುತ್ತದೆ.

ii) ಗ್ರಾಮೀಣ ರೇಂಜರ್‌ನ ಸಮವಸ್ತ್ರದ ಭಾಗಗಳನ್ನು ಅರಿತಿರಬೇಕು: **ಗ್ರಾಮೀಣ ರೇಂಜರ್‌ಗೆ ಸೂಚನೆ:** ರೇಂಜರ್ ಪಠ್ಯಕ್ರಮದಲ್ಲಿ ಯಾವುದಾದರೂ ವಿಷಯ ಕ್ಲಿಷ್ಟ ಅಥವಾ ಗ್ರಾಮೀಣ ರೇಂಜರ್‌ಗೆ ಸಂಬಂಧಪಡದಿದ್ದಲ್ಲಿ ಜಿಲ್ಲಾ ಮುಖ್ಯ ಆಯುಕ್ತರು ಹಾಗೂ ರಾಜ್ಯ ಸಂಘಟನಾ ಆಯುಕ್ತರ ಶಿಫಾರಸ್ಸಿನ ಮೇರೆಗೆ ರಾಜ್ಯ ಪ್ರಧಾನ ಆಯುಕ್ತರ ಅನುಮತಿ ಪಡೆದು ಸೂಕ್ತ ಸ್ಥಳೀಯ ಚಟುವಟಿಕೆಗಳು ಮತ್ತು ಯೋಜನೆಗಳಿಗೆ ಬದಲಾಯಿಸಬಹುದು. ಆ ಪ್ರದೇಶಕ್ಕೆ ಅನುಗುಣವಾದ ವಿಷಯಗಳನ್ನು/ಚಟುವಟಿಕೆಗಳನ್ನು ಅನುಮೋದಿಸಿ, ಈ ಬಗ್ಗೆ ಪ್ರಮಾಣಪತ್ರವನ್ನು ಪರೀಕ್ಷಾ ಶಿಬಿರದಲ್ಲಿ ಹಾಜರುಪಡಿಸತಕ್ಕದ್ದು.

ಸೂಚನೆ: ರೇಂಜರ್ ಆಕಾಂಕ್ಷಿಯು ಎಲ್ಲ ಪರೀಕ್ಷೆಗಳನ್ನು, ರೇಂಜರ್ ನಾಯಕಿಗೆ ತೃಪ್ತಿಯಾಗುವಂತೆ ಪೂರ್ಣಗೊಳಿಸಿದ್ದಲ್ಲಿ ಅವಳಿಗೆ ದೀಕ್ಷೆಯನ್ನು ನೀಡಬಹುದು. ಮೊದಲೇ ಗೈಡ್ ಆಗಿದ್ದಲ್ಲಿ ಅವಳು ಗೈಡ್ ಪ್ರಮಾಣವನ್ನು ಪುನರುಚ್ಚರಿಸಬೇಕು. ನಂತರ ಅವಳು ರೇಂಜರ್ ಪ್ರವೇಶ ಪದಕವನ್ನು ಧರಿಸಲು ಅರ್ಹಳು. ಪ್ರವೇಶ್ ಪದಕ ಬಟ್ಟೆಯ ಪದಕ. ಕೆಂಪು ಹಿನ್ನೆಲೆಯಲ್ಲಿ ಹಳದಿ ದಾರದಲ್ಲಿ ಫ್ಲೂರಡೆಲಿಸ್ ಅದರ ಮಧ್ಯೆ ತ್ರಿದಳ, ಅದರ ಮೇಲೆ ಅಶೋಕಚಕ್ರ ಇರುತ್ತದೆ. ಈ ಪದಕವನ್ನು ಎಡತೋಳಿನ ಮಧ್ಯೆ ಧರಿಸುವುದು.

ಈ ಸದಸ್ಯತ್ವ ಪದಕವು ರೇಂಜರ್ ನಾಯಕಿಯ ಶಿಫಾರಿನ ಮೇರೆಗೆ ಸ್ಥಳೀಯ ಅಥವಾ ಜಿಲ್ಲಾ ಸಂಸ್ಥೆಯುವರು ನೀಡುತ್ತಾರೆ.

16. ರೇಂಜರ್/ಜಲರೇಂಜರ್/ವಾಯು ರೇಂಜರ್‌ಗಳ ಸಮವಸ್ತ್ರ

ಅ) ಕಡ್ಡಾಯ ಉಡುಪಿನ ಮಾದರಿ

i) **ಸಲ್ವಾರ್ ಕಮೀಜ್ ದುಪ್ಪಟ್ಟ:** ಸಲ್ವಾರ್ ಕಡು ಆಕಾಶನೀಲಿ ಬಣ್ಣದಲ್ಲಿ ಕಮೀಜ್ ತಿಳಿ ಆಕಾಶನೀಲಿ ಬಣ್ಣದಲ್ಲಿ ಅಪಾರದರ್ಶಕ ವಸ್ತ್ರದಿಂದ ತಯಾರಿಸಿಕೊಳ್ಳುವುದು. ಕಮೀಜ್ ಮೊಳಕಾಲಿನ ತನಕ ಇರಬೇಕು. ಇದಕ್ಕೆ ಮೇಲೆ ಎರಡು ಮುಚ್ಚಿಕೆ ಇರುವ ಜೇಬು ಮತ್ತು ಪಾರ್ಶ್ವದಲ್ಲಿ ಎರಡು ಪಾರ್ಶ್ವಜೇಬುಗಳು (ಜುಬ್ಬದ ಜೇಬಿನಂತೆ) ಇರಬೇಕು. ಮೊಣಕೈಗಿಂತ ತೋಳಿನ ಉದ್ದ 8 ಸೆಂ.ಮೀ. ಮೇಲಿರಬೆಕು. ಅಂಚನ್ನು 4 ಸೆಂ.ಮೀ. ಮೇಲಕ್ಕೆ ಮಡಿಚಿ ಹೊಲಿದಿರಬೇಕು. ತೆರೆದ ಕ್ರೀಡಾ ಕತ್ತುಪಟ್ಟಿ ಮತ್ತು ಎರಡು ಭುಜಪಟ್ಟಿ ಇರಬೇಕು. ಉಡುಪು ಬಿಗಿಯಾಗಿರಬಾರದು. ದುಪ್ಪಟ್ಟ ಕಡು ಆಕಾಶನೀಲಿ ಬಣ್ಣದ್ದಾಗಿ ಅಪಾರದರ್ಶಕದ್ದಾಗಿರಬೇಕು.

ii) **ಸೊಂಟಪಟ್ಟಿ:** ರಾಷ್ಟ್ರೀಯ ಸಂಸ್ಥೆ ಸರಬರಾಜು ಮಾಡುವ ಅಧಿಕೃತ ಜೋಡಕ (Buckle) ಹೊಂದಿರುವ ಕಂದುಬಣ್ಣದ ನೈಲೆಕ್ಸ್ ಸೊಂಟಪಟ್ಟಿಯನ್ನು ಧರಿಸಬೇಕು.

iii) **ಕಂಠವಸ್ತ್ರ:** ಗ್ರೂಪ್ ಬಣ್ಣ ಮತ್ತು ಮಾದರಿಯ, ಹಸಿರು, ನೇರಳೆ ಮತ್ತು ಹಳದಿ ಬಣ್ಣ ಹೊರತುಪಡಿಸಿ ಸ್ಥಳೀಯ ಅಥವಾ ಜಿಲ್ಲಾ ಸಂಸ್ಥೆ ಅನುಮೋದಿಸಿದ ಕಂಠವಸ್ತ್ರವನ್ನು ನಿಮ್ಮ ತಂಡಕ್ಕೆ

ಮಾಡಿಸುವುದು. ಇದನ್ನು ಭುಜ ಮತ್ತು ಕತ್ತುಪಟ್ಟಿ ಸುತ್ತುವರಿಸಿ ಗ್ರೂಪ್ ಕವುಂಗರದ (ಕಂಠವಸ್ತ್ರದ ಉಂಗುರ–Wooggle) ಮೂಲಕ ಹಾಕಿಕೊಳ್ಳಬೇಕು. ಕಂಠವಸ್ತ್ರ ತ್ರಿಭುಜಾಕಾರದಲ್ಲಿದ್ದು ಒಂದು ತಳ ಕನಿಷ್ಠ 70ರಿಂದ ಗರಿಷ್ಠ 80 ಸೆಂ.ಮೀ.ನ ಸಮನಾದ ಎರಡು ಪಾರ್ಶ್ವಗಳನ್ನು ಹೊಂದಿರಬೇಕು.

iv) **ಕಾಲುಚೀಲ:** ಬಿಳಿಯ ಕಾಲುಚೀಲ ಧರಿಸುವುದು.

v) **ಪಾದರಕ್ಷೆ:** ಕಪ್ಪು ಚರ್ಮದ ಅಥವಾ ಕ್ಯಾನ್‌ವಾಸ್‌ನ ಪಾದಮುಚ್ಚುವ ಬೂಟು ಧರಿಸುವುದು.

vi) **ಕೇಶಾಲಂಕಾರ:** ಕೇಶವನ್ನು ಅಚ್ಚುಕಟ್ಟಾಗಿ ಕಟ್ಟಿರಬೇಕು. ಅಥವಾ ಸಾದಾ ಕಪ್ಪು ಕೇಶ ಬಂಧಕ (Hair Band) ಧರಿಸುವುದು. (ಬಂಧಕ ಗಿಡ್ಡ ಕೂದಲಿಗೆ ಮಾತ್ರ)

vii) **ಸದಸ್ಯತ್ವದ ಪದಕ:** ಕೆಂಪುಬಟ್ಟೆಯ ಮೇಲೆ ಹಳದಿ ಬಣ್ಣದ ಫ್ಲೂರಡೆಲಿಸ್, ಅದರ ಮಧ್ಯೆ ತ್ರಿದಳ, ಅದರ ಮಧ್ಯೆ ಅಶೋಕ ಚಕ್ರಹೊಂದಿರುವ ಭಾರತ ಸ್ಕೌಟ್ ಮತ್ತು ಗೈಡ್ ಲಾಂಛನವನ್ನು ಎಡತೋಳಿನ ಮಧ್ಯೆ ಧರಿಸುವುದು.

viii) **ಭುಜಪದಕ:** ಎಡ ಬಲಭುಜಪಟ್ಟಿಯ ಕೆಳಗೆ ಸ್ವಲ್ಪ ಬಾಗಿದ ಬಿಳಿಯ 6 ರಿಂದ 8 ಸೆಂ.ಮೀ. ಉದ್ದದ ಮತ್ತು 1.5 ಸೆಂ.ಮೀ. ಅಗಲದ ಬಿಳಿ/ಹಸಿರು ಪಟ್ಟಿಯ ಮೇಲೆ ಗುಂಪಿನ ಸಂಖ್ಯೆ ಮತ್ತು ಜಿಲ್ಲೆ/ರಾಜ್ಯದ ಹೆಸರನ್ನು ಕೆಂಪು ಅಕ್ಷರದಲ್ಲಿ ಹೊಂದಿರುವ ಪಟ್ಟಿಯನ್ನು ಧರಿಸುವುದು.

ix) **ವಿಶ್ವ ಗೈಡ್ ಪದಕ:** ವಸ್ತ್ರದ ಈ ಪದಕವನ್ನು ರಾಷ್ಟ್ರ ಸಂಸ್ಥೆಯಿಂದ ಪಡೆದು ಬಲ ತೋಳಿನ ಮಧ್ಯೆ ಧರಿಸುವುದು.

x) ರಾಷ್ಟ್ರ ಸಂಸ್ಥೆಯುವರು ಸರಬರಾಜು ಮಾಡುವ ಬಲ ಭಾಗದಲ್ಲಿ 3×2 ಸೆಂ.ಮೀ. ಅಳತೆಯ ತ್ರಿವರ್ಣ ಧ್ವಜ ಹಾಗೂ The Bharat Scouts & Guidesನ ಮಿಕ್ಕ ಸ್ಥಳದಲ್ಲಿರುವ 11×2 ಸೆಂ.ಮೀ. ಅಳತೆಯ ಪದಕವನ್ನು ಬಲಭಾಗದ ಜೇಬಿನ ಮೇಲೆ ಧರಿಸುವುದು.

xi) **ಉಣ್ಣೆಯ ಮೇಲಂಗಿ (Cardigan):** ಸಾದಾ ಕಪ್ಪುಬಣ್ಣದ ಸ್ವೆಟರ್ ಧರಿಸುವುದು. ಕಾಲಕ್ಕೆ ಅನುಗುಣವಾಗಿ ಅರೆತೋಳಿನ ತೋಳುರಹಿತ ಉಣ್ಣೆ ಅಂಗಿಯನ್ನು ಧರಿಸಬಹುದು.

xii) **ಡವಾಲಿ (Sash):** 10 ಸೆಂ.ಮೀ. ಅಗಲದ ಕಡು ನೀಲಿ ಆಕಾಶಬಣ್ಣದ ಡವಾಲಿ ಹೊಲಿದು ಎಡಭುಜದ ಮೇಲಿಂದ ಎದೆಯ ಮೇಲೆ ಹಾದು ಕೊನೆಯು ಬಲಗಡೆ ಸೊಂಟದಿಂದ ಸ್ವಲ್ಪ ಕೆಳಗೆ ಇರಬೇಕು. ಅದರ ಮೇಲೆ ಪ್ರಾವೀಣ್ಯತಾ ಪದಕಗಳನ್ನು ಆರೋಹಣಾ ಕ್ರಮದಲ್ಲಿ ಹೊಲಿದುಕೊಳ್ಳುವುದು.

ಆ) ಐಚ್ಛಿಕ (Optional)

i) **ಶಿಬಿರದ ಸಮವಸ್ತ್ರ:** ವಿಧಿಪೂರ್ವಕ ಸಮಾರಂಭಗಳನ್ನು ಹೊರತುಪಡಿಸಿ ಕಡು ಆಕಾಶನೀಲಿ ಬಣ್ಣದ ಸಲ್ವಾರ್ ಕಮೀಜ್ ಮತ್ತು ದುಪ್ಪಟ್ಟ. (ಈ ಮೊದಲು ಕೊಟ್ಟಿರುವ ಮಾದರಿ ಅನುಸರಿಸುವುದು.)

ii) **ಹೊರಸಂಚಾರದ ಸಮವಸ್ತ್ರ:** ಕಡು ಆಕಾಶನೀಲಿ ಬಣ್ಣದ ಜೀನ್ಸ್ ಪ್ಯಾಂಟನ್ನು ರಾಷ್ಟ್ರೀಯ ಸಂಸ್ಥೆಯಿಂದ ಸರಬರಾಜಾದ ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಲಾಂಛನವನ್ನು ಜೇಬಿನ ಮೇಲೆ ಆಕಾಶ ನೀಲಿ ಕಾಲರ್ ಹೊಂದಿರುವ ಮೇಲಂಗಿಯನ್ನು ಧರಿಸುವುದು.

iii) ಹೊರಸಂಚಾರದಲ್ಲಿ 'P' ಟೋಪಿಯನ್ನು ಧರಿಸುವುದು.

iv) **ಕಪ್ಪು ಸಂಚಿ** (Black Pouch): ವಿಧಿಬದ್ಧ ಸಮಾರಂಭವನ್ನು (Ceremonials) ಹೊರತುಪಡಿಸಿ ಉಳಿದೆಲ್ಲಾ ಸಮಯದಲ್ಲಿ ಕಪ್ಪು ಸೊಂಟದ ಪಟ್ಟಿಯ ಮೇಲೆ ಧರಿಸಬಹುದು.

v) **ಲೋಹದ ಪದಕ:** ಸಮವಸ್ತ್ರ ಇಲ್ಲದೇ ಇದ್ದಾಗ ಭಾರತ್ ಸ್ಕೌಟ್ ಮತ್ತು ಗೈಡ್ ಲಾಂಛನ ಹೊಂದಿದ ಲೋಹದ ಪದಕವನ್ನು ಧರಿಸಬಹುದು.

vi) **ಸೀಟಿ ಸೂತ್ರ ಮತ್ತು ಸೀಟಿ (Lanyard and Whistle):** ಶ್ವೇತ ಸೂತ್ರಕ್ಕೆ ಸೀಟಿ ಪೋಣಿಸಿ ಕತ್ತಿನಲ್ಲಿ ಧರಿಸಬಹುದು.

viii) **ಆಭರಣ:** ಸಾಂಪ್ರದಾಯಿಕ ಹಾಗೂ ಧಾರ್ಮಿಕ ಆಭರಣ ಹೊರತುಪಡಿಸಿ ಉಳಿದವುಗಳನ್ನು ಸಮವಸ್ತ್ರದ ಮೇಲೆ ಧರಿಸಬಾರದು.

17. ರೇಂಜರ್‌ಳ ಪ್ರಗತಿ ಯೋಜನೆ (Ranger's Scheme of Advancement)

i) 15 ವರ್ಷ ತುಂಬಿದ ರೇಂಜರ್ ಆಕಾಂಕ್ಷಿಯನ್ನು ರೇಂಜರ್ ಆಕಾಂಕ್ಷಿಯಾಗಿ ಸೇರಿಸಿಕೊಳ್ಳಬಹುದು.

ii) ರೇಂಜರ್ ಆಕಾಂಕ್ಷಿಗೆ 15 ವರ್ಷ 3 ತಿಂಗಳು ತುಂಬಿದ ನಂತರ ದೀಕ್ಷೆ ನೀಡಬಹುದು.

iii) ದೀಕ್ಷೆ ನೀಡುವ ಮೊದಲು ರೇಂಜರ್ ಆಕಾಂಕ್ಷಿಯು ಕನಿಷ್ಠ 3 ತಿಂಗಳಾದರೂ ಕೆಲಸ ಮಾಡಬೇಕು.

iv) ಪ್ರವೇಶ್ ರೇಂಜರ್ ಕನಿಷ್ಠ 6 ತಿಂಗಳಾದರೂ ನಿಪುಣ್ ಪದಕಕ್ಕೆ ಅರ್ಹತೆ ಪಡೆಯಲು ಕೆಲಸ ಮಾಡಬೇಕು.

v) ನಿಪುಣ್ ರೇಂಜರ್ ಕನಿಷ್ಠ 9 ತಿಂಗಳಾದರೂ ರಾಜ್ಯ ಪುರಸ್ಕಾರ್ ರೇಂಜರ್ ಪದಕಕ್ಕೆ ಕೆಲಸ ಮಾಡಬೇಕು.

vi) ರಾಜ್ಯ ಪುರಸ್ಕಾರ್ ರೇಂಜರ್ ಕನಿಷ್ಠ ಒಂದು ವರ್ಷವಾದರೂ ರಾಷ್ಟ್ರಪತಿ ರೇಂಜರ್ ಪುರಸ್ಕಾರಕ್ಕೆ ಕೆಲಸ ಮಾಡಬೇಕು.

18. ಸಾಮರ್ಥ್ಯ ಪ್ರತಿನಿಧಿಸುವ ಹುರಿಗಳು (Efficiency Cords)

ರಾಷ್ಟ್ರೀಯ ಸಂಸ್ಥೆಯು ಷಿಫಾನ್ ದಾರದಿಂದ ವಿಶೇಷವಾಗಿ ತಯಾರಿಸಲಾದ ರೇಂಜರ್ ಸಾಮರ್ಥ್ಯ ಹುರಿಗಳನ್ನು ಒದಗಿಸುತ್ತದೆ. ಇದನ್ನು ಬಲಭುಜದ ಪಟ್ಟಿಯ ಕೆಳಗಿನಿಂದ ಬಲಜೇಬಿನವರೆಗೆ ಧರಿಸಬೇಕು.

1) ನಿಪುಣ್ ಪದಕ ಗಳಿಸಿದ ಮೇಲೆ ಇನ್ನೂ ಹೆಚ್ಚು ಪ್ರಾವೀಣ್ಯತಾ ಪದಕಗಳನ್ನು ಗಳಿಸಬಹುದು.

2) ನಿಪುಣ್ ರೇಂಜರ್ 7 ಪ್ರಾವೀಣ್ಯತಾ ಪದಕಗಳನ್ನು ಪಡೆದರೆ ಜಿಲ್ಲಾ ಮುಖ್ಯ ಆಯುಕ್ತರು "ಹಳದಿಹುರಿ" ನೀಡುತ್ತಾರೆ.

3) ರಾಜ್ಯ ಪುರಸ್ಕಾರ್ ರೇಂಜರ್ 12 ಪ್ರಾವೀಣ್ಯತಾ ಪದಕಗಳನ್ನು ಗಳಿಸಿದರೆ ಜಿಲ್ಲಾ ಮುಖ್ಯ ಆಯುಕ್ತರು "ನೇರಳೆ ಹುರಿ"ಯನ್ನು ನೀಡುತ್ತಾರೆ.

4) ರಾಷ್ಟ್ರಪತಿ ರೇಂಜರ್ 5 ಪ್ರಾವೀಣ್ಯತಾ ಪದಕಗಳನ್ನು ಗಳಿಸಿದಾಗ ಜಿಲ್ಲಾ ಮುಖ್ಯ ಆಯುಕ್ತರು "ತ್ರಿವರ್ಣ (Tri Colour)" ಹುರಿ (ನೀಲಿ+ಹಸಿರು+ಕೆಂಪು) ಹುರಿಯನ್ನು ಪ್ರದಾನ ಮಾಡುತ್ತಾರೆ.

18.1 ನಿಪುಣ್ ಪದಕ ಪರೀಕ್ಷೆಗಳು

i) ಕುಟುಂಬದ ಜವಾಬ್ದಾರಿಯನ್ನು ನಿರ್ವಹಿಸಲು ಕುಟುಂಬದ ಜವಾಬ್ದಾರಿಯನ್ನು ಹೊತ್ತಿರುವ, ದುಡಿಯುವ, ಶ್ರಮಿಕ ಹಿರಿಯರಿಗೆ ಸಹಾಯ ಮಾಡುವುದರ ಮೂಲಕ ನಿಮ್ಮ ಕುಟುಂಬವನ್ನು ಸಂತಸ ಕುಟುಂಬವನ್ನಾಗಿ ಮಾಡುವುದು.



ii) ಜೀವನದಲ್ಲಿ ಉಪಯುಕ್ತವಾಗುವ ವೃತ್ತಿ/ಚಟುವಟಿಕೆ/ಹವ್ಯಾಸಗಳನ್ನು ನಿಮ್ಮ ನಾಯಕಿಯೊಡನೆ ಸಮಾಲೋಚಿಸಿ, ಅಭಿವೃದ್ಧಿಪಡಿಸಿಕೊಂಡು ಅವಳ ಜೀವನೋಪಾಯಕ್ಕೆ ದಾರಿ ಮಾಡಿಕೊಳ್ಳುವುದು ಮತ್ತು ಅದರಲ್ಲಿ ಪ್ರಗತಿಯನ್ನು ತೋರಿಸುವುದು.

ಉದಾ: ಸಿಂಪಿಗಿತ್ತಿ, ಸೌಂದರ್ಯವರ್ಧಕಿ, ವಸ್ತ್ರವಿನ್ಯಾಸ, ಮೇಣದಬತ್ತಿ ತಯಾರಿಕೆ, Screen Printing, ಲಲಿತ ಕಲೆಗಳು, ಕೇಶವಿನ್ಯಾಸ, ಛಾಯಾಗ್ರಹಣ, ರೂಪದರ್ಶಿ ಮುಂತಾದ ವೃತ್ತಿಪರ ಕಾರ್ಯಗಳು.

iii) ತಂಡದ ಚರ್ಚೆಯಲ್ಲಿ ಭಾಗವಹಿಸಿ ಕನಿಷ್ಠ ಎರಡು ಸಭೆಗಳ ಅಧ್ಯಕ್ಷತೆ ವಹಿಸುವುದು.

iv) ಕನಿಷ್ಠ ತಂಡದ ನಾಲ್ಕು ಸರ್ವಧರ್ಮ ಪ್ರಾರ್ಥನಾ ಸಭೆಯಲ್ಲಿ ಮತ್ತು ಒಂದು ದಿನದ ಸೇವಾ ಶಿಬಿರದಲ್ಲಿ ಪಾಲ್ಗೊಳ್ಳುವುದು.

v) ತಂಡದ ಹೊರಾಂಗಣ ಚಟುವಟಿಕೆ ಮತ್ತು ಸೇವಾ ಆಂದೋಲನಕ್ಕೆ ಅವಶ್ಯಕವಾದ ಶಿಬಿರವಾಸ ಅಗ್ರ್ರಾಮಿತ್ವ ಪ್ರಥಮಚಿಕಿತ್ಸೆ ಅಂದಾಜು ಅಳತೆ, ದಿಕ್ಸೂಚಿ, ನಕ್ಷಾ ಕೌಶಲ್ಯಗಳಲ್ಲಿ ಪರಿಣತಿ ಹೊಂದಿರುವಿರೆಂದು ನಿಮ್ಮ ನಾಯಕಿಗೆ ಮನವರಿಕೆ ಮಾಡಿಕೊಡುವುದು.

vi) ಬಡಾವಣೆಯಲ್ಲಿ / ಗ್ರಾಮದಲ್ಲಿ ಮಕ್ಕಳಿಗೆ ಒಂದು ತಿಂಗಳ ಕಾಲ ಆಟಗಳನ್ನು ಆಡಿಸುವುದು

ಅಥವಾ

ನಿಮ್ಮ ಬಡಾವಣೆಯ/ಗ್ರಾಮದ ಮಕ್ಕಳಿಗೆ ಸಂರಕ್ಷಣೆ ಮತ್ತು ಮಾಲಿನ್ಯತೆಯ ಬಗ್ಗೆ ಅರಿವು ಮೂಡಿಸುವುದು.

vii) ಜನಸಂಖ್ಯಾ ಶಿಕ್ಷಣ ಅಥವಾ ಕುಟುಂಬ ಜೀವನ ಶಿಕ್ಷಣದ ಬಗ್ಗೆ ಚರ್ಚೆ ಅಥವಾ ಬೀದಿನಾಟಕದಲ್ಲಿ ಪಾಲ್ಗೊಳ್ಳುವುದು.

viii) **ಕೆಳಗಿನವುಗಳಲ್ಲಿ ಯಾವುದಾದರೂ ಒಂದು ರೇಂಜರ್ ಪ್ರಾವೀಣ್ಯತಾ ಪದಕವನ್ನು ಪಡೆಯತಕ್ಕದ್ದು:**

(i) ಸಾಕ್ಷರತೆ (Literacy), (ii) ಜನಸಂಖ್ಯಾ ಶಿಕ್ಷಣ (Population Education), (iii) ವಿಶ್ವಮಿತ್ರತ್ವ (World Friendship), iv) ನೈರ್ಮಲ್ಯ ಪ್ರವರ್ಧಕಿ (Sanitation Promoter), (v) ನಾಗರಿಕ ರಕ್ಷಣೆ (Civil Defence)

ix) ನಿಮ್ಮ ಹತ್ತಿರದ ಹಿಂಡು/ದಳ/ಸ್ಥಳೀಯ/ಜಿಲ್ಲಾ ಸಂಸ್ಥೆಗಳ ಶಿಬಿರ ನಿವೇಶನದ ನಿರ್ವಹಣೆಯಲ್ಲಿ ಅಥವಾ ನಿಮ್ಮ ಬಡಾವಣೆಯಲ್ಲಿನ ಯಾವುದಾದರೂ ಸಂಸ್ಥೆ/ ಗ್ರಾಮ/ ಕೊಳಚೆ ಪ್ರದೇಶದಲ್ಲಿ 3 ತಿಂಗಳ ಕಾಲ ಸೇವೆ ಸಲ್ಲಿಸುವುದು.

x) **ಈ ಕೆಳಗಿನ ಯಾವುದಾದರೂ ಒಂದರಲ್ಲಿ ಪಾಲ್ಗೊಳ್ಳುವುದು.**

i) ಶಿಲಾರೋಹಣ – Rock Climbing
ii) ಚಾರಣ – Trekking
iii) ತೆಪ್ಪದ ಮೇಲೆ ದಾಟುವುದು – Rafting
iv) ಪ್ಯಾರಾಸೆಯ್‌ಲಿಂಗ್ – Para Sailing
vi) ಪ್ಯಾರಾ ಜಂಪಿಂಗ್ – Para Jumping

ಅಥವಾ

ರಾಷ್ಟ್ರೀಯ ಸಾಹಸ ಸಂಸ್ಥೆ ಅಥವಾ ತತ್ಸಮಾನ (ಅಂಗೀಕೃತ) ಇತರ ಸಂಸ್ಥೆಗಳು ನಡೆಸುವ ಸಾಹಸ ಕಾರ್ಯಕ್ರಮದಲ್ಲಿ ಭಾಗವಹಿಸುವುದು.

xi) ಅ) ಮಹಿಳೆಯರ ಸಂರಕ್ಷಣೆಗಾಗಿ ಇರುವ ಕಾನೂನಿನ ಬಗ್ಗೆ ಅರಿವು.

ಆ) ಮಹಿಳೆಯರು ಮತ್ತು ಹೆಣ್ಣುಮಗುವಿನ ಮೇಲಿನ ದೌರ್ಜನ್ಯವನ್ನು ತಡೆಗಟ್ಟಲು ಒಂದು ಆಂದೋಲನವನ್ನು ಏರ್ಪಡಿಸುವುದು.

xii) B.P. 6 / ಸೂರ್ಯನಮಸ್ಕಾರ / ಏರೋಬಿಕ್ಸ್ ಅನ್ನು ಅಭ್ಯಾಸ ಮಾಡುವುದು.

xiii) ನಿಮ್ಮ ಶಾಲೆ/ ಕಾಲೇಜು/ಮನೆ/ಬಡಾವಣೆ ಹತ್ತಿರ ಇರುವ ಕಾರ್ಖಾನೆಗೆ ಭೇಟಿ ನೀಡಿ, ಅಲ್ಲಿ ಉತ್ಪಾದಿಸುವ ಸಾಮಾನುಗಳ ತಯಾರಿಕಾ ವಿಧಾನವನ್ನು ಅರ್ಥಮಾಡಿಕೊಂಡು ಶ್ರಮಿಕರ ಘನತೆಯನ್ನು ಅರಿಯುವುದು.

18.2 ಜಲರೇಂಜರ್

ಮೇಲಿನ ನಿಪುಣ್ ಪರೀಕ್ಷೆ ಜೊತೆಗೆ ಕೆಳಗಿನ ಪರೀಕ್ಷೆಗಳನ್ನು ಪೂರ್ಣಗೊಳಿಸಬೇಕು.

1. 50 ಮೀ. ಈಜುವುದು.
2. ದೋಣಿಯನ್ನು ನೀರಿನಿಂದ ಹೊರತರುವ ಮತ್ತು ನೀರಿಗೆ ಇಳಿಸುವುದನ್ನು ತಿಳಿದಿರುವುದು.
3. ಸರಳ ಪದಗಳನ್ನು ಸೆಮಫೋರ್ ಸಂಕೇತದ ಮೂಲಕ ಸ್ವೀಕರಿಸುವ ಮತ್ತು ಕಳುಹಿಸುವ ವಿಧಾನವನ್ನು ತಿಳಿದಿರುವುದು.
4. ನಿಮ್ಮ ಕ್ಷೇತ್ರದಲ್ಲಿ ಕಂಡುಬರುವ ಕನಿಷ್ಠ 3 ನಕ್ಷತ್ರ ರಾಶಿಗಳನ್ನು ಗುರುತಿಸುವುದು.
5. ನೆರೆ ರಾಷ್ಟ್ರಗಳ ರಾಷ್ಟ್ರಧ್ವಜಗಳ ಬಗ್ಗೆ ತಿಳಿಯುವುದು.

18.3 ವಾಯು ರೇಂಜರ್

ಮೇಲಿನ ರೇಂಜರ್‌ನ ನಿಪುಣ್ ಪರೀಕ್ಷೆಗಳೊಂದಿಗೆ ಈ ಕೆಳಗಿನವುಗಳನ್ನು ಪೂರ್ಣಗೊಳಿಸಬೇಕು.

1. ಪ್ಯಾರಾಶೂಟ್ ಮತ್ತು ವಿಮಾನದ ಉಡಾವಣೆ ಸಾಧನ (Ejection sets) ಬಗ್ಗೆ ತಿಳಿಯುವುದು.
2. ಒಂದು ವಾಯು ಮಾದರಿಯನ್ನು (Aero model) ಬಳಸಿ ಕಾರ್ಯನಿರ್ವಹಿಸಿ ಅದನ್ನು ಸಂರಕ್ಷಿಸುವುದು.
3. ವಾಯುಯಾನದ ಅಪಘಾತದಲ್ಲಿ ಅಪಘಾತಕ್ಕೀಡಾದ ವಿಮಾನಚಾಲಕರನ್ನು ರಕ್ಷಿಸುವ ಕ್ರಮವನ್ನು ತಿಳಿದಿರುವುದು.
4. ವಿಮಾನದ ಚಾಲಕ ಕೊಠಡಿಯಲ್ಲಿ ಇರುವ ಅಳತೆಕೋಲು (Guage) ಗಳ ಬಗ್ಗೆ ತಿಳಿದಿರುವುದು.

19. ಗ್ರಾಮೀಣ ರೇಂಜರ್

ನಿಪುಣ್ ಪರೀಕ್ಷೆಗಳು

i) ಈಗಿರುವ ಪಠ್ಯಕ್ರಮದ ಬದಲು ಮೇಲೆ ತಿಳಿಸಿರುವ ರೇಂಜರ್ ಪಠ್ಯಕ್ರಮವನ್ನು ಅನುಸರಿಸುವುದು.

ii) **ಸಮುದಾಯ ಸೇವೆ**

ಅ) ಗ್ರಾಮೀಣ ಅಭಿವೃದ್ಧಿಗಾಗಿ, ತನ್ನ ಗ್ರಾಮದ ಸಮೀಕ್ಷೆ ನಡೆಸಿ ಮುಖ್ಯವಾದ ಅಭಿವೃದ್ಧಿ ಕಾರ್ಯಗಳನ್ನು ಗುರುತಿಸುವುದು.

ಆ) ಗ್ರಾಮೀಣ ಅಭಿವೃದ್ಧಿಗಾಗಿ ಸರ್ಕಾರ ಕೈಗೊಳ್ಳುತ್ತಿರುವ ಯೋಜನೆಗಳ ಬಗ್ಗೆ ತಿಳಿಯುವುದು.

ಇ) ಸಮುದಾಯಕ್ಕೆ ಅಗತ್ಯವಾದ ಸೇವೆಯನ್ನು ಕನಿಷ್ಠ 3 ತಿಂಗಳಾದರೂ ಕೈಗೊಳ್ಳುವುದು.

ಗ್ರಾಮೀಣ ರೇಂಜರ್‌ಗಳಿಗೆ ಸೂಚನೆ: ಮೇಲಿನ ಎಲ್ಲ ಪರೀಕ್ಷೆಗಳಲ್ಲೂ ಗ್ರಾಮೀಣ ರೇಂಜರ್ ಸಹ ಅರ್ಹತೆ ಪಡೆಯಬೇಕು. ಯಾವುದಾದರೂ ವಿಷಯಗಳು ಕ್ಲಿಷ್ಟವಾಗಿದ್ದಲ್ಲಿ ಅಥವಾ ಗ್ರಾಮೀಣ ರೇಂಜರ್‌ಗಳಿಗೆ ಸಂಬಂಧಪಡದಿದ್ದಲ್ಲಿ ಅವುಗಳನ್ನು ಜಿಲ್ಲಾ ಸಂಘಟನಾ ಆಯುಕ್ತರು ಮತ್ತು ರಾಜ್ಯ ಸಂಘಟನಾ ಆಯುಕ್ತರ ಶಿಫಾರಸಿನೊಂದಿಗೆ, ರಾಜ್ಯ ಮುಖ್ಯ ಆಯುಕ್ತರ ಅನುಮತಿ ಪಡೆದು ಸೂಕ್ತ ಸ್ಥಳೀಯ ಚಟುವಟಿಕೆ/ ಯೋಜನೆಗಳು ಬದಲಾಯಿಸ ಬಹುದು. ಈ ವಿನಾಯತಿ ಪ್ರಮಾಣಪತ್ರವನ್ನು ಪರೀಕ್ಷಾ ಶಿಬಿರದ ಸಮಯದಲ್ಲಿ ಹಾಜರುಪಡಿಸುವುದು.

ಸೂಚನೆ:

i) ಸ್ಥಳೀಯ ಅಥವಾ ಜಿಲ್ಲಾ ಸಂಸ್ಥೆಯವರು ನೇಮಿಸಿದ ಪರೀಕ್ಷಕರ ಸಮ್ಮುಖದಲ್ಲಿ ಅವರಿಗೆ ತೃಪ್ತಿಕರವಾಗುವಂತೆ ಮುಗಿಸಿದ ಮೇಲೆ, ಜಿಲ್ಲಾ ಸಂಘಟನಾ ಆಯುಕ್ತರು ಪರೀಕ್ಷಕರು ನೀಡಿದ ಪ್ರಮಾಣಪತ್ರದ ಆಧಾರದ ಮೇಲೆ ಸ್ಥಳೀಯ/ಜಿಲ್ಲಾ ಸಂಸ್ಥೆಯವರು "ನಿಪುಣ್" ಪದಕವನ್ನು ನೀಡುತ್ತಾರೆ.

ii) ನಿಪುಣ್ ಪದಕವು ಹಸಿರು ಬಣ್ಣದ ಹತ್ತಿ ಅಥವಾ ಉಣ್ಣೆಯ ಬಟ್ಟೆಯಿಂದ ಮಾಡಿದ ಒಂದು ಜೊತೆ flash (ಬಟ್ಟೆಯ ಚೂರುಗಳು) ಆಗಿರುತ್ತದೆ. ಇದರ ಮೇಲೆ ಎಂದು 'R' ಎಂದು ಕೆಂಪುಬಣ್ಣದಲ್ಲೂ ಕೆಳಭಾಗದಲ್ಲಿ ಒಂದು ಹಳದಿಯ ಪಟ್ಟಿ ಇರುತ್ತದೆ.

iii) ಇವುಗಳನ್ನು ಎರಡೂ ಭುಜಪಟ್ಟಿಗಳ ಮೇಲೆ ಧರಿಸುವುದು.

20. ರಾಜ್ಯ ಪುರಸ್ಕಾರ ರೇಂಜರ್

1. ಚುನಾವಣಾ ಆಯೋಗದ ಜಾಲತಾಣದ ಬಗ್ಗೆ ಅರಿತು ಕೊಂಡು ಕನಿಷ್ಠ ಇಬ್ಬರು ವ್ಯಕ್ತಿಗಳಿಗೆ ಚುನಾವಣಾ ಪಟ್ಟಿಯಲ್ಲಿ ನೋಂದಾಯಿಸಿಕೊಳ್ಳಲು ಸಹಾಯ ಮಾಡುವುದು.

2. ಹವ್ಯಾಸ/ ಕರಕೌಶಲ/ವೃತ್ತಿಶೀಲ ಕೌಶಲಗಳಲ್ಲಿ ಪ್ರಗತಿಯನ್ನು ತೋರಿಸುವುದು.

3. ಧಾರ್ಮಿಕ ಸಹಿಷ್ಣುತೆಯ ಬಗ್ಗೆ ಪ್ರಬಂಧ ರಚಿಸಿ ಭಾಷಣ ಮಾಡುವುದು ಅಥವಾ ಅನ್ಯಧರ್ಮದ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ವರದಿಯನ್ನು ತಂಡದ ನಾಯಕಿ/ ತಂಡ ಸಭೆಗೆ ಸಲ್ಲಿಸುವುದು.

4. ಮಕ್ಕಳು/ವೃದ್ಧರು/ವಿಶೇಷ ಸಾಮರ್ಥ್ಯ ಹೊಂದಿರುವವರು (Differently abled) /ವೃದ್ಧಾಶ್ರಮ ಅಥವಾ ಅನಾಥಾಶ್ರಮ ಅಥವಾ ಸೂಕ್ತ ಸ್ಥಳದಲ್ಲಿರುವ ರೋಗಿಗಳಿಗೆ ಸಹಾಯ ಮಾಡುವ ಯೋಜನೆಯನ್ನು ತಂಡ ನಾಯಕಿಯ ಜೊತೆ ಸಮಾಲೋಚಿಸಿ, ಕನಿಷ್ಟ ಒಂದು ತಿಂಗಳ ಕಾಲ ಕಾರ್ಯನಿರ್ವಹಿಸುವುದು.

ಅಥವಾ

ಗ್ರಾಮೀಣರ ಅಭಿವೃದ್ಧಿಗಾಗಿ ಯೋಜನೆಯನ್ನು ತಯಾರಿಸಿ ಸದಸ್ಯರ ಸಹಾಯದಿಂದ ಹಣಕಾಸು ವ್ಯವಸ್ಥೆ ಮಾಡಿಕೊಂಡು, ಕನಿಷ್ಠ ಅವರೊಡನೆ ಒಂದು ವಾರ ಕಾಲ ಇದ್ದು, ಯೋಜನೆಯನ್ನು ಅನುಷ್ಠಾನಗೊಳಿಸುವುದು.

5. ಸಾರ್ವಜನಿಕ ಸಂಸ್ಥೆ/ ಕಟ್ಟಡ/ವಿನ್ಯಾಸದಲ್ಲಿ ಕನಿಷ್ಠ 3 ತಿಂಗಳು ವಾರಕ್ಕೆ 2 ಗಂಟೆಯಂತೆಯಾದರೂ ಸೇವೆ ಸಲ್ಲಿಸುವುದು.

6. ವ್ಯವಹಾರಿಕ ವಿಶ್ಲೇಷಣೆ (Transactional Analysis) ಇದರ ಪುಸ್ತಕವನ್ನು ಅಧ್ಯಯನ ಮಾಡಿ, ಮೂರು ಅಹಂಭಾವ/ ಸ್ವಾಭಿಮಾನದ ಸ್ಥಾನಗಳು (Ego Status) ಮತ್ತು ವ್ಯವಹಾರಗಳನ್ನು ಅರಿಯುವುದು.

7. **ಈ ಕೆಳಗಿನ ವಿಷಯಗಳ ಬಗ್ಗೆ ಅರಿವು.**

i) **ಶಿಬಿರ ಕೌಶಲ್ಯ**

ಅ) ಡಬ್ಬಲ್ ಫ್ಲೈ ಗುಡಾರವನ್ನು ಬಿಡಿಸಲು, ಕಟ್ಟಲು, ನಿಲ್ಲಿಸಲು, ಮತ್ತು ಮಡಿಸಿ ಇಡಲು

ಆ) ಶೌಚಾಲಯ ಹಾಗೂ ಅಡುಗೆಮನೆ ಇವುಗಳೊಂದಿಗೆ ಶಿಬಿರದ ರಚನೆ/ವಿನ್ಯಾಸ

ಇ) ಇಬ್ಬರಿಗಾಗುವಷ್ಟು ಆಹಾರವನ್ನು ಕಾಡು ಜನರು (Back Woods Man) ಅಡುಗೆ ಮಾಡಿಟ್ಟ ರೀತಿಯಲ್ಲಿ ತಯಾರಿಸುವುದು

ii) **ಅಗ್ರ್ರಗಾಮಿತ್ವ:**

ಅ) ಕುಣಿಕೆಗಂಟು (Double Sheet Bend, Scaffold hitch, Bowline on the bight)ಗಳನ್ನು ಹಾಕಲು ಮತ್ತು ಅದರ ಉಪಯೋಗವನ್ನು ತೋರಿಸಬೇಕು.

ಆ) ಇತರ ರೇಂಜರ್‌ಗಳೊಂದಿಗೆ ಸೇರಿ ಯಾವುದಾದರೂ ಬಂದು ಅಗ್ರ್ರಗಾಮಿತ್ವ ಯೋಜನೆಯನ್ನು ಸಿದ್ಧಪಡಿಸುವುದು.

iii) ನಕ್ಷಾ ಕೌಶಲ

ಅ) ತ್ರಿಕೋಣ ವಿಧಾನವನ್ನು ತಿಳಿದುಕೊಂಡು ಬಂದು ಸಣ್ಣ ಪ್ರದೇಶದ ನಕ್ಷೆಯನ್ನು ತಯಾರಿಸುವುದು.

ಆ) ಒಂದು ಕಿ.ಮೀ. ದೂರವನ್ನು ಕ್ರಮಿಸಿ ಅದರ ನಕ್ಷೆಯನ್ನು (Road Traverse) ರಸ್ತೆ ಅಡ್ಡಹಾಯಿ ವಿಧಾನದಲ್ಲಿ ತಯಾರಿಸುವುದು.

8. ಇತರ ರೇಂಜರ್‌ಗಳೊಂದಿಗೆ 3 ದಿನ ರಾತ್ರಿಯ ಸಾಹಸ ಶಿಬಿರದಲ್ಲಿ ಪಾಲ್ಗೊಂಡು, ಮೂರು ರಾತ್ರಿಗಳನ್ನು ಗುಡಾರದಲ್ಲಿ ಕಳೆಯುವುದು.

ಅಥವಾ

ಭಾರತ್ ಸ್ಕೌಟ್ ಮತ್ತು ಗೈಡ್ಸ್ ರಾಷ್ಟ್ರೀಯ ಅಥವಾ ರಾಜ್ಯ ಸಾಹಸ ಸಂಸ್ಥೆಯ ಕಾರ್ಯಕ್ರಮದಲ್ಲಿ ಭಾಗವಹಿಸುವುದು.

9. ಭಾರತದ ಯಾವುದಾದರೂ ಒಂದು ರಾಜ್ಯದ ಸಂಸ್ಕೃತಿ ಮತ್ತು ಪರಂಪರೆಯನ್ನು ದೃಶ್ಯ–ಶ್ರಾವ್ಯ ಮಾಧ್ಯಮದ ಮೂಲಕ ಪ್ರದರ್ಶಿಸುವುದು.

10. ರೇಂಜರ್‌ಗಳಲ್ಲಿ ಉಳಿತಾಯದ ಅಭ್ಯಾಸವನ್ನು ಬೆಳೆಸಲು, ಬ್ಯಾಂಕ್‌ನಲ್ಲಿ ಖಾತೆಯನ್ನು ತೆರೆದು ವ್ಯವಹಾರದ ಬಗ್ಗೆ ಅರಿವು ಮೂಡಿಸುವುದು.

ಅಥವಾ

ತನ್ನ ಗ್ರಾಮ ಅಥವಾ ಊರಿನಲ್ಲಿ ಒಂದಾದರೂ ಮಹಿಳಾ ಸ್ವಸಹಾಯ ಗುಂಪಿಗೆ ಮಾರ್ಗದರ್ಶನ ನೀಡಿ ಪ್ರೋತ್ಸಾಹಿಸುವುದು.

11. 6 ತಿಂಗಳ ಕಾಲ ಕನಿಷ್ಠ ವಾರಕ್ಕೆರಡು ಗಂಟೆಗಳಂತೆ, 48 ಗಂಟೆಗಳ ಕಾಲ "Free Being me" (ನನ್ನ ಮುಕ್ತ ಇರುವಿಕೆ) ತರಬೇತುದಾರಳಾಗಿ ಕೆಲಸ ಮಾಡುವುದು.

ಅಥವಾ

6 ತಿಂಗಳ ಕಾಲ ಕನಿಷ್ಠ ವಾರಕ್ಕೆರಡು ಗಂಟೆಗಳಂತೆ ಸಮುದಾಯ ಅಭಿವೃದ್ಧಿ ಯೋಜನೆಯಲ್ಲಿ ಈ ಕೆಳಕಂಡ ಯಾವುದಾದರೂ 2 ವಿಷಯಗಳಲ್ಲಿ ಭಾಗವಹಿಸುವುದು.

ಅ) ಲಿಂಗ ಸಮಾನತೆ ಮತ್ತು ಮಹಿಳಾ ಸಬಲೀಕರಣ.

ಆ) ಶಿಶು ಮರಣವನ್ನು ತಡೆಗಟ್ಟುವುದು.

ಇ) ತಾಯಿಯ ಆರೋಗ್ಯವನ್ನು ಸುಧಾರಿಸುವುದು.

ಈ) HIV/ AIDS, ಮಲೇರಿಯಾ ಮತ್ತು ಇತರ ರೋಗಗಳನ್ನು ತಡೆಗಟ್ಟುವುದು.

ಉ) ಪರಿಸರ ಸಂರಕ್ಷಣೆ

12. ಸಾಮಾಜಿಕ ಅಂತರ್ಜಾಲ ತಾಣದಲ್ಲಿ ವಿಳಾಸವನ್ನು ಸೃಷ್ಟಿಸಿ ಭಾರತದ ಯಾವುದಾದರೂ ರಾಜ್ಯದ Scout-Guide ಸಂಸ್ಥೆಯ ಹತ್ತು ಸದಸ್ಯರೊಂದಿಗೆ ಸಂಪರ್ಕದಲ್ಲಿರುವುದು.

13. ರೇಂಜರ್ ವಯಸ್ಸಿನ 3 ಯುವತಿಯರನ್ನು ರೇಂಜರ್ ತಂಡಕ್ಕೆ ಸೇರಲು ಪ್ರೇರೇಪಿಸಿ ಅವರ ಆಗುಹೋಗುಗಳನ್ನು ನೋಡಿಕೊಳ್ಳುವುದು.

14. **ಈ ಕೆಳಗಿನ ಪ್ರಾವೀಣ್ಯತಾ ಪದಕಗಳಿಗೆ ಅರ್ಹತೆ ಗಳಿಸುವುದು.**

ಅ) ವಿಕೋಪಕ್ಕೆ ಸಿದ್ಧತೆ (Disaster Preparedness)

ಆ) ಸಮುದಾಯ ಕಾರ್ಯಕರ್ತೆ/ ಗ್ರಾಮೀಣ ಕಾರ್ಯಕರ್ತೆ / ಜೀವಪರಿಸರ ಶಾಸ್ತ್ರಜ್ಞೆ (Rural Worker/Community Worker / Ecologist)

15. Ambulance (ಚರಚಿಕಿತ್ಸೆ) ಪದಕ CPR ಅರಿವಿನೊಂದಿಗೆ (Cardio Pulmonary Resuscitation)

ಜಲರೇಂಜರ್

ಮೇಲಿನ ಪರೀಕ್ಷೆಗಳ ಜೊತೆಗೆ ಜಲರೇಂಜರ್ ಈ ಕೆಳಗಿನ ಪರೀಕ್ಷೆಗಳಲ್ಲಿ ಯಶಸ್ವಿಯಾಗಿ ಪೂರ್ಣಗೊಳಿಸತಕ್ಕದು.

1. ಹಡಗಿನ ಬಗ್ಗೆ ಸಾಮಾನ್ಯ ಅರಿವನ್ನು ಹೊಂದುವುದು.
2. ಸೆಮಫೋರ್ ಸಂಕೇತಗಳ ಮೂಲಕ ಸುದ್ದಿ ಕಳುಹಿಸುವುದು ಮತ್ತು ಸ್ವೀಕರಿಸುವುದು.
3. ರಾಶಿ ಮಂಡಲ (Zodiac)ದ ಬಗ್ಗೆ ತಿಳಿಯುವುದು.
4. ಹವಾಮಾನ, ಉಬ್ಬರವಿಳಿತ ಮತ್ತು ಸಾಗರದ ಸೆಳವುಗಳ ಬಗ್ಗೆ ತಿಳಿಯುವುದು.
5. ನಕಾಶೆ ಅಥವಾ ರೇಖಾಪಟ ಓದುವ ಮತ್ತು ಗುರುತಿಸುವ ಸಾಮರ್ಥ್ಯವನ್ನು ಹೊಂದಿರುವುದು.

ವಾಯು ರೇಂಜರ್

ಮೇಲಿನ ಪರೀಕ್ಷೆಗಳ ಜೊತೆಗೆ ವಾಯುರೇಂಜರ್ ಕೆಳಗಿನ ಪರೀಕ್ಷೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸತಕ್ಕದ್ದು.

1. ಉಡಾವಣೆಯ ಅಂತಾರಾಷ್ಟ್ರೀಯ ತುರ್ತು ಸಂಕೇತಗಳನ್ನು ತಿಳಿಯುವುದು.
2. ವಾಯುಯಾನದ ಮಾದರಿಯ (Aeromodel) ಉಡಾವಣೆಯನ್ನು ಪ್ರದರ್ಶಿಸುವುದು.
3. ವಾಯುಯಾನ ಮಾದರಿಯಲ್ಲಿ ನ್ಯೂನ್ಯತೆಗಳನ್ನು ದುರಸ್ತಿ ಮಾಡುವುದನ್ನು ತಿಳಿದಿರುವುದು.
4. ರಾಷ್ಟ್ರೀಯ ಶೌರ್ಯ ಪುರಸ್ಕಾರಗಳ ಬಗ್ಗೆ ತಿಳಿದುಕೊಳ್ಳುವುದು.

5. ವಾಯುಯಾನದಲ್ಲಿ ಸಂಭವಿಸುವ ಬೆಂಕಿ ಅಪಘಾತವನ್ನು ಶಮನ ಮಾಡುವ ಅಗ್ನಿಶಾಮಕ ತತ್ವಗಳನ್ನು ತಿಳಿಯುವುದು.

6. ಚಾಲನೆಯಲ್ಲಿರುವ ಯಾನಗಳ ಮೇಲೆ ವರ್ತಿಸುವ ಬಲಗಳ ಬಗ್ಗೆ ತಿಳಿಯುವುದು.

ಗ್ರಾಮೀಣ ರೇಂಜರ್ ರಾಜ್ಯಪುರಸ್ಕಾರ್ ಪರೀಕ್ಷೆಗಳು ಮತ್ತು ಸೂಚನೆ

ರಾಜ್ಯ ಪುರಸ್ಕಾರ್ ರೇಂಜರ್‌ಗೆ ಅನ್ವಯಿಸುವ ಎಲ್ಲ ಪರೀಕ್ಷೆಗಳೂ ಗ್ರಾಮೀಣ ರೇಂಜರ್‌ಗೆ ಅನ್ವಯಿಸುತ್ತವೆ. ಯಾವುದಾದರೂ ಕ್ಲಿಷ್ಟ ಅಥವಾ ಗ್ರಾಮೀಣ ರೇಂಜರ್‌ಗೆ ಸಂಬಂಧವಿಲ್ಲದಿದ್ದಲ್ಲಿ ಅವುಗಳನ್ನು ಜಿಲ್ಲಾ ಮುಖ್ಯ ಆಯುಕ್ತರು ಮತ್ತು ರಾಜ್ಯ ಸಂಘಟನಾ ಆಯುಕ್ತರ ಶಿಫಾರಸ್ಸಿನೊಂದಿಗೆ ರಾಜ್ಯ ಮುಖ್ಯ ಆಯುಕ್ತರ ಅನುಮತಿ ಪಡೆದು ಸೂಕ್ತ ಸ್ಥಳೀಯ ಚಟುವಟಿಕೆಗಳು/ ಯೋಜನೆಗಳಿಗೆ ಬದಲಾವಣೆ ಮಾಡಬಹುದು. ಆ ಪ್ರದೇಶಕ್ಕೆ ಸರಿ ಹೊಂದುವ ವಿಶೇಷ ಬದಲಿ ಚಟುವಟಿಕೆಗಳನ್ನು ರಾಜ್ಯ ಮುಖ್ಯ ಆಯುಕ್ತರು ಅನುಮತಿಸಿ, ಈ ಬಗ್ಗೆ ಪ್ರಮಾಣ ಪತ್ರವನ್ನು ಪರೀಕ್ಷಾ ಶಿಬಿರದಲ್ಲಿ ಹಾಜರುಪಡಿಸಬೇಕು.

ಸೂಚನೆ :(i) ನಿಪುಣ್ ಪದಕ ಈಗಾಗಲೇ ಗಳಿಸಿರುವ ರೇಂಜರ್ ರಾಜ್ಯ ಪುರಸ್ಕಾರ ಪಠ್ಯಕ್ರಮದ ಅರ್ಹತಾ ಪದಕಗಳಲ್ಲಿ ಸಿದ್ಧತೆ ಹೊಂದಿ, ರಾಜ್ಯ ಸಂಸ್ಥೆಯು ರಾಜ್ಯ ಸಂಘಟನಾ ಆಯುಕ್ತ (ಗೈಡ್)ರವರ ಮೇಲ್ವಿಚಾರಣೆಯಲ್ಲಿ ನಡೆಸುವ ಪರೀಕ್ಷಾ ಶಿಬಿರದಲ್ಲಿ ಹಾಜರಾಗಬೇಕು. ಈ ಶಿಬಿರದಲ್ಲಿ ರೇಂಜರಳ ಜ್ಞಾನ ಮತ್ತು ಕೌಶಲಗಳನ್ನು ಪರೀಕ್ಷಿಸಲಾಗುತ್ತದೆ. ಅರ್ಹತೆಯನ್ನು ಹೊಂದಿದ ರೇಂಜರ್ ರಾಜ್ಯ ಪುರಸ್ಕಾರ್ ಪ್ರವಾಣಪತ್ರ ಹಾಗೂ ಪದಕವನ್ನು ಹೊಂದಲು ಯೋಗ್ಯಳಾಗುತ್ತಾಳೆ.

ii) ರಾಜ್ಯ ಪುರಸ್ಕಾರ್ ರೇಂಜರ್ ಪದಕವು ಕೆಳಗಡೆ ಎರಡು ಹಳದಿ ಪಟ್ಟಿಯೊಂದಿಗೆ ಮೇಲೆ ಕೆಂಪು 'R' ಎಂಬ ಅಕ್ಷರ ಇರುವ ಹಸಿರು ಬಣ್ಣದ ಹತ್ತಿ ಅಥವಾ ಉಣ್ಣೆಯ ಭುಜ ಪದಕ.

iii) ಈ ಪದಕವನ್ನು ನಿಪುಣ್ ಪದಕವಿದ್ದ ಜಾಗದಲ್ಲಿ ಹಾಕಿಕೊಳ್ಳುವುದು (ಭುಜದ ಪಟ್ಟಿಯ ಮೇಲೆ).

iv) ರಾಜ್ಯ ಪುರಸ್ಕಾರ್ ಪ್ರಶಸ್ತಿಯನ್ನು ರಾಜ್ಯಪಾಲರು ಅಥವಾ ರಾಜ್ಯ ಸಂಸ್ಥೆಯ ಪೋಷಕರು/ ಅಧ್ಯಕ್ಷರು ನೀಡುತ್ತಾರೆ.

v) ಈ ಪುರಸ್ಕಾರವನ್ನು ರಾಜ್ಯಪಾಲರು / ರಾಜ್ಯ ಸಂಸ್ಥೆಯ ಪೋಷಕರು / ಅಧ್ಯಕ್ಷರು, ರಾಜ್ಯ ಮುಖ್ಯ ಆಯುಕ್ತರ ಶಿಫಾರಸ್ಸಿನ ಮೇರೆಗೆ ನೀಡುತ್ತಾರೆ ಮತ್ತು ವಿಶೇಷ/ವಿಧಿಯಿಲ್ಲದ ಸಂದರ್ಭಗಳಲ್ಲಿ ರಾಜ್ಯ ಪ್ರಧಾನ ಆಯುಕ್ತರು ಇದನ್ನು ಹಿಂತೆಗೆದುಕೊಳ್ಳಬಹುದು.

21. ರಾಷ್ಟ್ರಪತಿ ರೇಂಜರ್ ಪ್ರಶಸ್ತಿ

ಅ) (i) ರಾಷ್ಟ್ರಪತಿ ರೇಂಜರ್ ಪ್ರಶಸ್ತಿಯನ್ನು ಭಾರತದ ರಾಷ್ಟ್ರಪತಿಗಳು ನೀಡುತ್ತಾರೆ.

ii) ರಾಷ್ಟ್ರಪತಿ ಪ್ರಶಸ್ತಿಗೆ ಅರ್ಹಳಾಗಲು ರಾಜ್ಯಪುರಸ್ಕಾರ್ ರೇಂಜರ್ ಕನಿಷ್ಠ ಒಂದು ವರ್ಷವಾದರೂ ಕೆಲಸ ಮಾಡಬೇಕು.



iii) 25 ವರ್ಷ ತುಂಬಿದ ನಂತರ ರೇಂಜರ್, ರಾಷ್ಟ್ರಪತಿ ರೇಂಜರ್ ಪ್ರಶಸ್ತಿಗೆ ಅನರ್ಹಳು.

iv) ಸನ್ನದು ಹೊಂದಿರುವ ರೇಂಜರ್ ನಾಯಕಿ ಅವಳ ತರಬೇತಿ ಅರ್ಹತೆಯನ್ನು ಗಣನೆಗೆ ತೆಗೆದುಕೊಳ್ಳದೆ ರಾಷ್ಟ್ರೀಯ ಸಂಸ್ಥೆಗೆ ರಾಜ್ಯ ಸಂಸ್ಥೆಯ ಮೂಲಕ ನಿಗದಿತ ಅರ್ಜಿಯನ್ನು (ಅರ್ಜಿ SHQ/ BSG ಜಾಲತಾಣದಲ್ಲಿ ಲಭ್ಯವಿರುತ್ತದೆ) ಸಲ್ಲಿಸಿ ರಾಜ್ಯಪುರಸ್ಕಾರ್ ರೇಂಜರ್‌ಳು, ರಾಷ್ಟ್ರಪತಿ ರೇಂಜರ್ ಪ್ರಶಸ್ತಿಗೆ ತಯಾರಿ ನಡೆಸಿರುವುದರ ಬಗ್ಗೆ ತಿಳಿಸುವುದು. ರೇಂಜರ್ ನಾಯಕಿಯ ಗೈರುಹಾಜರಿಯಲ್ಲಿ ಸಹಾಯಕ ರೇಂಜರ್ ನಾಯಕಿಯು ಅರ್ಜಿಯನ್ನು ಶಿಫಾರಸು ಮಾಡಬಹುದು.

v) ಒಂದು ವರ್ಷದಲ್ಲಿ ರೇಂಜರ್ ನಾಯಕಿಯು ತನ್ನ ದಳದ ಒಟ್ಟು ಸಂಖ್ಯೆಯ 25% (ದಳದಲ್ಲಿರುವ ರೇಂಜರ್‌ಗಳ ಸಂಖ್ಯೆ 24ನ್ನು ಮೀರಬಾರದು) ರೇಂಜರ್‌ಗಳನ್ನು ಮಾತ್ರ ರಾಷ್ಟ್ರಪತಿ ಪ್ರಶಸ್ತಿಗೆ ಶಿಫಾರಸ್ಸು ಮಾಡಬಹುದು. ವಿಶೇಷ ಸಂದರ್ಭಗಳಲ್ಲಿ ಜಿಲ್ಲಾ ಮುಖ್ಯ ಆಯುಕ್ತರು ಮತ್ತು ರಾಜ್ಯ ಮುಖ್ಯ ಆಯುಕ್ತರು ದಳದಲ್ಲಿರುವ 50% ರೇಂಜರ್‌ಗಳನ್ನು ಒಂದು ವರ್ಷದಲ್ಲಿ ಶಿಫಾರಸು ಮಾಡಬಹುದು. ರಾಷ್ಟ್ರಪತಿ ಪ್ರಶಸ್ತಿ ಪರೀಕ್ಷೆಯ ಸಮಯದಲ್ಲಿ ರೇಂಜರ್ ತನ್ನ ವೈಯಕ್ತಿಕ ಪ್ರಗತಿಪಟ್ಟಿಯನ್ನು ಹಾಜರುಪಡಿಸಬೇಕು.

vi) ರಾಷ್ಟ್ರಪತಿ ರೇಂಜರ್ ಪ್ರಶಸ್ತಿ ನೀಡಲು ಅಧಿಕಾರ ಹೊಂದಿರುವ ರಾಷ್ಟ್ರೀಯ ಮುಖ್ಯ ಆಯುಕ್ತರು, ಪದಕಗಳು, ಪರೀಕ್ಷೆಗಳು, ಸೇವೆಗಳು ಇತರೆ ವಿಷಯಗಳ ಬಗ್ಗೆ ಆಗಿಂದಾಗ್ಗೆ ಸೂಕ್ತ ನಿರ್ದೇಶನಗಳನ್ನು ಕೊಡುವರು.

vii) ರಾಷ್ಟ್ರೀಯ ಮುಖ್ಯ ಆಯುಕ್ತರ ಶಿಫಾರಸಿನ ಮೇರೆಗೆ ರಾಷ್ಟ್ರಪತಿಯವರು ಈ ಪ್ರಶಸ್ತಿ ನೀಡುವರು ಮತ್ತು ವಿಶೇಷ/ ವಿಧಿಯಿಲ್ಲದ ಸಂದರ್ಭಗಳಲ್ಲಿ ರಾಷ್ಟ್ರೀಯ ಮುಖ್ಯ ಆಯುಕ್ತರು ಪ್ರಶಸ್ತಿಯನ್ನು ಹಿಂತೆಗೆದುಕೊಳ್ಳಬಹುದು.

viii) ಎಲ್ಲಾ ಅರ್ಹತೆಗಳನ್ನು ಪೂರೈಸಿದ ರಾಜ್ಯ ಪುರಸ್ಕಾರ್ ರೇಂಜರ್‌ಗಳನ್ನು ರಾಜ್ಯಮಟ್ಟದಲ್ಲಿ ಪರೀಕ್ಷಿಸಿ ರಾಜ್ಯ ಸಂಘಟನಾ ಆಯುಕ್ತರಿಂದ ಪ್ರಮಾಣೀಕರಿಸಿದ ಮೇಲೆ ರಾಷ್ಟ್ರೀಯ ಸಂಸ್ಥೆಯು ಏರ್ಪಡಿಸುವ ರಾಷ್ಟ್ರಪತಿ ರೇಂಜರ್ ಪ್ರಶಸ್ತಿ ಪರೀಕ್ಷಾ ಶಿಬಿರದಲ್ಲಿ ಆಯಾ ಪ್ರಾದೇಶಿಕ ನಿರ್ದೇಶಕರ ಮೇಲ್ವಿಚಾರಣೆಯಲ್ಲಿ ಪರೀಕ್ಷಿಸಲಾಗುವುದು.

ix) ರಾಷ್ಟ್ರಪತಿ ರೇಂಜರ್ ಪದಕವನ್ನು ಎಡತೋಳಿನ ಮಧ್ಯೆ ಸುತ್ತುವರಿದ ಪ್ರಾವೀಣ್ಯತಾ ಪದಕ ಮಧ್ಯೆ ಧರಿಸಿಕೊಳ್ಳಬೇಕು.

ಆ. ರಾಷ್ಟ್ರಪತಿ ರೇಂಜರ್ ಪರೀಕ್ಷೆಗಳು

1. **ಕೆಳಗಿನ ಯಾವುದಾದರೊಂದು ವಿಷಯದ ಬಗ್ಗೆ ತಂಡದ ಮಂತ್ರಾಲೋಚನಾ ಸಭೆಯಲ್ಲಿ ಚರ್ಚಿಸಿ ಅಂಕಿ-ಅಂಶಗಳು ಮತ್ತು ಸಂಗ್ರಹಿಸಿದ ಮಾಹಿತಿಯೊಂದಿಗೆ ಅನುಮತಿಗೆ ವರದಿಯನ್ನು ಸಲ್ಲಿಸುವುದು.**

   i) ಚಾಲ್ತಿಯಲ್ಲಿರುವ ವಿಶ್ವಮಟ್ಟದ ವಿಷಯ

   ii) WAGGSನ ಯಾವುದಾದರೂ ಎರಡು ಪ್ರದೇಶಗಳ ಬಗ್ಗೆ

   iii) **ರಾಷ್ಟ್ರಮಟ್ಟದ ವಿಷಯಗಳು-**

   ನಮ್ಮ ಸರ್ಕಾರ / ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳು ಮತ್ತು ವ್ಯವಸ್ಥೆಗಳು / ರಾಷ್ಟ್ರೀಯ ಶಿಕ್ಷಣ ನೀತಿ / ಸೇವಾ ಸಂಸ್ಥೆಗಳು / ಸಹಕಾರಿ ಸಂಸ್ಥೆಗಳು ಮುಂತಾದವು.

2. ತಂಡದ ಮಂತ್ರಾಲೋಚನಾ ಸಭೆಯ ಸಮ್ಮತಿಯ ಮೇರೆಗೆ ಆರೋಗ್ಯ/ಆಹಾರ ಉತ್ಪಾದನೆ/ ಪರಿಸರ ನೈರ್ಮಲ್ಯ ಅಥವಾ ಒಂದು ನಿರ್ದಿಷ್ಟ ಪ್ರದೇಶಕ್ಕೆ ಸರಿ ಹೊಂದುವ ಯಾವುದಾದರೂ

ಯೋಜನೆಯನ್ನು ಕನಿಷ್ಟ 3 ತಿಂಗಳ ಕಾಲ ಮಾಡಿ ವರದಿಯನ್ನು ಮಂತ್ರಾಲೋಚನಾ ಸಭೆಗೆ ಸಲ್ಲಿಸುವುದು.

3. ಜಿಲ್ಲಾ/ರಾಜ್ಯ/ರಾಷ್ಟ್ರೀಯ ಮಟ್ಟದ ಶಿಬಿರದಲ್ಲಿ ಕನಿಷ್ಠ ಐದು ದಿನಗಳು ಸೇವೆಯನ್ನು ಸಲ್ಲಿಸುವುದು.

4. ಸಮುದಾಯ ಸೇವಾ ಯೋಜನೆಯಲ್ಲಿ ಕನಿಷ್ಠ 30 ಗಂಟೆಗಳ ಕಾಲ, ವಾರಕ್ಕೆ ಒಮ್ಮೆಯಾದರೂ ಭಾಗವಹಿಸಿ 2 ತಿಂಗಳ ಕಾಲ ಕೆಲಸ ಮಾಡುವುದು.

5. ರಾಜ್ಯ/ರಾಷ್ಟ್ರ ಸಂಸ್ಥೆಯು ಏರ್ಪಡಿಸಿದ ಸಾಹಸ ಅಥವಾ ಚಾರಣ ಕಾರ್ಯಕ್ರಮದಲ್ಲಿ ಭಾಗವಹಿಸುವುದು.

ಅಥವಾ

ಭಾರತದ ಹೊರಗೆ ಯಾವುದಾದರೂ ಅಂತಾರಾಷ್ಟ್ರೀಯ ಶಿಬಿರ ಅಥವಾ ಕಾರ್ಯಕ್ರಮದಲ್ಲಿ (event) ಭಾಗವಹಿಸುವುದು.

ಅಥವಾ

ರಾಷ್ಟ್ರೀಯ ಸಾಹಸ ಸಂಸ್ಥೆಯಲ್ಲಿ ಅಂತಾರಾಷ್ಟ್ರೀಯ ಸಾಹಸ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದು.

6. ಕೌಶಲ್ಯ ಮತ್ತು ವೃತ್ತಿಪರ ಚಟುವಟಿಕೆಗಳಲ್ಲಿ ಮುಂದುವರೆದ ಪ್ರಗತಿಯನ್ನು ತೋರಿಸುವುದು.

7. ಬೇರೆ ರಾಜ್ಯ ಮತ್ತು ರಾಷ್ಟ್ರಗಳಿಗೆ ಸೇರಿದ ಚಳವಳಿಯ ಕನಿಷ್ಠ 20 ಸದಸ್ಯರೊಂದಿಗೆ ಅಂತರ್ಜಾಲದಲ್ಲಿ ಸ್ನೇಹವನು ಬೆಳೆಸುವುದು.

ಅಥವಾ

ಶಾಂತಿದೂತ / Messanger of Peace ಕಾರ್ಯಕ್ರಮದ ಸದಸ್ಯತ್ವ ಹೊಂದಿ 5 ಯೋಜನೆಗಳನ್ನು MOP ಜಾಲತಾಣದಲ್ಲಿ ಸೇರಿಸುವುದು.

ಅಥವಾ

ಗ್ರಾಮ/ತಾಲ್ಲೂಕು/ಜಿಲ್ಲಾ ಮಟ್ಟದಲ್ಲಿ ಚಳವಳಿಯ Visibility / ಗೋಚರತೆಯನ್ನು ಹರಡುವ ಭಾರತ್ ಸ್ಕೌಟ್ & ಗೈಡ್ ಸಂಸ್ಥೆಯ ಪ್ರಕಟಣೆಗಳಾದ ಗೀತ್ ಭಾರತಿ, ಸ್ವರ್ಣಸ್ವರಲೆಹರಿ, ದೇಶಭಕ್ತಿಗೀತೆಗಳು, ಜಾತ್ಯತೀತತೆ ಹಾಗೂ ರಾಷ್ಟ್ರೀಯ ಐಕ್ಯತೆಯನ್ನು ಸಾರುವ ಹಾಡುಗಳನ್ನು ತಂಡದ ಮೂಲಕ "ಗೀತ್ ಮಂಚ್" ಏರ್ಪಡಿಸಿ ಹಾಡುವುದು.

8. ಅ) **ವಿಪತ್ತು ನಿರ್ವಹಣಾ ಪ್ರಾವೀಣ್ಯತಾ ಪದಕವನ್ನು ಗಳಿಸುವುದು.**

ಆ) ಕೆಳಗಿನ ಯಾವುದಾದರೊಂದು ಪದಕಕ್ಕೆ ಅರ್ಹತೆ ಪಡೆಯುವುದು.

i) ಅತಿಥೇಯಳು – Hostess

ii) ವಿಶೇಷ ಉಡುಪಿನ ವಿನ್ಯಾಸ – Fashion Desigining

iii) ಮಾಹಿತಿ ತಂತ್ರಜ್ಞಾನ – Information Technology

iv) ಪತ್ರಿಕೋದ್ಯಮಿ – Journalist

v) AIDS ಬಗ್ಗೆ ತಿಳುವಳಿಕೆ

ಜಲರೇಂಜರ್

ಮೇಲಿನ ಪರೀಕ್ಷೆಗಳ ಜೊತೆಗೆ ಜಲರೇಂಜರ್ ಈ ಕೆಳಗಿನ ಪರೀಕ್ಷೆಗಳಲ್ಲೂ ಯಶಸ್ವಿಯಾಗಬೇಕು.

1. ನೀರಿನ ಕೆಳ ಮೇಲ್ಮೈಯಲ್ಲಿ 10 ಮೀಟರ್ ಈಜುವುದು ಅಥವಾ ನೀರಿಗೆ ಜಿಗಿಯುವುದು (Dive).

2. ನೀರಿನಲ್ಲಿ ಮುಳುಗುತ್ತಿರುವವರನ್ನು ರಕ್ಷಿಸುವ ಕ್ರಮವನ್ನು ತಿಳಿಯುವುದು.

3. ನಮ್ಮ ರಾಷ್ಟ್ರದ ಹಡಗಿನ ವ್ಯವಸ್ಥೆಯ ಸಾಮಾನ್ಯ ಅರಿವನ್ನು ಪಡೆಯುವುದು.

4. ಜಲಪಡೆ ಮತ್ತು ಅವುಗಳಲ್ಲಿರುವ ಶ್ರೇಣಿಗಳ ಬಗ್ಗೆ ತಿಳಿಯುವುದು.

5. ನಕ್ಷತ್ರ ರಾಶಿಗಳಾಚೆ ಇರುವ (Beyond the Zodiac) 10 ನಕ್ಷತ್ರ ಪುಂಜಗಳ ಬಗ್ಗೆ ತಿಳಿಯುವುದು.

6. ಸಮುದ್ರದಲ್ಲಿ ಉಪಯೋಗಿಸುವ ಯಾವುದಾದರೂ 3 ಹೆಣಿಗೆ ಮತ್ತು ಹತ್ತು ಗಂಟು ಮತ್ತು ಅರೆಗಂಟುಗಳನ್ನು (hitch) ತಿಳಿದಿರುವುದು.

7. 4 ಕಿ.ಮೀ. ಮೀರದಂತೆ ಮಕ್ಕಳಿಗೆ ಅನುಮತಿಬದ್ಧ ಜಲಯಾನಕ್ಕೆ (Chartered Cruise) ಹಡಗಿನಲ್ಲಿ ಎಲ್ಲಾ ಸುರಕ್ಷತಾ ಕ್ರಮಗಳೊಂದಿಗೆ ಕರೆದುಕೊಂಡು ಹೋಗುವುದು.

ವಾಯುರೇಂಜರ್

ಮೇಲಿನ ರಾಷ್ಟ್ರಪತಿ ಪುರಸ್ಕಾರ ಪರೀಕ್ಷೆಗಳ ಜೊತೆಗೆ ವಾಯು ರೇಂಜರ್ ಕೆಳಗಿನ ಪರೀಕ್ಷೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಬೇಕು.

1. ವಾಯು ಕವಾಯತು (Aerobatis) ಕೌಶಲಗಳನ್ನು ಒಂದು ವಾಯು ಮಾದರಿಯ (Aeromodel) ಸಹಾಯದಿಂದ ಪ್ರದರ್ಶಿಸುವುದು. ಅಥವಾ Gliderನಲ್ಲಿ 3 ಬಾರಿ ಅಥವಾ ವಿಮಾನದಲ್ಲಿ ಅರ್ಧ ಗಂಟೆಗಳ ಕಾಲ ಪ್ರಯಾಣದ ಅನುಭವ ಪಡೆಯುವುದು.

2. ವಿಶ್ವನಕ್ಷೆಯಲ್ಲಿ ವಾಯುಬಯಲು ಮತ್ತು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳನ್ನು ಗುರುತಿಸುವುದು.

3. ನೆರೆ ರಾಜ್ಯದವರು ಯುದ್ಧದಲ್ಲಿ ಉಪಯೋಗಿಸುವ ವಾಯುಯಾನಗಳ ಬಗ್ಗೆ ತಿಳಿಯುವುದು.

4. W.T., R.T., A.L.D.S., L.M.A., ಸಿಡಿಮದ್ದು ದಾಸ್ತಾನು ಪೆಟ್ಟಿಗೆ (Cartridges) ಧೂಮ್ರ ಬಾಂಬ್ (Smoke Bombs) ಇವುಗಳನ್ನು ಉಪಯೋಗಿಸುವಾಗ ಬಳಸುವ ಸಂಕೇತಗಳನ್ನು ತಿಳಿಯುವುದು.

ಗ್ರಾಮೀಣ ರೇಂಜರ್: ರಾಷ್ಟ್ರಪತಿ ಪದಕ ಪರೀಕ್ಷೆಗಳು

ರೇಂಜರ್‌ಗಳಿಗೆ ಅನ್ವಯಿಸುವ ಎಲ್ಲ ಪರೀಕ್ಷೆಗಳು ಗ್ರಾಮೀಣ ರೇಂಜರ್‌ಗಳಿಗೆ ಅನ್ವಯಿಸುತ್ತದೆ. ಯಾವುದಾದರೂ ವಿಷಯ ಕ್ಲಿಷ್ಟ ಅಥವಾ ಗ್ರಾಮೀಣ ರೇಂಜರ್‌ನ ಸಂಬಂಧವಿಲ್ಲದಿದ್ದರೆ, ಅವುಗಳನ್ನು ಜಿಲ್ಲಾ ಮುಖ್ಯ ಆಯುಕ್ತರು ಮತ್ತು ರಾಜ್ಯ ಸಂಘಟನಾ ಆಯುಕ್ತರ ಶಿಫಾರಸ್ಸಿನ ಮೇರೆ ರಾಜ್ಯ ಮುಖ್ಯ ಆಯುಕ್ತರಿಂದ ಅನುಮತಿಸಲ್ಪಟ್ಟು ಸ್ಥಳೀಯ ಚಟುವಟಿಕೆ/ ಯೋಜನೆಗಳಿಂದ ಬದಲಾಯಿಸಬಹುದು ಹಾಗೂ ಈ ಬಗ್ಗೆ ಪ್ರಮಾಣಪತ್ರವನ್ನು ಪರೀಕ್ಷಾ ಸಮಯದಲ್ಲಿ ಹಾಜರುಪಡಿಸಬೇಕು.

ಸೂಚನೆ:

(i) ರಾಷ್ಟ್ರಪತಿ ರೇಂಜರ್ ಪ್ರಶಸ್ತಿ ರಾಷ್ಟ್ರೀಯ ಮುಖ್ಯ ಆಯುಕ್ತರ ಶಿಫಾರಸ್ಸಿನ ಮೇರೆಗೆ ರಾಷ್ಟ್ರಪತಿಯವರಿಂದ ನೀಡಲಾಗುತ್ತದೆ. ಅಪೇಕ್ಷೆಪಟ್ಟಲ್ಲಿ ಕೆಲವು ಸಂದರ್ಭ ಗಳಲ್ಲಿ ಈ ಪುರಸ್ಕಾರವನ್ನು ರಾಷ್ಟ್ರೀಯ ಮುಖ್ಯ ಆಯುಕ್ತರು ಂದಕ್ಕೆ ತೆಗೆದುಕೊಳ್ಳ ಬಹುದು.

(ii) ರಾಷ್ಟ್ರಪತಿ ರೇಂಜರ್ ಪ್ರಶಸ್ತಿಯನ್ನು ನೀಡಲು ಅಧಿಕಾರವಿರುವ ರಾಷ್ಟ್ರೀಯ ಮುಖ್ಯ ಆಯುಕ್ತರು ಆಗಿಂದಾಗ್ಯೆ ಪದಕ ಪರೀಕ್ಷೆಗಳು, ಸೇವೆಗಳ ಬಗ್ಗೆ ಸೂಕ್ತ ನಿರ್ದೇಶನಗಳನ್ನು ನೀಡಬಹುದು.

(iii) ರಾಷ್ಟ್ರಪತಿ ರೇಂಜರ್ ಪ್ರಶಸ್ತಿಗೆ ಎಲ್ಲ ಅರ್ಹತೆಗಳನ್ನು ಪೂರೈಸಿದ ರಾಜ್ಯ ಪುರಸ್ಕಾರ್ ರೇಂಜರ್ ನಿಗದಿತ

ಅರ್ಜಿಯಲ್ಲಿ ತನ್ನ ಸಾಧನೆಗಳನ್ನು ತುಂಬಿ ರಾಷ್ಟ್ರಪತಿ ರೇಂಜರ್ ಪ್ರಶಸ್ತಿಗೆ ರಾಷ್ಟ್ರಸಂಸ್ಥೆಗೆ ಜಿಲ್ಲಾ/ರಾಜ್ಯ ಸಂಸ್ಥೆಯ ಮೂಲಕ ಕಳುಹಿಸತಕ್ಕದ್ದು.

ರೇಂಜರ್ ಗೈಡಿಂಗ್ ಜೀವನ ಕ್ರಮವನ್ನು ಅನುಸರಿಸುತ್ತಾ ಮಾದರಿ ವ್ಯಕ್ತಿತ್ವವನ್ನು ಹೊಂದಿರುವ ಬಗ್ಗೆ ತಂಡ ಮಂತ್ರಾಲೋಚನಾ ಸಭೆಯು ತನ್ನ ಅಭಿಪ್ರಾಯವನ್ನು ಹೊಂದಿರಬೇಕು.

(iv) ರಾಷ್ಟ್ರೀಯ ಮುಖ್ಯ ಆಯುಕ್ತರು ತಂಡ ಮಂತ್ರಾಲೋಚನಾ ಸಭೆ, ಜಿಲ್ಲಾ ಆಯುಕ್ತರು (ಗೈ) ಹಾಗೂ ರಾಜ್ಯ ಮುಖ್ಯ ಆಯುಕ್ತರ ಶಿಫಾರಸ್ಸಿನ ಮೇರೆಗೆ ಮತ್ತು ಪರೀಕ್ಷಕರ ಪ್ರಮಾಣ ಪತ್ರದ ಆಧಾರದ ಮೇಲೆ ಪ್ರಶಸ್ತಿಯನ್ನು ಅನುಮೋದಿಸುತ್ತಾರೆ.

(v) ರಾಷ್ಟ್ರೀಯ ಮುಖ್ಯ ಆಯುಕ್ತರ ಒಪ್ಪಿಗೆಯ ಮೇರೆಗೆ ರಾಷ್ಟ್ರಪತಿ ರೇಂಜರ್ ಪ್ರಶಸ್ತಿಯನ್ನು ರಾಷ್ಟ್ರಪತಿಯವರು ಒಂದು ಔಪಚಾರಿಕ ಸಮಾರಂಭದಲ್ಲಿ ನೀಡುತ್ತಾರೆ.

(vi) ರಾಷ್ಟ್ರಪತಿ ರೇಂಜರ್ ಪದಕವನ್ನು ಎಡತೋಳಿನ ಮೇಲೆ ಧರಿಸತಕ್ಕದ್ದು.

(vii) ರೇಂಜರ್ ಯಾವುದಾದರೂ ದಳನಾಯಕಿಯ ತರಬೇತಿಯನ್ನು ಪಡೆದಿದ್ದರೂ ರಾಷ್ಟ್ರಪತಿ ಪದಕಕ್ಕೆ ಅರ್ಹಳು.

22. ರೇಂಜರ್ ಪ್ರಾವೀಣ್ಯತಾ ಪದಕಗಳು

ಗುಂಪು–1: ದೇಹಾರೋಗ್ಯ

i) Athlete – ಕ್ರೀಡಾಪಟು

ii) Boxer - ಮುಷ್ಟಿಯುದ್ಧ ಪ್ರವೀಣೆ

iii) Climber - ಆರೋಹಿ
iv) Explorer - ಅನ್ವೇಷಕಿ
v) Free Being me - ನನ್ನ ಮುಕ್ತ ಇರುವಿಕೆ
vi) Gymnast - ಅಂಗಸಾಧಕಿ
vii) HIV / AIDS
viii) Pollution Control - ಮಾಲಿನ್ಯ ನಿಯಂತ್ರಣ
ix) Rambler - ಅಲೆಮಾರಿ
x) Rock Climber - ಶಿಲಾರೋಹಿ
xi) Sanitation Promoter - ನೈರ್ಮಲ್ಯ ಪ್ರವರ್ಧಕಿ
xii) Self Defence - ಸ್ವಸಂರಕ್ಷಣೆ
xiii) Sportsman - ಆಟಗಾರ್ತಿ
xiv) Yoga Instructor - ಯೋಗ ಶಿಕ್ಷಕಿ

ಗುಂಪು–2: ನಡತೆ

i) Family Life Educator - ಕುಟುಂಬ ಜೀವನ ಶಿಕ್ಷಕಿ
ii) Heritage - ಪರಂಪರೆ
iii) Personality Development - ವ್ಯಕ್ತಿತ್ವ ವಿಕಾಸ
iv) Public Speaker - ಭಾಷಣಗಾರ್ತಿ

ಗುಂಪು–3: ಹವ್ಯಾಸಗಳು

i) Beautician - ಸೌಂದರ್ಯವರ್ಧಕಿ
ii) Cell Phone Mechanic - ಮೊಬೈಲ್ ದೂರವಾಣಿ ತಂತ್ರಜ್ಞೆ
iii) Computer Operator - ಗಣಕಯಂತ್ರ ನಿರ್ವಾಹಕಿ
iv) Desert Folk - ಮರಳುಗಾಡಿನ ಜಾನಪದ
v) Fashion Designer - ವಸ್ತ್ರ ವಿನ್ಯಾಸಕಿ (ವಿಶೇಷ ಉಡುಪುಗಳು)

vi) Fine Arts - ಕಲಾ ಕುಶಲತೆ

vii) First Aider - ಪ್ರಥಮ ಚಿಕಿತ್ಸಕಿ

viii) Hair Dresser - ಕೇಶ ವಿನ್ಯಾಸಕಿ

ix) Hostess - ಅತಿಥೇಯಳು

x) Information Technology - ಮಾಹಿತಿ ತಂತ್ರಜ್ಞಾನ

xi) Journalist - ಪತ್ರಿಕೋದ್ಯಮಿ

xii) Tailor - ಸಿಂಪಿಗಿತ್ತಿ

xiii) Modelling - ರೂಪದರ್ಶಿ

xiv) Motor Mechanic - ವಾಹನ ತಂತ್ರಜ್ಞೆ

xv) Photographer - ಛಾಯಾಗ್ರಾಹಕಿ

xvi) Web Safety - ಜಾಲತಾಣದ ಭದ್ರತೆ

xvii) World Friendship - ವಿಶ್ವಸ್ನೇಹಿ

xviii) Journalism - ಪತ್ರಿಕೋದ್ಯಮ

ಗುಂಪು–4: ಸೇವೆ

i) AIDS Awareness/ AIDS - ಬಗ್ಗೆ ಅರಿವು

ii) Ambulance - ಚರಚಿಕಿತ್ಸೆ

iii) Blood Donor - ರಕ್ತದಾನಿ

iv) Civil Defence - ನಾಗರೀಕ ರಕ್ಷಣೆ

v) Community Worker - ಸಮುದಾಯ ಕಾರ್ಯಕರ್ತೆ

vi) Disaster Management - ವಿಕೋಪ ನಿರ್ವಹಣೆ

vii) Disaster Preparedness - ವಿಕೋಪಕ್ಕೆ ಸಿದ್ಧತೆ

viii) Population Educator - ಜನಸಂಖ್ಯಾ ಶಿಕ್ಷಕಿ

ix) Rural Worker - ಗ್ರಾಮೀಣ ಕಾರ್ಯಕರ್ತೆ

ಗುಂಪು–5: ಸಂರಕ್ಷಣೆ

i) Ecologist - ಪರಿಸರ ಶಾಸ್ತ್ರಜ್ಞೆ

ii) Energy Conservation - ಶಕ್ತಿ (ಸೌರಶಕ್ತಿ ಮುಂತಾದ) ಸಂರಕ್ಷಣೆ

iii) Forester - ಅರಣ್ಯಾಧಿಕಾರಿ

iv) Soil Conservation - ಮಣ್ಣಿನ ಸಂರಕ್ಷಣೆ

v) World Conservation - ವಿಶ್ವ ಸಂರಕ್ಷಣೆ

ಜಲರೇಂಜರ್‌ಗಳಿಗೆ ಮಾತ್ರ

i) First Knot - ಮೊದಲ ಗಂಟು ವಾಯು ರೇಂಜರ್‌ಗಳಿಗೆ ಮಾತ್ರ

ii) Second Knot- ಎರಡನೇ ಗಂಟು

iii) Air Hostess ಗಗನ ಸಖಿ

iv) Air Man - ವೈಮಾನಿಕ

v) Air Mechanic - ವಾಯು ಯಂತ್ರತಜ್ಞೆ

vi) Air Spoter - ವಿಮಾನವನ್ನು ಗುರುತಿಸುವವಳು

vii) Aviator - ವಾಯು ಸಂಚಾರ ಪ್ರವೀಣೆ

ಸೂಚನೆ:

ಅ) ಪದಕ ಪರೀಕ್ಷೆಗಳು ಅನುಬಂಧದಲ್ಲಿದೆ.

ಆ) ಜಿಲ್ಲಾ ತರಬೇತಿ ಆಯುಕ್ತರಿಂದ ನೇಮಿಸಲ್ಪಟ್ಟ ಸ್ಥಳೀಯ ಮತ್ತು ಜಿಲ್ಲಾ ಸಂಸ್ಥೆಗಳಿಂದ ಅನುಮೋದಿಸಲ್ಪಟ್ಟ ಸ್ವತಂತ್ರ, ನುರಿತ ತಂತ್ರ ಪದಕ ಪರೀಕ್ಷಕರಿಂದ ನೀಡಲ್ಪಟ್ಟ ಪ್ರಮಾಣ ಪತ್ರದ ಆಧಾರದ ಮೇಲೆ ಪ್ರಾವೀಣ್ಯತಾ ಪದಕಗಳನ್ನು ನೀಡಲಾಗುವುದು.

ಇ) ಎಲ್ಲ ಪ್ರಾವೀಣ್ಯತಾ ಪದಕಗಳೂ ಬೇರೆ ಸೂಚನೆಗಳು ಇಲ್ಲದ ಪಕ್ಷದಲ್ಲಿ ಡವಾಲಿ (Sash)ಯ ಮೇಲೆ ಆರೋಹಣ ಕ್ರಮದಲ್ಲಿ ನಿಪುಣ್, ರಾಜ್ಯ ಪುರಸ್ಕಾರ, ರಾಷ್ಟ್ರಪತಿ ಪದಕಗಳನ್ನು ಸಮಾನಾಂತರ ಸಾಲಿನಲ್ಲಿ ಧರಿಸತಕ್ಕದ್ದು.

ಈ) ರೇಂಜರ್ ವಿಭಾಗದ ಎಲ್ಲಾ ಪ್ರಾವೀಣ್ಯತಾ ಪದಕಗಳು ಬಿಳಿಯ ಹಿನ್ನೆಲೆಯಲ್ಲಿ ಕೆಂಪು ಬಣ್ಣದಲ್ಲಿ ಇರಬೇಕು.

23. ಸೇವಾ ರೇಂಜರ್ –

Ranger in Services

1. ಸೇವಾ ಹಂತದಲ್ಲಿರುವ ರೇಂಜರ್, ರೇಂಜರ್ ತಂಡವು ಹಮ್ಮಿಕೊಂಡ ವಿವಿಧ ಸೇವಾ ಯೋಜನೆಗಳಲ್ಲಿ ಭಾಗವಹಿಸು ವುದು. ಈ ಹಂತದ ನಂತರ ಈ ಚಳವಳಿಯಲ್ಲಿ ಅಥವಾ ಇದರಿಂದ ಹೊರಗೆ ನಿರ್ದಿಷ್ಟ ಸಮುದಾಯ ಸೇವಾ ವೃತ್ತಿಯಲ್ಲಿ ತೊಡಗಿಸಿಕೊಳ್ಳುವುದು.

2. ತಂಡದಲ್ಲಿ ಅಥವಾ ವೈಯಕ್ತಿಕವಾಗಿ ನಿರಂತರ ಸೇವಾಯೋಜನೆ ಗಳಲ್ಲಿ ತೊಡಗಿಸಿಕೊಳ್ಳುವುದು. ಇದರ ದಾಖಲೆಯನ್ನು ತಂಡವು ಇಡುವುದು.

3. ಸಾಮಾನ್ಯವಾಗಿ 25 ವರ್ಷ ತುಂಬಿದ ರೇಂಜರ್ ವಯಸ್ಕ ನಾಯಕಿಯಾಗಿ ಈ ಚಳವಳಿ ಯಲ್ಲಿ ಜವಾಬ್ದಾರಿಯನ್ನು ತೆಗೆದುಕೊಳ್ಳುವುದು.

24. ರೇಂಜರ್‌ಗಳ ಹೊರಸಂಚಾರ–ಚಾರಣ– ಶಿಬಿರವಾಸ (Hike-Trek-Camp for Rangers)

i) ರೇಂಜರ್‌ಗಳಿಗೆ ಆಗಾಗ್ಗೆ ಹೊರಸಂಚಾರ, ಚಾರಣ ಮತ್ತು ಶಿಬಿರವಾಸ ಏರ್ಪಡಿಸಿ ಭಾಗವಹಿಸಲು ಪ್ರೋತ್ಸಾಹಿಸುವುದು.

ii) ಹೊರಸಂಚಾರ ಮತ್ತು ಚಾರಣವನ್ನು ಜಿಲ್ಲೆಯಲ್ಲೇ ಕೈಗೊಳ್ಳಲು ಬಯಸಿದಲ್ಲಿ ರೇಂಜರ್ ನಾಯಕಿಯ ಮೂಲಕ ಜಿಲ್ಲಾ ಗೈಡ್ ಆಯುಕ್ತರ ಅನುಮತಿ ಪಡೆಯಬೇಕು.

iii) ಜಿಲ್ಲೆಯ ಹೊರಗೆ ಹೊರಸಂಚಾರ ಅಥವಾ ಚಾರಣ ಮಾಡಲು ಪೋಷಕರ ಅನುಮತಿ ಜೊತೆಗೆ ತಮ್ಮ ಜಿಲ್ಲಾ ಗೈಡ್ ಆಯುಕ್ತರ ಮೂಲಕ ರಾಜ್ಯ ಗೈಡ್ ಆಯುಕ್ತರಿಂದ ಅನುಮತಿ ಪಡೆಯಬೇಕು. ಒಂದು ವೇಳೆ ರಾಜ್ಯ ಗೈಡ್ ಆಯುಕ್ತರ ವಿಳಾಸ ತಿಳಿಯದಿದ್ದಲ್ಲಿ ಜಿಲ್ಲಾ ಗೈಡ್ ಆಯುಕ್ತರ ಮೂಲಕ ಅನುಮತಿ ಕೋರಿಕೆ ಪತ್ರವನ್ನು ರಾಜ್ಯ ಗೈಡ್ ಆಯುಕ್ತರಿಗೆ ಕಳುಹಿಸುವಂತೆ ಕೋರಿಕೊಳ್ಳುವುದು.

iv) ರೇಂಜರ್‌ಗಳು ಹೊರಸಂಚಾರ ಅಥವಾ ಚಾರಣಕ್ಕೆ ಹೋದಾಗ, ವ್ಯವಸ್ಥಿತ ಏರ್ಪಾಡುಗಳನ್ನು ಮಾಡಲು ಜಿಲ್ಲಾ ಸಂಘಟನಾ ಆಯುಕ್ತರು ತನಗೆ ನೀಡಿದ ಅನುಮತಿ ಪತ್ರದ ಆಧಾರದ ಮೇಲೆ Patrol Leaderಗೆ ತಾನು ಸಹಿ ಹಾಕಿದ Permit Card (ಅನುಮತಿಪತ್ರ) ಅನ್ನು ಕೊಡತಕ್ಕದ್ದು.

v) ಪೋಷಕರ, ರೇಂಜರ್ ನಾಯಕಿಯ ಹಾಗೂ ಜಿಲ್ಲಾ ಗೈಡ್ ಆಯುಕ್ತರ ಲಿಖಿತ ಅನುಮತಿ ಪತ್ರವಿಲ್ಲದೆ, ರೇಂಜರ್‌ಗಳು ಹೊರಸಂಚಾರ ಅಥವಾ ಚಾರಣಕ್ಕೆ ಹೊರಡಬಾರದು.

vi) ಜಿಲ್ಲಾ ಆಯುಕ್ತರ ಅನುಮತಿ ಪಡೆಯಲು ಸಾಕಷ್ಟು ಮುಂಚಿತವಾಗಿ ಗೊತ್ತುಪಡಿಸಿದ ನಮೂನೆಯಲ್ಲಿ ಹೊರಸಂಚಾರ/ಚಾರಣದ ಬಗ್ಗೆ

ಬೇಕಾದ ಎಲ್ಲ ಮಾಹಿತಿ ನೀಡಿ ಕೋರಿಕೆ ಸಲ್ಲಿಸುವುದು. ಇದರಿಂದ ಅವರಿಗೆ ಅವಶ್ಯಕ ಲಿಖಿತ ಅನುಮತಿ ನೀಡಲು ಕಾಲಾವಕಾಶ ದೊರೆಯುತ್ತದೆ.

vii) ಶಿಬಿರವಾಸ ಮಾಡಬಯಸುವ ರೇಂಜರ್, ಪೋಷಕರಿಂದ ಆರೋಗ್ಯ ದೃಢೀಕರಣ ಪತ್ರವನ್ನು ತರಬೇಕು.

viii) ತರಬೇತಿ ಹೊಂದಿರುವ, ಅರ್ಹಳಾದ ತಂಡ ನಾಯಕಿ ಅಥವಾ ಅಷ್ಟಕ ನಾಯಕಿಯರಿಲ್ಲದೆ ರೇಂಜರ್‌ಗಳಿಗೆ ಶಿಬಿರವಾಸ ಮಾಡಲು ಅನುಮತಿ ನೀಡಬಾರದು.

ix) ಜಿಲ್ಲೆಯ ಹೊರಗೆ ಶಿಬಿರವಾಸ ಮಾಡಲು ಯೋಜಿಸಿದಾಗ ತಮ್ಮ ಜಿಲ್ಲಾ ಗೈಡ್ ಆಯುಕ್ತರಿಗೆ 14 ದಿನಗಳ ಮುನ್ನ ವಿಷಯವನ್ನು ತಿಳಿಯಪಡಿಸಬೇಕು. ಇದರಿಂದಾಗಿ ಶಿಬಿರವಾಸ ಏರ್ಪಡಿಸಿದ ಮಾಹಿತಿಯನ್ನು ಸಕಾಲದಲ್ಲಿ ಆ ಜಿಲ್ಲೆಯ ಗೈಡ್ ಆಯುಕ್ತರಿಗೆ ತಿಳಿಸಲು ಅನುಕೂಲವಾಗುತ್ತದೆ.

x) ಸಮವಸ್ತ್ರ ಧರಿಸಿ ಹೊರರಾಜ್ಯದಲ್ಲಿ ಶಿಬಿರವಾಸ ಮಾಡಬಯಸಿದರೆ, ಮೊದಲು ರಾಜ್ಯ ಕಛೇರಿಯ ಅನುಮತಿ ಪಡೆಯಬೇಕು. ಈ ಅರ್ಜಿಯನ್ನು ಸಹಾಯಕ ರಾಜ್ಯ ಆಯುಕ್ತರು/ ಜಿಲ್ಲಾ ಆಯುಕ್ತರು ಅಥವಾ ಜಿಲ್ಲಾ ಸಂಸ್ಥೆ/ ಸ್ಥಳೀಯ ಸಂಸ್ಥೆ ಶಿಫಾರಸ್ಸು ಮಾಡಬೇಕು.

xi) ಶಿಬಿರವಾಸಕ್ಕೆ ಹೊರಡುವ ರೇಂಜರ್ ಸಂಪೂರ್ಣವಾಗಿ ಸಮವಸ್ತ್ರಗಳು ಮತ್ತು ಶಿಬಿರ ಸಂಚಿಯೊಂದಿಗೆ (Kit)ಸಜ್ಜಾಗಿರಬೇಕು. ಜೊತೆಗೆ ಹಾಸಿಗೆ ಹೊದಿಕೆಗಳನ್ನು ತೆಗೆದುಕೊಳ್ಳಬೇಕು. ಈ ಸಿದ್ಧತೆಯು ರೇಂಜರ್ ನಾಯಕಿಗೆ ತೃಪ್ತಿ ನೀಡಬೇಕು.

ಅಧ್ಯಾಯ-4

ವಿಶೇಷ ಶಾಖೆಗಳು

ಅ. ವಿಸ್ತರಿಸಿದ ಗೈಡಿಂಗ್ (Extension Guiding)

1. ದೈಹಿಕ ಅಂಗವಿಕಲತೆ, ಮಾನಸಿಕ ನ್ಯೂನತೆ, ದೃಷ್ಟಿಹೀನತೆ ಮುಂತಾದವುಗಳಿಂದ ಬಳಲುತ್ತಿರುವ ಹೆಣ್ಣುಮಕ್ಕಳು ಈ ವಿಸ್ತರಿಸಿದ ಗೈಡಿಂಗ್ ಶಾಖೆಯ ಸದಸ್ಯರು.

2. ಅಂಗವಿಕಲತೆಗೊಳಗಾದ ಹೆಣ್ಣುಮಕ್ಕಳು ಈ ಶಾಖೆಯ ಸದಸ್ಯರಾಗಲು ಅರ್ಹರು. ಇತರೆ ಗೈಡ್‌ಗಳಿರುವ ನಿಯಮಗಳು ಸಮಯದಿಂದ ಸಮಯಕ್ಕೆ ಸೂಕ್ತವಾಗಿ ಮಾರ್ಪಡಿಸಿ ವಿಸ್ತರಿಸುವ ಶಾಖೆಯ ಗೈಡ್‌ಗಳಿಗೆ ಅನ್ವಯಿಸುತ್ತದೆ.

3. ಈ ಶಾಖೆಯನ್ನು ಆಸ್ಪತ್ರೆಯಲ್ಲಿ, ಸಂಸ್ಥೆಗಳಲ್ಲಿ, ಬಡಾವಣೆ, ಶಾಲೆಗಳಲ್ಲಿ ತೆರೆಯಬಹುದು ಅಥವಾ ಆ ಹುಡುಗಿಯನ್ನು ಕ್ರಮಬದ್ಧ / ಸಾಮಾನ್ಯ ಶಾಖೆಗೂ ಸೇರಿಸಿಕೊಳ್ಳಬಹುದು. ಈ ವಿಸ್ತರಿಸಿದ ಶಾಖೆಯು ಆಯಾ ಸ್ಥಳೀಯ ಮತ್ತು ಜಿಲ್ಲೆಯ ವ್ಯಾಪ್ತಿಗೆ ಬರುತ್ತದೆ.

4. ವಿಸ್ತರಿಸಿದ ಶಾಖೆಯ ಗೈಡ್, ಇತರೆ ಗೈಡ್‌ಗಳಿಗಿರುವ ಪರೀಕ್ಷೆಗಳಲ್ಲಿ ಉತ್ತೀರ್ಣಳಾಗುವುದು. ಅವಳ ದೈಹಿಕ ಕೊರತೆಯಿಂದ ಯಾವುದಾದರೂ ಪರೀಕ್ಷೆ ಅವಳ ಕೈಲಾಗದಿದ್ದಲ್ಲಿ ನ್ಯೂನತೆಗನುಸಾರ ವಾಗಿ ಬದಲಿ ಪರೀಕ್ಷೆಗಳನ್ನು ಕೊಡಬಹುದು.

ಸೂಚನೆ: ಮೇಲಿರುವ "ಗೈಡಿಂಗ್" ಎಂಬ ಪದವು ಬುಲ್‌ಬುಲ್ ಮತ್ತು ರೇಂಜರ್‌ಗಳಿಗೂ ಅನ್ವಯಿಸುತ್ತದೆ.

ಆ. ಜಲ ಗೈಡಿಂಗ್ ಶಾಖೆ

ಇ. ವಾಯು ಗೈಡಿಂಗ್ ಶಾಖೆ

ಈ. ಭಾರತ ಸ್ಕೌಟ್ ಮತ್ತು ಗೈಡ್ಸ್‌ಗಳ ಸಾಹಸ ಸಂಘ (Venture Club of Bharath Scouts & Guides)

ಹಿನ್ನೆಲೆ: ಗ್ರಾಮಾಂತರ ಮತ್ತು ನಗರಗಳಲ್ಲಿ ಯುವತಿಯರು, ಯುವಸಂಘಗಳು ಸಾಹಸ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಅತ್ಯಂತ ಉತ್ಸುಕರಾಗಿರುತ್ತಾರೆ. ಆದರೆ ಇಂತಹ ಸಂಘಗಳ ಕೊರತೆಗಳಿವೆ. ಈ ಸಾಹಸ ಸಂಘವನ್ನು ಸಾಹಸ ಚಟುವಟಿಕೆಗಳ ಕೊರತೆಯನ್ನು ನೀಗಲು ಈ ಶಾಖೆಯನ್ನು ಸ್ಥಾಪಿಸಲಾಗಿದೆ. ಗರಿಷ್ಠ ವಯೋಮಿತಿ ತಲುಪಿದ ನಂತರವೂ ಭಾರತ್ ಸ್ಕೌಟ್ಸ್ ಗೈಡ್ಸ್ ಸದಸ್ಯರನ್ನು ಉಳಿಸಿಕೊಳ್ಳಲು ಹಾಗೂ ಯುವ ಜನಾಂಗವನ್ನು ಆಕರ್ಷಿಸಲು ಈ ಸಂಘದ ಸದಸ್ಯತ್ವವನ್ನು ಎಲ್ಲರಿಗೂ ವಿಸ್ತರಿಸಲಾಗಿದೆ.

ಇದರ ಉದ್ದೇಶ :

- ಸದಸ್ಯತ್ವದ ಹೆಚ್ಚಳ
- ಬಿಟ್ಟು ಹೋಗುವ ಯುವತಿ/ಯುವಕರನ್ನು ಸಂಸ್ಥೆಯಲ್ಲಿ ಹೆಚ್ಚು ಕಾಲ ಉಳಿಸಿಕೊಳ್ಳುವುದು.
- ಯುವತಿ/ಯುವಕರಲ್ಲಿ ನಾಯಕತ್ವ ಬೆಳೆಸುವುದು.
- ದೈಹಿಕ ಸಾಮರ್ಥ್ಯ/ಕೌಶಲ್ಯ ಬೆಳೆಸುವುದು.
- ಪ್ರಕೃತಿಯೊಡನೆ ಸಾಮರಸ್ಯ ವರ್ಧಿಸುವುದು.
- ವಿರಾಮ ವೇಳೆಯಲ್ಲಿ ಯುವತಿ/ಯುವಕರನ್ನು ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸುವುದು.

ರಚನೆ: ಒಂದು ಬಡಾವಣೆ / ಹಳ್ಳಿಯಲ್ಲಿ ಕನಿಷ್ಠ 8 ಸದಸ್ಯರು ಸೇರಿದರೆ ಸಾಹಸ ಸಂಘವನ್ನು ಸ್ಥಾಪಿಸಬಹುದು.

ನೋಂದಣಿ: ಗೊತ್ತುಪಡಿಸಿದ ಶುಲ್ಕವನ್ನು ಸಂಬಂಧಪಟ್ಟ ಸ್ಥಳೀಯ/ ಜಿಲ್ಲಾ ಸಂಸ್ಥೆಯ ಮೂಲಕ ರಾಜ್ಯ ಸಂಸ್ಥೆಯ ಸದಸ್ಯತ್ವವನ್ನು ಪಡೆಯಬೇಕು. ಸ್ಥಳೀಯ/ಜಿಲ್ಲಾ ಸಂಸ್ಥೆಯ ಶಿಫಾರಸ್ಸಿನ ಮೇಲೆ ರಾಜ್ಯ ಸಂಸ್ಥೆಯು ಸನ್ನದನ್ನು (Charter) ಪ್ರದಾನ ಮಾಡುವುದು.

ಸಂಘದ ಕಾರ್ಯಾಲಯ: ಪ್ರತಿಯೊಂದು ಸಂಘವು, ಸದಸ್ಯರೆಲ್ಲರೂ ಸೇರಿ ಚರ್ಚಿಸಲು ಅಥವಾ ಅವರ ಯೋಜನೆಗೆ ಅನುಗುಣವಾಗಿ ಚಟುವಟಿಕೆ ಮತ್ತು ಕಾರ್ಯಕ್ರಮಗಳನ್ನು ನಡೆಸಲು ಅನುಕೂಲವಾದ ಕಾರ್ಯಾಲಯವನ್ನು ಹೊಂದಿರುವುದು.

ಕ್ಷೇತ್ರ: ಬಡಾವಣೆ, ಮೊಹಲ್ಲಾ, ಗ್ರಾಮ, ಕಾರ್ಖಾನೆ, ಸಂಸ್ಥೆ, ಸರ್ಕಾರಿ ಸೇವಾ ಕ್ಷೇತ್ರಗಳಲ್ಲಿ ಸಂಘವನ್ನು ಸ್ಥಾಪಿಸಬಹುದು.

ಸಂಘದ ಹೆಸರು: ರಾಷ್ಟ್ರೀಯ ನಾಯಕರ ಹೆಸರನ್ನು ಹೊಂದುವುದು.

ಸದಸ್ಯತ್ವ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಸಿದ್ಧಾಂತವನ್ನು ಒಪ್ಪಿಕೊಳ್ಳುವವರನ್ನು, ಯಾವ ಭೇದವೂ ಇಲ್ಲದೆ ಅಂದರೆ ಜಾತಿ, ಮತ, ಧರ್ಮ ಭೇದವಿಲ್ಲದೆ ಎಲ್ಲಾ ಭಾರತೀಯ ನಾಗರಿಕರಿಗೂ ಮುಕ್ತವಾಗಿ ಸದಸ್ಯತ್ವ ನೀಡಲಾಗುವುದು. ಸದಸ್ಯರಿಗೆ 18 ವರ್ಷ ತುಂಬಿರಬೇಕು. ಕನಿಷ್ಠ ವಿದ್ಯಾರ್ಹತೆ ಮತ್ತು ಆರೋಗ್ಯವನ್ನು ಹೊಂದಿರಬೇಕು. ಸಂಘದ ನಿಯಮಾವಳಿಯನ್ನು ಪಾಲಿಸುವಂತವರಾಗಿರಬೇಕು. 40 ವರ್ಷದವರೆಗೂ ಸದಸ್ಯತ್ವ ಪಡೆದಿರಬಹುದು. ಸದಸ್ಯರಾಗಲು ಇಚ್ಛಿಸುವವರು ಪ್ರಥಮ ಸೋಪಾನದ ಪರೀಕ್ಷೆಯನ್ನು ಪೂರ್ಣಗೊಳಿಸಿದ ನಂತರ ವಿಧಿವತ್ತಾಗಿ ಪ್ರಮಾಣ ವಚನವನ್ನು ಸ್ವೀಕರಿಸಬೇಕು.

ನಾಯಕತ್ವ: ರಾಷ್ಟ್ರೀಯ ಸಾಹಸ ಸಂಘದಲ್ಲಿ ತರಬೇತಿ ಪಡೆದ 25ರಿಂದ 45 ವರ್ಷದ ಯುವತಿಯನ್ನು ಪ್ರತಿ ಸಂಘದ ನಾಯಕಿಯನ್ನಾಗಿ ಮಾಡಲಾಗುವುದು.

ಸಂಘಟನೆ (Organisation): ಪ್ರತಿ ಸಂಘವು ಸಮಿತಿಯನ್ನು ಹೊಂದಿರುವುದು. ಇದಕ್ಕೆ ಒಬ್ಬರು ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳು (ಸಂಘದ ಹಿರಿಯ ನಾಯಕರು ಪದವಿ ಬದ್ಧ ಅಧಿಕಾರದಿಂದ (Ex Officio) ಸಮಿತಿಯ ಕಾರ್ಯದರ್ಶಿ ಆಗಿರುವರು) ಮತ್ತು ಖಜಾಂಚಿ ಇರುವರು. ಸಂಘದ ಸಮಿತಿಯಿಂದಲೂ 2ರಿಂದ 4 ಸದಸ್ಯರನ್ನು ಹೊಂದಿರಬಹುದು.

ಸಮಿತಿಯ ಕಾರ್ಯಗಳು

1. ಸಂಘದ ಚರ ಮತ್ತು ಸ್ಥಿರ ಆಸ್ತಿಯ ಉಸ್ತುವಾರಿ
2. ಸಂಘದ ಕಾರ್ಯಕ್ರಮಗಳನ್ನು ನಿರ್ಧರಿಸುವುದು.
3. ಸದಸ್ಯತ್ವ ಸ್ವೀಕಾರ
4. ಸಂಘಕ್ಕೆ ಹಣ ಸಂಗ್ರಹ
5. ಅನ್ವೇಷಣ ಕಾರ್ಯಕ್ರಮಗಳಿಗೆ ಅನುಮೋದನೆ

ಬಂಡವಾಳ (Funds): ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ನಿಯಮಾವಳಿ APRO-1ರ ನಿಯಮಾನುಸಾರ ಸ್ಥಳೀಯ ಸಂಪನ್ಮೂಲಗಳಿಂದ ಹಣ ಸಂಗ್ರಹಿಸಬಹುದು. ದಾನ ಮತ್ತು ಪ್ರಾಯೋಜನೆಯನ್ನು (Donation & Sponser) ಸಮಿತಿ ಸ್ವೀಕರಿಸಬಹುದು.

ಸಂಘದ ಹಣಕಾಸಿನ ವ್ಯವಹಾರವನ್ನು ನಿರ್ವಹಿಸುವ ಅದರ ಲೆಕ್ಕಾಚಾರವನ್ನು ಇಡುವ ಗುರುತರ ಜವಾಬ್ದಾರಿಯು ಖಜಾಂಚಿಯದಾಗಿರುತ್ತದೆ.

ಸಾಹಸ ಸಂಘದ ಸದಸ್ಯರ ಸಮವಸ್ತ್ರ :

ಟೋಪಿ– ಭಾ.ಸ್ಕಾ.ಗೈ. ಲಾಂಛನವಿರುವ ನೀಲಿ ಟೋಪಿ

ಅಂಗಿ – ಭಾ.ಸ್ಕಾ.ಗೈ. ವಿನ್ಯಾಸಗೊಳಿಸಿದ ಬೂದುಬಣ್ಣದ T ಷರ್ಟ್

ಕಂಠವಸ್ತ್ರ – ಗುಂಪಿನ ಬಣ್ಣ ಗುಂಪಿನ ಕವುಂಗುರ (Woggle)

ಷರಾಯಿ – ಕಡುನೀಲಿ ಬಣ್ಣದ ಜೀನ್ಸ್, ಮೊಣಕಾಲ ಪಕ್ಕಕ್ಕೆ ಹೆಚ್ಚುವರಿ ಎರಡು ಮೇಲು ಜೇಬುಗಳು.

ಸಂಚಿ – (Pouch) ಬೆಲ್ಟ್‌ನಲ್ಲಿ ಕಪ್ಪು ಸಂಚಿ ಧರಿಸಬಹುದು.

ಪಾದರಕ್ಷೆ – ಕರಿ ಬೇಟೆಗಾರರ / ಕ್ರೀಡಾಪಟುಗಳ ಪಾದರಕ್ಷೆ

ಸಂಘದ ಚಟುವಟಿಕೆ

ಸ್ಥಳೀಯ ಆಟಗಳು :

* ಕುಸ್ತಿ–ಮಲ್ಲಾಂಬ್
* ಓಟ ಸ್ಪರ್ಧೆಗಳು
* ಯುದ್ಧೋಚಿತ ಕಲಾಕೌಶಲ (Maratial Art)
* ಯೋಗ

ಸಾಹಸ ಆಟಗಳು :

* ವ್ಯಾಪಕ ಆಟ
* ಶಿಲಾರೋಹಣ
* ಸ್ಕೇಟಿಂಗ್
* ಅನ್ವೇಷಣಯಾನ
* ಕತ್ತಲೆಯ ಹೊರಸಂಚಾರ
* ಅನ್ವೇಷಣೆ
* ಶಿಬಿರವಾಸ
* ಸ್ವಸಂರಕ್ಷಣೆ
* ಸೈಕಲ್/ಮೋಟಾರ್ ಸೈಕಲ್ ನಲ್ಲಿ ಹೊರ ಸಂಚಾರ

* ಪರಿಸರ ಶಿಕ್ಷಣ
* ಪ್ರಕೃತಿ ಸಂಚಾರ–ವೀಕ್ಷಣೆ
* ಛಾಯಾಗ್ರಹಣ
* ಈಜುವುದು
* ನೈಸರ್ಗಿಕ ವಸ್ತು ಸಂಗ್ರಹ
* ಸಾಹಸ ಪ್ರವಾಸ
* ಅವಲೋಕನ ಮತ್ತು ನಿರ್ಧಾರ

ಮುಂದುವರಿದ ಸಾಹಸ ಚಟುವಟಿಕೆ

* ಪರ್ವತಾರೋಹಣ
* ಮಂಜಿನಲ್ಲಿ ಸ್ಕೇಟಿಂಗ್
* ಗ್ಲೈಡಿಂಗ್
* ಪ್ಯಾರಾ ಸೈಲಿಂಗ್
* ಸ್ಕೇಟಿಂಗ್
* ಜಲಕ್ರೀಡೆ
* ಜನಸಂಖ್ಯಾ ಶಿಕ್ಷಣ

ಪದಕಗಳು

* ಅಲೆಮಾರಿ ಪದಕ
* ನಕ್ಷತ್ರ ವೀಕ್ಷಣೆ

ಅವರ ಈ ಕಾರ್ಯಕ್ರಮಗಳ ಜೊತೆಯಲ್ಲಿ ಈ ಕೆಳಕಂಡ ರೇಂಜರಿಂಗ್ ಕಾರ್ಯಕ್ರಮಗಳನ್ನು ಅಳವಡಿಸಬೇಕು.

* ಪ್ರಾರ್ಥನೆ
* ಸ್ಕೌಟಿಂಗ್ / ಗೈಡಿಂಗ್‌ನ ಮೂಲಭೂತ ತತ್ವ
* ದ್ವಿತೀಯ ಸೋಪಾನ ಪರೀಕ್ಷೆ
* ರಾಜ್ಯ ಪುರಸ್ಕಾರ್ ರೇಂಜರ್ ಪರೀಕ್ಷೆ

* ಪ್ರಥಮಚಿಕಿತ್ಸೆ
* ನಕ್ಷೆ ಓದುವುದು
* ನಕ್ಷೆ ಮಾಡುವುದು
* ರಕ್ಷಣೆ ಮತ್ತು ಅಗ್ನಿ ಶಮನ
* ಕಾಡುಮನುಷ್ಯರ ಅಡಿಗೆ ಕ್ರಮ
* ಅಗ್ರಗಾಮಿ

ಸಂಘದ ನಾಯಕರ ಅರ್ಹತೆ

i) ಈ ಅರ್ಹತೆ ಪಡೆಯಲು ಕೆಳಗಿನ ಅವಶ್ಯಕತೆಗಳಲ್ಲಿ ತರಬೇತಿ ಹೊಂದಬೇಕು:

* ವಯಸ್ಸು : 25ರಿಂದ 40 ರವರೆಗೆ ಮಾತ್ರ
* ವಿದ್ಯಾರ್ಹತೆ : ಕನಿಷ್ಠ ಮೆಟ್ರಿಕ್ಯುಲೇಷನ್/ತತ್ಸಮ
* ಭಾಷೆ : ಇಂಗ್ಲೀಷ್, ಹಿಂದಿಗೆ ಆದ್ಯತೆ

ಸಾಹಸ ಚಟುವಟಿಕೆಗಳ ಶ್ರಮವನ್ನು ಸಹಿಸುವ ದೇಹದಾರ್ಢ್ಯ ಹೊಂದಿರಬೇಕು.

ii) ಅವಧಿ : 7 ದಿನದ ತರಬೇತಿ ಇದರಲ್ಲಿ 4 ದಿನ ಸಾಹಸ ಚಟುವಟಿಕೆಯನ್ನೂ ಸೇರಿಸಲಾಗಿದೆ.

iii) ಸಾಹಸ ಚಟುವಟಿಕೆಯ ಶ್ರಮವನ್ನು ತಡೆಯಲು ಶಾರೀರಿಕ ಸಬಲತೆ.

ಈ ತರಬೇತಿಯನ್ನು ಕುರಿತಾದ ವಿಷಯುವನ್ನು ತರಬೇತಿ ಯೋಜನೆಯಲ್ಲಿ (Scheme of Training) ಕೊಡಲಾಗಿದೆ.

ಅನುಬಂಧ

ಪ್ರಾವೀಣ್ಯತಾ ಪದಕ ಪರೀಕ್ಷೆಗಳು

ಪ್ರಾವೀಣ್ಯತಾ ಪದಕಗಳನ್ನು ಪಡೆದವರು ಅವರ ಜ್ಞಾನವನ್ನು ಕಾಲಕ್ಕೆ ತಕ್ಕಂತೆ ಉತ್ತಮಪಡಿಸಿಕೊಳ್ಳಬೇಕು. ಹೀಗೆ ಮಾಡಿಲ್ಲವೆಂದಲ್ಲಿ ಸಂಬಂಧಿತ ಅಧಿಕಾರಿಗಳು ಪದಕವನ್ನು ಹಿಂತೆಗೆದುಕೊಳ್ಳಬಹುದು. ಅರ್ಹತಾ ಪದಕಗಳನ್ನು ಹೊರತುಪಡಿಸಿ ಉಳಿದ ರೇಂಜರ್ ಪ್ರಾವೀಣ್ಯತಾ ಪದಕಗಳನ್ನು ಬೇರೆ ಸೂಚನೆ ಇಲ್ಲದ ಪಕ್ಷದಲ್ಲಿ ಡವಾಲಿ (Sash) ಮೇಲೆ ಧರಿಸತಕ್ಕದ್ದು.

1. **AIDS ಬಗ್ಗೆ ಅರಿವು AIDS Awareness**

   i. HIV ಹರಡುವ ವಿಧಾನದ ಬಗ್ಗೆ ಅರಿವು ಮತ್ತು ತಡೆಗಟ್ಟುವಿಕೆ.

   ii. AIDS ಬಗ್ಗೆ ಅದರ ಚರಿತ್ರೆ ತಿಳಿಯುವುದು.

   iii. ಆರೋಗ್ಯ ಇಲಾಖೆ AIDS ಹರಡದೆ ಇರಲು ಕೈಗೊಂಡ ಕ್ರಮಗಳು.

   iv. ಸಾರ್ವಜನಿಕರಲ್ಲಿ ಈ ಕೆಳಕಂಡ ವಿಷಯಗಳ ಅರಿವು ಮೂಡಿಸಲು ಯಾವುದಾದರೂ ಕಾರ್ಯಕ್ರಮಗಳನ್ನು ಯೋಜಿಸುವುದು.

   ಅ) ರೋಗ ಬಂದಾಗ ಆಗುವ ಅಪಾಯಗಳು

   ಆ) ರೋಗ ಹರಡುವ ವಿಧಾನಗಳು

ಇ) HIV ಸೋಂಕು ಮತ್ತು AIDS ಬಗ್ಗೆ ಇರುವ ಕಟ್ಟುಕಥೆ ಮತ್ತು ತಪ್ಪು ಮಾಹಿತಿಯನ್ನು ದೂರಗೊಳಿಸುವ ಬಗ್ಗೆ.

ಈ) ರೋಗವು ವ್ಯಕ್ತಿಗಳಿಗೆ ಮತ್ತು ಸಮುದಾಯದಲ್ಲಿ ಹರಡುವುದನ್ನು ತಪ್ಪಿಸುವ ವಿಧಗಳು.

ಉ) ಜನರಲ್ಲಿ ಅರಿವು ಮೂಡಿಸಲು ಮೇಳ, ಬೀದಿ ನಾಟಕ ಅಥವಾ ರಸಪ್ರಶ್ನೆಯನ್ನು ದಳದ ಸದಸ್ಯರೊಂದಿಗೆ ಸಂಘಟಿಸುವುದು.

2. ಗಗನಸಖಿ (Air Hostess)

1. ಈ ಕೆಳಕಂಡ ಅರ್ಹತೆಗಳನ್ನು ಹೊಂದಿರಬೇಕು.

ಅ) 12ನೇ ತರಗತಿ / ಪಿಯುಸಿ/ ಇಂಟರ್ ಮೀಡಿಯಟ್‌ನಲ್ಲಿ ಉತ್ತೀರ್ಣ ಹೊಂದಿರಬೇಕು.

ಆ) ಗಗನಸಖಿಗೆ ಎತ್ತರ ಕನಿಷ್ಠ 154.5 ಸೆಂ.ಮೀ. ಮತ್ತು Flight Steward ಗೆ 170 ಸೆಂ.ಮೀ. ಎತ್ತರ ಇರಬೇಕು.

ಇ) ತೂಕ ನಿಯಂತ್ರಣದಲ್ಲಿರಬೇಕು ಮತ್ತು 60 ಕೆ.ಜಿ.ಗಿಂತ ಹೆಚ್ಚಿರಕೂಡದು.

ಈ) ಅವಿವಾಹಿತಳಾಗಿರಬೇಕು.

ಉ) ದೃಷ್ಟಿ (ಸಾಧಾರಣ) 6/24 ಎರಡೂ ಕಣ್ಣಲ್ಲಿರಬೇಕು.

2. ಮಾತನಾಡುವುದರಲ್ಲಿ ಕೌಶಲ್ಯವನ್ನು ತೋರಿಸುವ ಮತ್ತು ಆಂಗ್ಲ ಮತ್ತು ಹಿಂದಿ ಭಾಷೆಗಳನ್ನು ಓದಲು ಮತ್ತು ಅರ್ಥಮಾಡಿಕೊಳ್ಳುವ ಸಾಮರ್ಥ್ಯ.

3. ಅತಿಥಿಗಳನ್ನು ಸ್ವಾಗತಿಸಲು ಮತ್ತು ಸತ್ಕಾರ ಮಾಡಲು ಅರಿತಿರಬೇಕು.
4. ಟೀ, ಕಾಫಿ, ತಂಪಾದ ಪಾನೀಯ ಮತ್ತು ಎಲ್ಲರಿಗೂ ಹಂಚಲು ಅರಿತಿರಬೇಕು.
5. ನಿಗದಿತ ಉಡುಪನ್ನು ಧರಿಸಲು ಗೊತ್ತಿರಬೇಕು ಮತ್ತು ಆಕರ್ಷಕ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು.
6. ಸಾಮಾನ್ಯ ಜ್ಞಾನ ಮತ್ತು ವರ್ತಮಾನದ ಆಗುಹೋಗುಗಳನ್ನು ತಿಳಿದು ಅಭಿವೃದ್ಧಿಪಡಿಸಿಕೊಳ್ಳಬೇಕು.
7. ಗಗನಸಖಿಯ ಕೆಲಸ ಮತ್ತು ಜವಾಬ್ದಾರಿಯನ್ನು ಅರ್ಥಮಾಡಿ ಕೊಳ್ಳಬೇಕು.
8. ಇತರ (Airline) ವಾಯು ಯಾನಗಳ ಬಗ್ಗೆ ಮತ್ತು ಭಾರತದಲ್ಲಿ ಅವುಗಳ ಕಛೇರಿಗಳ ಬಗ್ಗೆ ಅರಿವು.
9. ಗಗನಸಖಿ ತರಬೇತಿಯನ್ನು ನೀಡುವ ಸಂಸ್ಥೆಯ ಬಗ್ಗೆ ಅರಿವು.

3. ವಾಯು ಯಂತ್ರತಜ್ಞೆ (Air Mechanic)

1. ಕಡ್ಡಾಯವಾಗಿ ಇರಲೇಬೇಕಾದ ದಾಖಲೆಗಳು (Certificate of Registration) ನೋಂದಣಿ ಪತ್ರ, ಗಗನ ಯಾನದ ಯೋಗ್ಯತಾ ಪತ್ರ (Certificate of Air worthiness), ಫ್ಲೈಟ್ ಕೈಪಿಡಿ (Manual) Export Certificate of Air worthiness ಹೊಂದಿರಬೇಕು.
2. ವಿಮಾನದಲ್ಲಿ (ಒಪ್ಪಿಗೆ ಪಡೆದ) ಪರವಾನಗಿ ಇರುವ ವಸ್ತುಗಳನ್ನು ಗುರುತಿಸುವ ವಿಧಾನದ ಅರಿವು.

3. ವಿಮಾನದ ಜಾಕಿಂಗ್ (Jacking), ಲೆವೆಲಿಂಗ್ (Levelling) ಮತ್ತು ಮೂರಿಂಗ್ (Mooring) ವಿಧಾನಗಳ ಸಾಮಾನ್ಯ ಅರಿವು.

4. ವಿಮಾನದಲ್ಲಿ ಉಪಯೋಗಿಸುವ ಸಾಧನಗಳ ರಕ್ಷಣೆ ಮತ್ತು ಉಪಯೋಗದ ಬಗ್ಗೆ ಅರಿವು.

5. ವಿಮಾನದ ದುರಸ್ತಿ, ಇಂಧನ ಮರುಪೂರೈಕೆ ಮತ್ತು ಇಂಧನ ಖಾಲಿ ಮಾಡುವ ಸಮಯದಲ್ಲಿ ತೆಗೆದುಕೊಳ್ಳಬೇಕಾದ ಸುರಕ್ಷೆ ಹಾಗೂ ಅಗ್ನಿ ಮುಂಜಾಗರೂಕತೆಗಳ ಅರಿವು.

6. ವಿಮಾನದ ದ್ರವವ್ಯವಸ್ಥೆಯ (Field System) ಕೊಳವೆಗಳು, ರಬ್ಬರ್ ಭಾಗಗಳು ಮತ್ತು ವಿಮಾನದ ಭಾಗಗಳನ್ನರಿಯಲು ಬಣ್ಣದ ಸಂಕೇತಗಳು (Colour Coding System) ಮತ್ತು ಇತರೆ ಸೂಚನೆಗಳ ಬಗ್ಗೆ ಅರಿವು.

7. ವಿಮಾನದ ಕೈಪಿಡಿಗಳು (Air Craft Manual) ATA ವಿಧಾನದ ವಿಂಗಡಣೆ, ಪರಿವೀಕ್ಷಣಾ ಸಮಯದ ಮಿತಿ ಇವುಗಳ ಬಗ್ಗೆ ಅರಿವು.

8. ಕೈಗಳಿಂದ ನಡೆಸುವ ಉಪಕರಣಗಳು (Hand Tool), ಸಾಧಾರಣ ಯಂತ್ರೋಪಕರಣ (Machine Tool), ನಿಖರ ಅಳತೆಯ ಸಾಧನಗಳು, ಇವುಗಳ ಭಾಗಗಳು ಮತ್ತು ಉಪಯೋಗದ ಬಗ್ಗೆ ಅರಿವು.

9. Piston System, Jet Engine, Turbine Engine ಮತ್ತು ಪ್ರಾಪೆಲ್ಲರ್‌ಗಳ ಬಗ್ಗೆ ಅರಿವು.

4. ವಾಯು ನೆಲೆ ತಜ್ಞ(ವಾಯು ಯಾನ ಸ್ಥಾನ ಗುರುತಿಸುವವ) (Air Spotter)

1. 20 ಸೆಕೆಂಡುಗಳಲ್ಲಿ ನಮ್ಮ ದೇಶದಲ್ಲಿ ಸೇನೆಯಲ್ಲಿರುವ ಇತ್ತೀಚಿನ 6 ಮಿಲಿಟರಿ ಮತ್ತು ನಾಗರಿಕ ವಿಮಾನ ಗಳನ್ನು ಅವುಗಳ ಛಾಯೆಯಿಂದ ಗುರುತಿಸುವುದು (Silhouettes).

2. ಗುರುತಿಸುವುದು ಮತ್ತು ಅಭ್ಯಾಸಕ್ಕಾಗಿ 3 ಮಾದರಿ ವಿಮಾನಗಳ ರಚನೆ. ಈ ಮಾದರಿಗಳನ್ನು ಉಡಾಯಿಸ ಬೇಕಾಗಿಲ್ಲ.

3. ಭಾರತದ ನಾಗರಿಕ ಮತ್ತು ಸೇವಾ ವಿಮಾನಗಳ ಮತ್ತು ಎರಡು ವಿದೇಶಿ ವಿಮಾನಗಳ ರಾಷ್ಟ್ರೀಯ ಗುರುತುಗಳನ್ನು ತಿಳಿಯುವುದು.

4. ಮೂರು ತಿಂಗಳ ಕಾಲ ಗಮನವಿಟ್ಟು ವೀಕ್ಷಿಸಿ ಈ ಕೆಳಗಿನವುಗಳನ್ನು ದಾಖಲಿಸುವುದು–ಸಂಚರಿಸಿದ ವಿಮಾನಗಳ ಸಂಖ್ಯೆ, ಸಾಧ್ಯವಾದಲ್ಲಿ ದಿನಾಂಕ, ಸಮಯ ಮತ್ತು ಸ್ಥಳ, ಸಾಗುವ ದಿಕ್ಕು, ಸೇವಾ ಅಥವಾ ನಾಗರಿಕ ವಿಮಾನ ಸಂಖ್ಯೆ, ಹವಾಮಾನದ ಸ್ಥಿತಿ ಮತ್ತು ದೇಶದ ಮೂಲ ಅಥವಾ ಹಾರಾಡುತ್ತಿರುವ ವಿಮಾನಗಳನ್ನು ಗುರುತಿಸುವ ಜಾಣ್ಮೆಯನ್ನು ಪ್ರದರ್ಶಿಸುವುದು.

5. ಭಾರತದ ವಾಯುದಳದ ಇತ್ತೀಚಿನ ಯುದ್ಧ ವಿಮಾನಗಳ ಬಗ್ಗೆ ತಿಳಿದುಕೊಳ್ಳುವುದು ಮತ್ತು ಯಾವುದಾದರೂ ಒಂದು ಯುದ್ಧ ವಿಮಾನವನ್ನು ವರ್ಣಿಸುವುದು.

5. **ವೈಮಾನಿಕ (Air Man)**

1. ವೈಮಾನಿಕ ಸಂಚಾರಿ ನಿಯಮಗಳ ಹಾಗೂ ಸಂಕೇತಗಳನ್ನು ತಿಳಿದು ಕೊಂಡು ಪ್ರದರ್ಶಿಸುವುದು.
2. ಬಾನುಲಿ ಕರೆ (Radio Call) ಸಂಕೇತ ಗಳನ್ನು ಅರಿತು ಅವುಗಳ ಬಳಕೆಗಳ ಉಪಯೋಗ.
3. ರಾಡಾರ್ ಸಂಕೇತ (Radar), ಅಳತೆ ಮತ್ತು ಗ್ರಹಿಕೆ.
4. ವಿಮಾನ ಚಾಲಕನ ಆಯಕಟ್ಟಿನ ಜಾಗದಲ್ಲಿರುವ ನಿಯಂತ್ರಣ ಸಾಧನಗಳ ಒತ್ತುಗುಂಡಿ ಮತ್ತು ಇತರ ಮಾಪಕಗಳನ್ನು ಬಳಸುವ ವಿಧಾನವನ್ನು ತಿಳಿದಿರುವುದು.
5. ವಿಮಾನ ಮೈದಾನದಿಂದ ವಿಮಾನವನ್ನು ಹಾರಿಸಲು ಮತ್ತು ಇಳಿಸಲು ತಿಳಿದಿರುವುದು.

6. **ಕ್ರೀಡಾಪಟು (Athlete)**

1. ಸರಿಯಾದ ಭಂಗಿಯಲ್ಲಿ ಕುಳಿತು ಕೊಳ್ಳಲು, ನಿಲ್ಲಲು, ನಡೆಯಲು, ಓಡಲು ಮತ್ತು ಸ್ಪರ್ಧೆಯ ಆರಂಭದಲ್ಲಿ ನಿಲ್ಲುವ ಭಂಗಿ. ಇವುಗಳನ್ನು ಪ್ರದರ್ಶಿಸುವುದು.
2. ಸರಿಯಾದ ತರಬೇತಿ ಮತ್ತು ನಿಗದಿತ (Regular) ಹೊರಾಂಗಣ ವ್ಯಾಯಾಮವನ್ನು ಮಾಡುತ್ತಿರುವ ಬಗ್ಗೆ ದಾಖಲೆ/ಸಾಕ್ಷಿ.

3. ಕೆಳಗಿನ 4ರಲ್ಲಿ ಕೆಳಕಂಡಂತೆ ಅಂಕಗಳನ್ನು ಪಡೆಯುವುದು.

2ನೇ ದರ್ಜೆ – 6 ಅಂಕಗಳು

1ನೇ ದರ್ಜೆ – 8 ಅಂಕಗಳು

ವಿಶೇಷ – 10 ಅಂಕಗಳು

ಅ) 100 ಮೀಟರ್ ಓಟ 14/13/12 ಸೆಕೆಂಡ್‌ಗಳಲ್ಲಿ

ಆ) 800 ಮೀಟರ್‌ಗಳನ್ನು 2 ನಿಮಿಷ 46 ಸೆಕೆಂಡ್ / 2 ನಿಮಿಷ 23 ಸೆಕೆಂಡ್ / 2 ನಿಮಿಷ 12 ಸೆಕೆಂಡ್‌ಗಳಲ್ಲಿ ಓಡುವುದು.

ಇ) ಹೈಜಂಪ್ – 1.08 ಮೀ/1.16 ಮೀ/ 1.25 ಮೀ

ಈ) ಲಾಂಗ್ ಜಂಪ್ – 3 ಮೀ/ 4 ಮೀ/5 ಮೀ

ಉ) ಕ್ರಿಕೆಟ್ ಬಾಲ್ ಎಸೆತ–46.5 ಮೀ/51.00 ಮೀ/ 66.00 ಮೀ.

ಅಥವಾ

8.11 ಪೌಂಡ್‌ನ ಷಾಟ್ ಪುಟ್‌ಅನ್ನು 8.10 ಮೀ/ 9.62 ಮೀ/ 10.53 ಮೀ. ಎಸೆಯುವುದು.

ಊ) 25/50/80 ದಂಡ ಮತ್ತು ಬೈಠಕ್‌ಗಳನ್ನು 86 ಸೆಕೆಂಡ್/ 1 ನಿಮಿಷ, 10 ಸೆಕೆಂಡ್/ 2 ನಿಮಿಷಗಳಲ್ಲಿ ಹಾಕುವುದು. ಸ್ಕ್ವಾಟ್ (Squat) ಟ್ರಸ್ಟ್ ಕೂರುವ ರಭಸ 25 ಸೆಕೆಂಡ್.

7. ವಾಯು ಸಂಚಾರ ಪ್ರವೀಣೆ (Aviator)

1. ವಿಮಾನ ನಿಲ್ದಾಣದಲ್ಲಿ ಅಥವಾ ವಿಮಾನದ ಸಮೀಪದಲ್ಲಿ ಇರುವಾಗ ತೊಡಗಿಸಿಕೊಳ್ಳಬೇಕಾದ ಸಾಮಾನ್ಯ ರಕ್ಷಣಾ ಜಾಗರೂಕತಾ ಕ್ರಮಗಳನ್ನು ತಿಳಿದಿರಬೇಕು.

i) ಹಗಲು ಮತ್ತು ರಾತ್ರಿ ಎರಡೂ ವೇಳೆ ಗಾಳಿಯ ದಿಕ್ಕನ್ನು ತೋರಿಸಿ ವಿಮಾನವನ್ನು ಇಳಿಸಲು ಮತ್ತು ಹಗ್ಗಕಟ್ಟಿ ಎಳೆಯಲು (Taxing and Towing) ಸಹಾಯ ಮಾಡುವುದು.

ii) ಚೋಕ್ (Chocks)ಗಳನ್ನು ಉಪಯೋಗಿಸುವುದು ಮತ್ತು ಸುಧಾರಿಸುವುದು. ಪೋಲಿಸರು ಮತ್ತು ಅಧಿಕಾರಿಗಳು ಬರುವವರೆಗೆ ಸ್ಥಗಿತಗೊಂಡ ಅಥವಾ ಚಲನೆಯಲ್ಲಿರುವ ವಿಮಾನ ಮತ್ತು ಜರ್ಜರಿತವಾದ ಯಂತ್ರ ಮತ್ತು ಅದರ ಭಾಗಗಳನ್ನು ಅಲುಗಾಡಿಸದೆ ಇರಬೇಕಾದುದರ ಪ್ರಾಮುಖ್ಯತೆಯನ್ನು (ಮಹತ್ವ) ಅರಿತಿರುವುದು.

iii) ಸರಿಯಾಗಿ ವಿಮಾನವು ಭೂಸ್ಪರ್ಶ ಮಾಡುವ ಭೂಮಿ ಹೇಗಿರಬೇಕೆಂಬುದನ್ನು ಮತ್ತು ಯಾವುದಾದರೂ 3 ಅಕ್ಕಪಕ್ಕದಲ್ಲಿರುವ ವಿಮಾನ ಇಳಿಸಲು ಸರಿಯಾದ ಬಯಲನ್ನು ಹೆಸರಿಸುವುದು ಹಾಗು ಪ್ರಧಾನ ಕಛೇರಿಯ 80 ಕಿ.ಮೀ. ಒಳಗಿರುವ ಪ್ರಧಾನ ವಿಮಾನ ನಿಲ್ದಾಣಗಳ ದಿಕ್ಕನ್ನು ದಿಕ್ಸೂಚಿಯಿಂದ ತಿಳಿಯುವುದು.

2. ವಿಮಾನಯಾನ ಮತ್ತು ವಿಮಾನ ನಿಲ್ದಾಣದ ಮುಖ್ಯ ವಿವರಣೆಗಳನ್ನು ತಿಳಿದಿರುವುದು. ಮಾದರಿ ವಿಮಾನವನ್ನು (ಉಪಕರಣ ಪೆಟ್ಟಿಗೆಯನ್ನು ಉಪಯೋಗಿಸಿ) ಈ ಕೆಳಗಿನ ಕನಿಷ್ಠ ಉಡಾವಣೆಯನ್ನು ಹೊಂದಿರುವಂತೆ ತಯಾರಿಸಬೇಕು.

ಎಂಜಿನ್ ಇಲ್ಲದ ವಿಮಾನ (ಗ್ಲೈಡರ್)

i) ಕೈಯಿಂದ ಉಡಾವಣೆ – 60 ಸೆಕೆಂಡ್‌ಗಳು

ii) ಹಗ್ಗ ಕಟ್ಟಿ 60 ಮೀಟರ್ ಎಳೆದು ಉಡಾಯಿಸುವ – 45 ಸೆಕೆಂಡ್‌ಗಳು

ವಿಮಾನ

i) ರಬ್ಬರ್ ಶಕ್ತಿಯಿಂದ – 30 ಸೆಕೆಂಡ್ಸ್

ii) ಯಂತ್ರ ಶಕ್ತಿಯ ಹಿಡಿತದಿಂದೊಡಗೂಡಿದ ನಿಯಂತ್ರಣ ರೇಖೆಯಲ್ಲಿ – 15 ಸೆಕೆಂಡ್ಸ್ ಗರಿಷ್ಠ ಯಂತ್ರಚಾಲಿತ.

45 ಸೆಕೆಂಡ್ಸ್

(iii) ವಿಮಾನ ಮಾದರಿಯನ್ನು ಈ ಕೆಳಕಂಡವುಗಳೊಡನೆ ಪ್ರದರ್ಶಿಸುವುದು.

ಅ) ಸರಾಗವಾದ ಉಡಾವಣೆ

ಆ) ಸುಮಾರು 2 ಮೀಟರ್ ಎತ್ತರದಲ್ಲಿ ಮೂರು ಸುತ್ತು ಯಾನ.

ಇ) ಮೇಲಕ್ಕೆ ಹಾರಿ ಸರಾಗವಾಗಿ ಕೆಳಕ್ಕೆ ಇಳಿಸುವುದು.

8. ಸೌಂದರ್ಯ ವರ್ಧಕಿ (Beautician)

1. ತನ್ನ ವೃತ್ತಿಯ ಜ್ಞಾನ ಮತ್ತು ಜವಾಬ್ದಾರಿಗಳನ್ನು ಅರಿತಿರುವುದು.
2. ಹತ್ತಿರದ ಸೌಂದರ್ಯ ವರ್ಧನ ಮಳಿಗೆಗೆ ಭೇಟಿ ಕೊಟ್ಟು, SPA ಚಿಕಿತ್ಸೆ, ಮಸಾಜ್ ಹಾಗೂ ಮುಖದ ಚಿಕಿತ್ಸೆ ಇತರೆ ವಿಷಯಗಳ ಬಗ್ಗೆ ತಿಳಿಯುವುದು.
3. ಒಣ ತ್ವಚೆಯನ್ನು ತೇವದಿಂದಿಡುವ ಉತ್ಪನ್ನಗಳು, ಬೇರೆ ಬೇರೆ ವಿಧದ ಕೂದಲಿಗೆ ಸರಿಹೊಂದುವ ಶಾಂಪೂ ಹಾಗೂ ತ್ವಚೆಗೆ ಸರಿ ಹೊಂದುವ ಸಾಬೂನುಗಳ ಬಗ್ಗೆ ಅರಿವು.
4. ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಒಬ್ಬ ರೇಂಜರ್‌ಳಿಗೆ ಸಿದ್ಧಗೊಳಿಸುವುದು.

5. ಕನಿಷ್ಠ ಒಂದು ತಿಂಗಳು ಮನೆಯ ಹತ್ತಿರದ ಸೌಂದರ್ಯ ವರ್ಧನ ಮಳಿಗೆಯಲ್ಲಿ ಸಹಾಯ ಮಾಡುವುದು.

9. ರಕ್ತದಾನಿ (Blood Donor)

1. ಮಾನವ ದೇಹದ ರಕ್ತದ ರಚನೆ, ಕಾರ್ಯ, ರಕ್ತದ ಪ್ರಮಾಣ ಮತ್ತು ಅದರ ಗುಂಪನ್ನು ತಿಳಿಯುವುದು.
2. ರಕ್ತದಾನಿಯ ಆರೋಗ್ಯ ಹಾಗೂ ರಕ್ತದ ಹೊಂದಾಣಿಕೆ ಬಗ್ಗೆ ತಿಳಿಯುವುದು.
3. ನಿಮ್ಮ ರಕ್ತ ದಾನ ಮಾಡುವುದು.
4. ಕನಿಷ್ಟ 25 ಜನರಿಗೆ ರಕ್ತದಾನ ಅಪಾಯಕಾರಿಯಲ್ಲ ಎಂದು ತಿಳುವಳಿಕೆ ನೀಡುವುದು.
5. ಕನಿಷ್ಟ 5 ದಾನಿಗಳನ್ನು ಗೊತ್ತು ಮಾಡಿಕೊಂಡು ಅವರಿಗೆ ರಕ್ತದಾನ ಮಾಡಲು ಸಹಾಯ ಮಾಡುವುದು.
6. ಸ್ಥಳೀಯ ವೈದ್ಯರಿಗೆ ರಕ್ತ ಸಂಗ್ರಹಿಸಲು ಸಹಾಯ ಮಾಡುವುದು.
7. ರಕ್ತದಾನದ ಬಗ್ಗೆ ಭಿತ್ತಿ ಚಿತ್ರ ಬರೆದು ಮುಖ್ಯಸ್ಥಳಗಳಲ್ಲಿ ಪ್ರದರ್ಶಿಸುವುದು.

10. ಮುಷ್ಟಿಯುದ್ಧ ಮಲ್ಲಿ (Boxer)

1. ಭದ್ರತಾ ಸಲಕರಣೆಗಳಾದ ಶಿರಸ್ತ್ರಾಣ, ದಂತರಕ್ಷಕ ಮತ್ತು ಹಸ್ತಕವಚ (Glove)ಗಳ ಬಗ್ಗೆ ಅರಿವು.
2. ಸದಾ ಶರೀರದಲ್ಲಿ ನೀರಿನ ಪೂರೈಕೆ ಇರುವಂತೆ ನೋಡಿಕೊಳ್ಳುವುದು.

3. ಒಳ್ಳೆ ದೇಹದಾರ್ಢ್ಯ ಇರಬೇಕು.
4. ವ್ಯಾಯಾಮ ಶಾಲೆಗೆ ಹೋಗಿ ಭಾರ ಎತ್ತುವುದನ್ನು ಹಾಗೂ ಮುಷ್ಟಿಯನ್ನು ದೃಢವಾಗಿಟ್ಟುಕೊಳ್ಳಬೇಕು.
5. 6 ತಿಂಗಳು ಒಬ್ಬ ಮುಷ್ಟಿವಿಶಾರದ ಅಥವಾ ವೃತ್ತಿಪರರೆಡೆ ತರಬೇತಿ ಪಡೆದು ವರದಿಯನ್ನು ನೀಡುವುದು.
6. ತಾಲ್ಲೂಕು/ ಜಿಲ್ಲಾ, ರಾಜ್ಯ ಹಾಗೂ ಮುಖ್ಯ ಆಹ್ವಾನವಿರುವ ಮುಷ್ಟಿ ಯುದ್ಧಗಳಲ್ಲಿ ಭಾಗವಹಿಸಿ ಪದಕ ಪರೀಕ್ಷೆ ಹಾಗೂ ಪದಕ ಸಮಿತಿಗೆ ವರದಿಯನ್ನು ನೀಡುವುದು.

11. ಚರ ದೂರವಾಣಿ ತಂತ್ರಜ್ಞ (Cell Phone Mechanic)

1. ಚರ ದೂರವಾಣಿ ಚರಿತ್ರೆಯ ಬಗ್ಗೆ ಮಾಹಿತಿ.
2. ಚರ ದೂರವಾಣಿಯ ಉಪಯೋಗ ಆಧಾರಿತ ವಿಂಗಡಣೆ.
3. ಚರ ದೂರವಾಣಿಗಳನ್ನು ಅದರ ಕಾರ್ಯ ವಿಧಾನ ಹಾಗೂ ವ್ಯಾಪ್ತಿಯನ್ನಾಧರಿಸಿ ವಿಂಗಡಿಸುವುದು.
4. GSM, CDMA, LTE, VOLTE ಫೋನ್‌ಗಳ ವ್ಯತ್ಯಾಸಗಳನ್ನು ತಿಳಿಯುವುದು.
5. ಫೋನ್‌ನಲ್ಲಿರುವ ಬೇರೆ ಬೇರೆ ವಿಧದ ದೋಷ ಅಥವಾ ಸಮಸ್ಯೆಗಳನ್ನು ಅರಿಯುವುದು.
6. ಆ್ಯಪ್ ಅಥವಾ ಅಪ್ಲಿಕೇಶನ್ ಅನ್ನು ಫೋನ್‌ನಲ್ಲಿ ಅಳವಡಿಸುವ ಬಗ್ಗೆ ಅರಿಯುವುದು.

7. ಮೊಬೈಲ್‌ಗಳ ಅಂತರ್ಜಾಲದ ಬಗ್ಗೆ ಅರಿವು.
8. ಸೆಲ್‌ಫೋನ್‌ನ ಭಾಗಗಳನ್ನು ಅರಿಯುವುದು.
9. ಸೂಕ್ಷ್ಮ ದೂರವಾಣಿಯನ್ನು ಉಪಯೋಗಿಸಿ ಒಂದು ನಿರ್ದಿಷ್ಟ ಗುರಿಗೆ ಮಾರ್ಗವನ್ನು ಶೋಧಿಸುವುದು.
10. ಮೊಬೈಲ್‌ನಲ್ಲಿ ಇರುವ Application ಗಳಾದ ಫೇಸ್‌ಬುಕ್, ವಾಟ್ಸ್ ಆಪ್, ಟ್ವಿಟ್ಟರ್, ರೈಲ್‌ಗಳ ಪಟ್ಟಿಮಾಡಿ ಮತ್ತು ಅದರ ಉಪಯೋಗಗಳನ್ನು ತಿಳಿಯುವುದು.
11. ಮೊಬೈಲ್ ದುರಸ್ತಿ ಅಂಗಡಿಯಲ್ಲಿ ಕನಿಷ್ಠ 3 ತಿಂಗಳು ತರಬೇತಿ ಪಡೆಯುವುದು.

12. ನಾಗರಿಕ ರಕ್ಷಣೆ (Civil Defence)

i) ನಿಮ್ಮ ಮನೆ, ಕಾಲೇಜು ಅಥವಾ ಕೆಲಸ ಮಾಡುವ ಜಾಗ, ಮೊಹಲ್ಲಾ ಅಥವಾ ಬಡಾವಣೆಯಲ್ಲಿ 1 ಕಿ.ಮೀ. ಸುತ್ತಮುತ್ತ ಇರುವ ನಾಗರಿಕ ಕೇಂದ್ರದ ಬಗ್ಗೆ ವಿವರವನ್ನು ತಿಳಿದುಕೊಳ್ಳುವುದು. ಉದಾಹರಣೆಗೆ ಕೇಂದ್ರದ ಸ್ಥಳ, ಪಾಲಕರು (Warden) ಪ್ರಥಮಚಿಕಿತ್ಸಾ ವಿಭಾಗ, ಆಸ್ಪತ್ರೆ ಮತ್ತು ARP ಸೇವೆ ಬಗ್ಗೆ ತಿಳಿದಿರುವುದು.

ii) ತುರ್ತು ಸ್ಥಿತಿಯಲ್ಲಿ ಈ ಕೇಂದ್ರದ ಅರ್ಜಿಯನ್ನು ಸರಿಯಾಗಿ ತುಂಬಿಸಿ ಪಾಲಕರಿಗೆ (Warden) ಸಲ್ಲಿಸುವುದನ್ನು ತಿಳಿಯುವುದು.

iii) ವಾಯು ಧಾಳಿಯ ಹಾಗೂ ಇಂತಹ ಇತರೆ ತುರ್ತುಸ್ಥಿತಿಯಲ್ಲಿ ಗಾಯಾಳುಗಳನ್ನು ರಕ್ಷಿಸುವ ಮತ್ತು ಪ್ರಥಮ ಚಿಕಿತ್ಸೆ ನೀಡುವ ವಿಧಾನವನ್ನು ತಿಳಿದಿರಬೇಕು.

iv) ಅಗ್ನಿಶಮನ ವಿಧಾನಗಳನ್ನು ತಿಳಿದಿರುವುದು.

v) ಈ ಕೇಂದ್ರದಲ್ಲಿ ತರಬೇತಿ ಪಡೆದು ನೋಂದಾಯಿಸಿಕೊಂಡು ಪ್ರಮಾಣಪತ್ರವನ್ನು ಸಲ್ಲಿಸುವುದು. ಈ ಕೆಳಗಿನ ರಕ್ಷಣಾ ಸೇವೆಗಳಲ್ಲಿ ಒಂದರ ತರಬೇತಿ ಪಡೆಯಬೇಕು.

ಅ) ಅಗ್ನಿಶಾಮಕ ದಳ

ಆ) ಪ್ರಥಮ ಚಿಕಿತ್ಸಾ ತಂಡ

ಇ) ರಕ್ಷಕದಳ

ಈ) ದೂತಸೇವೆ

ಉ) ದೂರ ಸಂಪರ್ಕ

vi) ಗೈಡ್ ವಿಭಾಗದ ಮಾರ್ಗಾನ್ವೇಷಕರ (Path Finder) ಪದಕ ಗಳಿಸುವುದು.

vii) ಕೆಳಗಿನ ಯಾವುದಾದರೂ ಒಂದು ಗೈಡ್ ವಿಭಾಗದ ಪದಕ ಪಡೆಯುವುದು.

ಅ) ಚರಚಿಕಿತ್ಸೆ (Ambulance)

ಆ) ಆರೋಗ್ಯ (Health)

ಇ) ಅಗ್ನಿಶಾಮಕ (Fireman)

ಸೂಚನೆ: vi ಮತ್ತು viiನೇ ಪದಕವನ್ನು ಗಳಿಸಬೇಕು. ಆದರೆ ಧರಿಸಬಾರದು.

13. ಸಮುದಾಯ ಕಾರ್ಯಕರ್ತೆ (Community Worker)

i) ಸಮುದಾಯದ ಅಭಿವೃದ್ಧಿಯ ವಿಧಾನಗಳನ್ನು ತಿಳಿಯುವುದು.

ii) ಕನಿಷ್ಟ 12 ಗ್ರಾಮ ಯುವತಿಯರ ಮನವೊಲಿಸಿ ರೇಂಜರ್ ತಂಡವನ್ನು ಪ್ರಾರಂಭಿಸುವುದು.

iii) ಸಮುದಾಯ ಹಾಗೂ ಅಭಿವೃದ್ಧಿ ಮೂಲಗಳಾದ ಬ್ಯಾಂಕ್, ಆಸ್ಪತ್ರೆ ತಜ್ಞರ ನಡುವೆ ಮಧ್ಯವರ್ತಿಯಾಗಿ ಸೇವೆ ಸಲ್ಲಿಸುವುದು.

iv) ಶುದ್ಧನೀರು, ಶಾಲಾಕಟ್ಟಡ, ಮಾರುಕಟ್ಟೆ, ಆಸ್ಪತ್ರೆ ಮುಂತಾದ ಮೂಲಭೂತ ಸೌಲಭ್ಯಗಳ ಕನಿಷ್ಠ ಎರಡು ಸಮಸ್ಯೆಗಳನ್ನು ನಿವಾರಿಸಲು ಗ್ರಾಮಸ್ಥರಿಗೆ ಸಹಾಯ ಮಾಡುವುದು.

v) ಯಾವುದಾದರೂ ಬಡಾವಣೆ/ಮೊಹಲ್ಲಾ/ಕೊಳಚೆ ಪ್ರದೇಶಗಳಲ್ಲಿ ಸೋಂಕುನಿರೋಧಕ ಶಿಬಿರವನ್ನು (Immunisation Camp) ಏರ್ಪಡಿಸುವುದು.

vi) ಸಮುದಾಯ ಅಭಿವೃದ್ಧಿ ಕಾರ್ಯವನ್ನು ಹಮ್ಮಿಕೊಂಡು ಅದರಲ್ಲಿ ನಿರಂತರ ಸೇವೆಯಲ್ಲಿ ಸಲ್ಲಿಸುವುದು.

vii) ತನ್ನ ತಂಡದ ಆಪತ್‌ವ್ಯಕ್ತಿಯಾಗಿ, ತನ್ನ ತಂಡದಲ್ಲಿ ಶಿಕ್ಷಕಿಯಾಗಿ, ಪರೀಕ್ಷಕಳಾಗಿ, ಶಿಬಿರ ಸಲಹೆಗಾರ್ತಿಯಾಗಿ ಸಕ್ರಿಯವಾಗಿ ಕಾರ್ಯ ನಿರ್ವಹಿಸುವುದು.

14. ಗಣಕಯಂತ್ರಗಾರ್ತಿ (Computer Operator)

1. ಗಣಕ ಯಂತ್ರಗಳು ನಡೆದು ಬಂದ ದಾರಿ–ಇತಿಹಾಸ.
2. ಗಡಸು ಅಡಕ ಮತ್ತು ಮೃದು ಅಡಕ ಗಳ ವ್ಯತ್ಯಾಸವನ್ನು ಗುರುತಿಸುವುದು.
3. ಗಣಕ ಯಂತ್ರದ ಭಾಗಗಳನ್ನು ಗುರುತಿಸುವುದು ಮತ್ತು ವಿಂಗಡಿಸುವುದು.
4. RAM, ROM, CPU, PROCESSOR (Operating System) ಕಾರ್ಯ ನಿರ್ವಾಹಕಗಳ ಬಗ್ಗೆ ಅರಿವು.
5. MS Office ಬಗ್ಗೆ ತಿಳಿದು ಸ್ಥಳೀಯ/ ಜಿಲ್ಲಾ ಸಂಸ್ಥೆಗಳಿಗೆ ಮಾಹಿತಿ ದಾಖಲಿಸುವುದರಲ್ಲಿ ಸಹಾಯ ಮಾಡುವುದು.
6. 10 ಜನ ಸ್ಥಳೀಯ ಯುವಕ / ಯುವತಿಯರಿಗೆ ಗಣಕ ಯಂತ್ರದ ಜ್ಞಾನವನ್ನು ಕಲಿಸುವುದು.
7. ಬಗೆ ಬಗೆಯ ಮೃದು ಅಡಕ (Software)ಗಳ ಬಗ್ಗೆ ಅರಿವು.
8. ಅಂತರ್ಜಾಲ ಹಾಗೂ ಅವುಗಳ ವ್ಯವಸ್ಥೆಗಳ ಅರಿವು.
9. ಗಡಸು ಬಿಲ್ಲೆ (Hard Disc), ಪೆನ್ ಡ್ರೈವ್, ಫ್ಲಾಷ್ ಡ್ರೈವ್, S.D. Card ಮತ್ತು C.D.()ಗಳಲ್ಲಿ ಮಾಹಿತಿ ಸಂಗ್ರಹಣೆಯ ವಿಧಾನಗಳ ಅರಿವು.

15. ಆರೋಹಿ (Climber)

i) 18 ವರ್ಷ ತುಂಬಿರಬೇಕು.

ii) ಕನಿಷ್ಠ 4 ಕಿ.ಮೀ. ವಿಸ್ತೀರ್ಣ (Radius ತ್ರಿಜ್ಯದ) ಪರ್ವತ ಪ್ರದೇಶದ ಪರಿಚಯ ವಿರಬೇಕು. ಅದು ಪರಿಚಿತ ಸ್ಥಳವಾಗಿರ ಬೇಕು. ಮುಖ್ಯದಾರಿ, ಶಿಬಿರ ಮತ್ತು ವಿಶೇಷ ಸ್ಥಳಗಳನ್ನು ತಿಳಿದಿರಬೇಕು. ತುರ್ತುಸ್ಥಿತಿಯಲ್ಲಿ ಸಂಪರ್ಕಿಸಲು ಹತ್ತಿರದ ವೈದ್ಯರ ದೂರವಾಣಿ ಸಂಖ್ಯೆಯನ್ನು ತಿಳಿದಿರಬೇಕು.

iii) ದೂರದ ಶಿಖರಗಳನ್ನು ಗುರುತಿಸುವುದು. ಪರ್ವತದ ಮತ್ತು ಇತರೆ ವಿವರ ನೀಡುವ ಸರಳ ನಕ್ಷೆಯನ್ನು ತಯಾರಿಸುವುದು.

iv) ದಿಕ್ಸೂಚಿ ಹಾಗೂ ಒಂದು ಅಂಗುಲದ ಭಾರತೀಯ ಸರ್ವೇಕ್ಷಣಾ ನಕ್ಷೆ ಅಥವಾ ಸ್ಥಳೀಯ ನಕ್ಷೆಯ ಸಹಾಯದಿಂದ, ಪರ್ವತದಲ್ಲಿ ಗೊತ್ತುಪಡಿಸಿದ ಶಿಖರಕ್ಕೆ ದಾರಿ ಕಂಡುಹಿಡಿದು ಕೊಂಡು ತನ್ನ ಆರೋಹಣ ಸಾಮರ್ಥ್ಯವನ್ನು ತೋರಿಸುವುದು (ನಿರೂಪಿಸುವುದು).

v) ಸ್ಥಳೀಯ ಹವಾಮಾನದ ಸ್ಥಿತಿಯನ್ನು ತಿಳಿಯುವುದು. ತುರ್ತುಸ್ಥಿತಿಯನ್ನು ಎದುರಿಸುವ ಕ್ರಮವನ್ನು ತಿಳಿಯುವುದು (ನಿರೂಪಿಸುವುದು).

ಉದಾ: ಕಗ್ಗತ್ತಲು, ಹಿಮದ ಬಿರುಗಾಳಿ, ಇಬ್ಬನಿ ಹಾಗೂ ಪರ್ವತದಲ್ಲಿನ ಅನಾರೋಗ್ಯಗಳು, ಭೂಕುಸಿತಗಳ ಅಪಾಯಗಳು.

vi) ಅಸ್ತಿಭಂಗ, ಸ್ಥಾನಪಲ್ಲಟ, ಊತ, ತರಚುಗಾಯ, ಆಘಾತಗಳಿಗೆ, ಶ್ವಾಸಕೋಶದ ತೊಂದರೆಗಳಿಗೆ, ಪ್ರಥಮ ಚಿಕಿತ್ಸೆ ತಿಳಿದಿರುವುದು. ಗಾಯಾಳುಗಳನ್ನು ಸಾಗಿಸುವ ವಿಧಾನಗಳನ್ನು ತಿಳಿದಿರುವುದು.

vii) ವಾರಕ್ಕೊಮ್ಮೆ ಮಿತವಾದ ಹೊರಸಂಚಾರ, ಪರ್ವತ ಪ್ರದೇಶದಲ್ಲಿ ಸಾಮಾನುಗಳೊಂದಿಗೆ ಕನಿಷ್ಠ 1200 ಮೀ. ಏರುವುದು. ಅನುಕ್ರಮವಾಗಿ ಕನಿಷ್ಠ 3 ರಾತ್ರಿ ಪರ್ವತ ಪ್ರದೇಶದಲ್ಲಿ ತಂಗುವುದು.

viii) ಮಾನ್ಯತೆ ಪಡೆದ ಪರ್ವತಾರೋಹಣ ಸಂಘದಲ್ಲಿ ಮೂಲತರಬೇತಿ (Basic Course) ಪಡೆಯತಕ್ಕದ್ದು.

16. ಮರುಭೂಮಿಯ ಜಾನಪದ (Desert Folk)

ಈ ಕೆಳಕಂಡ ವಿಷಯಗಳನ್ನು ಅರಿತಿರಬೇಕು.

1. "ಮರುಭೂಮಿಯಲ್ಲಿ ಜೀವನ"ದ ಬಗ್ಗೆ ತನ್ನ ಅಧ್ಯಯನ ಹಾಗೂ ಮರುಭೂಮಿಯ ಜೀವನದ ವೀಕ್ಷಣೆಯ ಮೂಲಕ ಈ ಕೆಳಕಂಡ ವಿಷಯಗಳನ್ನು ಅರಿತಿರಬೇಕು.

i) ಭೂಮಿ, ನದಿ, ವಾತಾವರಣ ಮುಂತಾದವುಗಳ ಭೌಗೋಳಿಕ ಪರಿಸ್ಥಿತಿ.

ii) ಜನಜೀವನದ ಬಗ್ಗೆ

iii) ಜೀವನಮಟ್ಟ ಮತ್ತು ಶೈಲಿ, ನಿತ್ಯ ಜೀವನದಲ್ಲಿ ವೇಷಭೂಷಣ ಮತ್ತು ಆಹಾರ ಪದ್ಧತಿ ಇತ್ಯಾದಿ.

iv) ಜನರ ಸಾಧಾರಣ ಅಭ್ಯಾಸಗಳು, ವಿಶೇಷ ಸಂಪ್ರದಾಯಗಳು, ಮತ, ಮೂಢನಂಬಿಕೆಗಳು ಮತ್ತು (Taboo) ನಿಷಿದ್ಧ ಪದ್ಧತಿಗಳು.

v) ಜನರು ಎದುರಿಸುವ ಪ್ರಾಕೃತಿಕ ಸಮಸ್ಯೆಗಳು ಮತ್ತು ಅವುಗಳ ಪರಿಹಾರದ ವಿಧಗಳು.

ಈ ಮೇಲಿನ ಅಂಶಗಳನ್ನು ಅಧ್ಯಯನ ಮಾಡಲು ಹಮ್ಮಿಕೊಂಡ 3 ಹೊರ ಸಂಚಾರಗಳ ವರದಿ. ಹೊರ ಸಂಚಾರದಲ್ಲಿ 15 ಚದರ ಮೈಲಿ/ 24 ಚದರ ಮೀಟರ್‌ಗಳ ವಿಸ್ತೀರ್ಣವನ್ನು ಅಧ್ಯಯನ ಮಾಡಿರಬೇಕು ಮತ್ತು ಹಳ್ಳಿಗೆ ಹೋಗುವ ದಾರಿಗಳು, ನೀರಿನ ನೆಲೆ, ಓಯಸಿಸ್ (ಮರಳುಗಾಡಿನ ಮಧ್ಯದಲ್ಲಿರುವ ಫಲವತ್ತಾದ ಭೂಮಿ) ಮತ್ತು ಸುತ್ತಮುತ್ತಲಿರುವ ಶಿಬಿರ ಕೇಂದ್ರಗಳ ಬಗ್ಗೆ ಮಾಹಿತಿ.

2. ಪ್ರಕೃತಿ ಅಧ್ಯಯನ

i) ವಾತಾವರಣದ ಮುನ್ಸೂಚನೆ ನೀಡುವ ಗಾದೆಗಳು ಮತ್ತು ಸೂಕ್ತಿಗಳನ್ನು ಸಂಗ್ರಹಿಸಿ ಅದರ ಆಧಾರದಂತೆ ತನ್ನದೇ ಆದ ವೀಕ್ಷಣೆ / ಅವಲೋಕನಗಳನ್ನು ದಾಖಲಿಸುವುದು.

ii) ಗಾಳಿಯ ವೇಗ / ರಭಸವನ್ನು ಅಳೆಯುವುದು.

3. ನೀರು ಮತ್ತು ನೀರಾವರಿ

i) ಈ ಕೆಳಗಿನ ವಿಷಯಗಳ ಬಗ್ಗೆ ಮಾಹಿತಿ

- ನೀರಾವರಿಯ ವಿಧಾನಗಳು
- ನೀರನ್ನು ಶೋಧಿಸುವ ಮತ್ತು ಸ್ವಚ್ಛಗೊಳಿಸುವ ವಿಧಾನಗಳು
- ಕಲುಷಿತ ನೀರನ್ನು ಕುಡಿದಾಗ ಆಗುವ ತೊಂದರೆಗಳು
- ನೀರಿನ ಅಭಾವವನ್ನು ನಿರ್ಮೂಲನಗೊಳಿಸಲು ಸರ್ಕಾರ ಕೊಡುವ ಸವಲತ್ತುಗಳು

ii) ಆ ಪ್ರಾಂತ್ಯದ ಮುಖ್ಯ ಬೆಳೆಗಳು ಮತ್ತು ಧಾನ್ಯಗಳು, ನಾಲೆ ಅಥವಾ ಅಣೆಕಟ್ಟುಗಳು ನೀರಾವರಿ ಮತ್ತು ನೀರಿನ ಸಂಗ್ರಹಣೆ ಮಾಡುವ ವಿಧಗಳು.

iii) **ಕರಕುಶಲತೆ:** ಅಲ್ಲಿನ ಪ್ರಕೃತಿಯಲ್ಲಿ ದೊರೆಯುವ ಕಚ್ಚಾ ಪದಾರ್ಥಗಳನ್ನು ಉಪಯೋಗಿಸಿ ಒಂದು ಹಗ್ಗವನ್ನು ಹೆಣೆಯಬೇಕು ಅಥವಾ ಒಂದು ಮಂಚವನ್ನು ಹೆಣೆಯಬೇಕು ಅಥವಾ ಛಾವಣಿಯನ್ನು ತಯಾರಿಸಿ ಅದರ ಉಪಯೋಗ ವನ್ನು ತೋರಿಸುವುದು.

4. ಹೊರ ಸಂಚಾರ

i) ಹೊರ ಸಂಚಾರದಲ್ಲಿ, ಮರಳುಗಾಡಿನ ಪ್ರಾಕೃತಿಕ ಸನ್ನಿವೇಶಗಳಲ್ಲಿ ಬಿಸಿಲ್ಗುದುರೆ (ಮರಳುಗಾಡಿನಲ್ಲಿ ನೀರು ಹರಿಯುವಂತೆ ಕಾಣುವ ದೃಶ್ಯ) ಮತ್ತು ಭನ್ವಾರಿ (ಭೂಮಿಯ ಕುಸಿತ) ಇವುಗಳ ಬಗ್ಗೆ ಅರಿಯುವುದು.

ii) 51 ಗಂಟೆಗಳು ನಿಗದಿತ ಸಂಸ್ಥೆಯುಲ್ಲಿ ಸೇವೆಯುನ್ನು ಮಾಡುವುದು ಅಥವಾ ಬೆಳೆನಾಶಕ ಕೀಟಗಳ ವಿರುದ್ಧ ಅಭಿಯಾನ ನಡೆಸುವುದು.

17. ವಿಕೋಪದ ನಿರ್ವಹಣೆ (Disaster Management)

1. ವಿಕೋಪ ಮತ್ತು ಅಪಾಯ / ಕಂಟಕ ಎಂದರೇನು ಎಂದು ಖಚಿತವಾಗಿ ತಿಳಿದುಕೊಳ್ಳುವುದು.

2. ಅವರಿರುವ ಸ್ಥಳದಲ್ಲಿ ಆಗಬಹುದಾದ ಪ್ರಕೃತಿ ಮತ್ತು ಮಾನವ ನಿರ್ಮಿತ ವಿಕೋಪಗಳ ಬಗ್ಗೆ ಅರಿವು.

3. ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವ ಸಂಸ್ಥೆಗಳ ಪಾತ್ರ.
4. ವಿಕೋಪದ ಸಿದ್ಧತೆ ಎಂದರೇನು ಮತ್ತು ಇದರ ಸಿದ್ಧತೆಗೆ ಸೂಚನೆಗಳ ಪಟ್ಟಿ ತಯಾರಿಕೆ.
5. ವಿಕೋಪದ ಪರಿಹಾರವನ್ನು ವಿವರಿಸಬೇಕು ಮತ್ತು ಪರಿಹಾರ ಕಾರ್ಯದಲ್ಲಿ ರೇಂಜರ್‌ಳ ಪಾತ್ರ.
6. ನಾಗರಿಕ ರಕ್ಷಣೆ, ಅಗ್ನಿಶಾಮಕ ದಳ ಮತ್ತು ಹಾಮ್ (HAM) ರೇಡಿಯೋಗಳ ಬಗ್ಗೆ ಅರಿವು.
7. ಆಧುನಿಕ ಪ್ರಥಮ ಚಿಕಿತ್ಸೆ, ರಕ್ಷಣಾ ಸೇವೆ, ಆಘಾತ, ರಕ್ತದಾನಗಳ ಬಗ್ಗೆ ಇಂತಹ ಪರಿಹಾರ ಕಾರ್ಯಗಳು ಮತ್ತು
8. ನಿಮ್ಮ ಸ್ಥಳದಲ್ಲಿ ದುರ್ಘಟನೆಗಳು ಸಂಭವಿಸಬಹುದಾದ ಸ್ಥಳಗಳ ಬಗ್ಗೆ ಅರಿವು.
9. HAM, ದೂರಸಂಪರ್ಕ (Tele Communication) ಅಂತರ್ಜಾಲಗಳ ಮೂಲಕ ವ್ಯವಹರಿಸುವ ಜ್ಞಾನ.
10. ಪುನರ್ವಸತಿ/ಪುನರ್ನಿವಾಸ (Rehabilitative) ಎಂದರೇನು ಮತ್ತು ಈ ಬಗ್ಗೆ ಸರ್ಕಾರ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಕೊಡುತ್ತಿರುವ ಸವಲತ್ತುಗಳ ಬಗ್ಗೆ ಮಾಹಿತಿ.

i) ಯಾವುದಾದರೊಂದು ಪರಿಹಾರ ಕಾರ್ಯಕ್ರಮದಲ್ಲಿ ಭಾಗಿಯಾಗುವುದು

18. ವಿಕೋಪಕ್ಕೆ ಸಿದ್ಧತೆ (Disaster Preparedness)

1. ವಿಕೋಪದ ಬಗೆಗಳು

2. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಅಥವಾ ಯಾವುದಾದರೂ ಗುರುತಿಸಲ್ಪಟ್ಟ ಸಂಸ್ಥೆಯು ಪ್ರಾಯೋಜಿಸಿದ ಪ್ರಕೃತಿ ವಿಕೋಪ ಸಿದ್ಧತಾ ಶಿಬಿರದಲ್ಲಿ ಪಾಲ್ಗೊಳ್ಳುವುದು.
3. ನಾಗರಿಕ ರಕ್ಷಣೆ ಹಾಗೂ ರಕ್ಷಣಾ / ಕಾಪಾಡುವ (Rescue) ವಿಧಾನಗಳ ಬಗ್ಗೆ ಸಾಮಾನ್ಯ ಅರಿವು.
4. ವಸ್ತು ಪ್ರದರ್ಶನ, ಬೀದಿ ನಾಟಕ, ಮನೆಯಿಂದ ಮನೆಗೆ ಭೇಟಿ ನೀಡಿ ಪರಿಶೀಲನೆ, ಚಿತ್ರಪ್ರದರ್ಶನ ಮುಂತಾದವುಗಳ ಮೂಲಕ ಜನಸಾಮಾನ್ಯರಲ್ಲಿ ಭೂಕಂಪ, ನೆರೆ, ಯುದ್ಧ ಮತ್ತು ಸ್ಥಳೀಯವಾಗಿ ಎದುರಾಗುವ ವಿಪತ್ತುಗಳ ಬಗ್ಗೆ ಅರಿವು ಮೂಡಿಸುವುದು.

19. ಜೀವಪರಿಸರ ಶಾಸ್ತ್ರಜ್ಞೆ (Ecologist)

1. ಜೀವಪರಿಸರ ಸಮತೋಲನದ ಬಗ್ಗೆ ಕೆಲಸ ಮಾಡುವ ಇತರ ಮಧ್ಯವರ್ತಿಗಳ ಬಗ್ಗೆ ತಿಳಿಯುವುದು.
2. ಮರ ಕಡಿಯುವ ವಿರುದ್ಧ ಪ್ರಚಾರ ಮಾಡುವುದು.
3. ಮುಂಗಾರು ಮಳೆಯ ಸಮಯದಲ್ಲಿ ವನಮಹೋತ್ಸವವನ್ನು ಏರ್ಪಡಿಸುವುದು.

4. ಬಡಾವಣೆಯಲ್ಲಿರುವ ಪರಿಸರ ಮಾಲಿನ್ಯ ಸಮಸ್ಯೆಗಳನ್ನು ಅಲ್ಲಿನ ನಿವಾಸಿಗಳಿಗೆ ತಿಳಿಯಪಡಿಸುವುದು.

5. ಕೆಳಗಿನ ಯಾವುದಾದರೂ ಪರಿಸರ ಮಾಲಿನ್ಯ ಸಮಸ್ಯೆಗಳನ್ನು ಪರಿಹರಿಸಲು ಕಾರ್ಯೋನ್ಮುಖರಾಗುವುದು.

   ಅ) ಮಣ್ಣಿನ ಸವಕಳಿ

   ಆ) ಮರ ಕಡಿಯುವುದು

   ಇ) ಪ್ರಾಣಿ ಹತ್ಯೆ

   ಈ) ನೀರಿನ ಅಪವ್ಯಯ ಹಾಗೂ ಜಲಮಾಲಿನ್ಯ

   ಉ) ವಾಯು ಮಾಲಿನ್ಯ

   ಊ) ಕಸ ಎಸೆಯುವುದು

   ಋ) ಶಬ್ದ ಮಾಲಿನ್ಯ

6. ವಸ್ತು ಪ್ರದರ್ಶನದ ಮೂಲಕ ಸುತ್ತ-ಮುತ್ತಲಿನ ಜನರಿಗೆ ಜೀವಪರಿಸರ ಸಮತೋಲನದ ಬಗ್ಗೆ ಅರಿವು ಮೂಡಿಸುವುದು.

ಅಥವಾ

ಮರಗಳ ಮಹತ್ವದ ಬಗ್ಗೆ ಬೀದಿನಾಟಕದಿಂದ ಸಾರ್ವಜನಿಕ ಅರಿವು ಮೂಡಿಸುವುದು.

7. ಪರಿಸರ ದಿನಾಚರಣೆ, ಪೃಥ್ವಿ ದಿನ (Earth Day) ತಂಬಾಕಿನ ವಿರುದ್ಧ, ಜೀವಪರಿಸರದ ವಿಷಯಗಳ ಬಗ್ಗೆ ವಿಶೇಷವಾಗಿ ಅರಿವು ಮೂಡಿಸುವುದು.

20. ಶಕ್ತಿ ಸಂರಕ್ಷಕಿ (Energy Conservator)

1. ವಿವಿಧ ಶಕ್ತಿಗಳ ಮೂಲ ಮತ್ತು ಅದರ ಉಪಯೋಗ.
2. ನಮ್ಮಲ್ಲಿರುವ ಸಾಂಪ್ರದಾಯಿಕವಲ್ಲದ ಶಕ್ತಿಮೂಲಗಳ ಪಟ್ಟಿಯನ್ನು ತಯಾರಿಸುವುದು.
3. ವಿದ್ಯುತ್ ಸರಬರಾಜಿನ ಬಗ್ಗೆ ಅರಿವು.
4. ದೀಪ ಮತ್ತು ಫ್ಯಾನ್‌ಗಳನ್ನು ಉಪಯೋಗ ಮಾಡದಿದ್ದಲ್ಲಿ ಆರಿಸಿ ಮಿತವ್ಯಯವನ್ನು ತೋರಿಸುವುದು.
5. Split / Windows ಹವಾನಿಯಂತ್ರಿಕೆಯನ್ನು ಸಿದ್ಧಗೊಳಿಸುವುದರ ಬಗ್ಗೆ ಅರಿವು.
6. ಸೌರಶಕ್ತಿಯ ಬಗ್ಗೆ ಜ್ಞಾನ, ಸೌರಶಕ್ತಿಯ ಬಗ್ಗೆ ಇರುವ ಸರ್ಕಾರಿ ಯೋಜನೆಗಳು, ಸೌರಶಕ್ತಿಯ ಯಂತ್ರ ಸಾಮಗ್ರಿ ಹಾಗೂ ಸಲಕರಣೆಯನ್ನು ಒದಗಿಸುವ ಸಂಸ್ಥೆಗಳ ಬಗ್ಗೆ ತಿಳಿದುಕೊಂಡು ನಿಮ್ಮ ಮನೆಯ ಸುತ್ತಮುತ್ತ ಸೌರಶಕ್ತಿಯ ಬಳಕೆಯನ್ನು ಪ್ರೇರೇಪಿಸುವುದು.
7. ವಿದ್ಯುಚ್ಛಕ್ತಿಯ ಸಂರಕ್ಷಣೆಯ ವಿಧಗಳು ಮತ್ತು ಅದರ ಅರ್ಥದ ಬಗ್ಗೆ ಅರಿವು.
8. ಈ ಮೇಲಿನ ಕಾರ್ಯಗಳನ್ನು ಹಮ್ಮಿಕೊಂಡು ಇದರ ಮೂಲಕ 3 ತಿಂಗಳು ಉಳಿಸಿರುವ ಶಕ್ತಿಯನ್ನು ದಾಖಲಿಸಿ ವರದಿಯನ್ನು ಪರೀಕ್ಷಕರಿಗೆ ಅರಿಕೆ ಮಾಡುವುದು.

21. ಪರಿಶೋಧಕಿ / ಅನ್ವೇಷಕಿ (Explorer)

1. ವಿವಿಧ ನಕ್ಷೆಗಳ ಅಧ್ಯಯನ ಮತ್ತು ಅದರಲ್ಲಿ ಸ್ಥಳಗಳನ್ನು ಗುರುತಿಸುವುದು.
2. ಮುಖ್ಯವಾದ ಸ್ಥಳಗಳನ್ನು ನಕ್ಷೆಯಲ್ಲಿ ಸೂಚಿಸುವುದು.
3. ಇನ್ನೊಬ್ಬ ರೇಂಜರ್‌ಳೊಂದಿಗೆ 5 ದಿನಗಳು ನಿಮ್ಮ ಸ್ಥಳದಿಂದ ಕನಿಷ್ಠ 75 ಕಿ.ಮೀ. ಹೊರಸಂಚಾರ (ಕಾಲ್ನಡಿಗೆಯಲ್ಲಿ) ಮಾಡಿ, ಹೊಸ ಜಾಗವನ್ನು ಅನ್ವೇಷಣೆ ಮಾಡಿ ಅದರ ಛಾಯಾಚಿತ್ರವನ್ನು ತೆಗೆದು, ಒಂದು ನಕ್ಷೆಯನ್ನೂ ಸಹ ತಯಾರಿಸುವುದು.
4. ನಿಮ್ಮ ಗುಂಪಿನ ಮತ್ತೆ ನಾಲ್ವರಿಗೆ ಆ ಸ್ಥಳಕ್ಕೆ ಹೋಗಲು ಮಾರ್ಗದರ್ಶನ ನೀಡುವುದು.
5. ಆ ಸ್ಥಳದಲ್ಲಿರುವ ವನಸಂಪತ್ತನ್ನು ಪಟ್ಟಿ ಮಾಡುವುದು.
6. ಅನ್ವೇಷಿಸಿದ ಸ್ಥಳದ ಭೌಗೋಳಿಕ ಲಕ್ಷಣಗಳನ್ನು ತಿಳಿದುಕೊಳ್ಳು ವುದು.

22. ಕುಟುಂಬ ಜೀವನ ಶಿಕ್ಷಕಿ (Family Life Educator)

ಕುಟುಂಬ ಜೀವನ ಶಿಕ್ಷಣವು ಕುಟುಂಬದ ಚೌಕಟ್ಟಿನಲ್ಲಿ ನಡೆದು ಬರುತ್ತಿರುವ ಆರೋಗ್ಯವಂತ ಸಂಸಾರದ ವಿಧಿ ವಿಧಾನಗಳ ಮೇಲೆ ಕೇಂದ್ರೀಕೃತವಾಗಿ ಪ್ರಾಥಮಿಕ ಹಂತದಲ್ಲಿಯೇ ಮಾರ್ಗಸೂಚಿಯಾಗಿರುತ್ತದೆ.

ಆರೋಗ್ಯವಂತ ಕುಟುಂಬ ನಡೆಸಲು ಬೇಕಾದ ಕೌಶಲ ಮತ್ತು ಜ್ಞಾನವು ಈ ಕೆಳಗಿನಂತಿದೆ:

1. ಈ ಕಲೆಯನ್ನು ಐದು ಕುಟುಂಬಗಳಿಗೆ ಬೋಧಿಸಿ, ಅಲ್ಲಿನ ವ್ಯಕ್ತಿಗಳು ಮತ್ತು ಕುಟುಂಬವು ಆಶಾದಾಯಕವಾದ ರೀತಿಯಲ್ಲಿ ನಡೆಯುವಂತೆ ಪ್ರೋತ್ಸಾಹಿಸುವುದು.

2. ನಿಮ್ಮ ಸುತ್ತಮುತ್ತಲಿರುವ ಕುಟುಂಬದ ಸದಸ್ಯರಿಗೆ ಹೆಚ್ಚು ಮಕ್ಕಳನ್ನು ಹೊಂದಿದ್ದರೆ ಆಗುವ ಕೆಡುಕನ್ನು ವಿವರಿಸಿ, ಒಂದು ವರದಿಯನ್ನು ಪರೀಕ್ಷಕರಿಗೆ ಸಲ್ಲಿಸುವುದು.

3. ಅತೀವ ದುರ್ವರ್ತನೆ ಕೌಟುಂಬಿಕ ಹಿಂಸೆ, ನಿರುದ್ಯೋಗ, ಸಾಲ ಮತ್ತು (Child Abuse) ಮಕ್ಕಳ ಶೋಷಣೆ ಇವುಗಳ ಬಗ್ಗೆ ಮಾಹಿತಿ ಪಡೆದು ಯಾವುದಾದರೂ ಎರಡು ವಿಷಯಗಳ ಬಗ್ಗೆ ಅವುಗಳನ್ನು ನಿವಾರಿಸಲು ಅಭಿಯಾನ ಏರ್ಪಡಿಸುವುದು.

4. ಕೌಟುಂಬಿಕ ಜೀವನ ಶಿಕ್ಷಣದ ಬಗ್ಗೆ ಭಿತ್ತಿಚಿತ್ರಗಳೊಂದಿಗೆ ವಸ್ತು ಪ್ರದರ್ಶನವನ್ನು ಏರ್ಪಡಿಸುವುದು.

5. ಕುಟುಂಬ ಕಲ್ಯಾಣ ಕಾರ್ಯಕ್ರಮವನ್ನು ಒಪ್ಪಿಕೊಳ್ಳಲು 5 ಕುಟುಂಬಗಳನ್ನು ಉತ್ತೇಜಿಸುವುದು (Motivation) ಮತ್ತು ಐದು ದಂಪತಿಗಳನ್ನು ಜನಸಂಖ್ಯಾ ನಿಯಂತ್ರಣಕ್ಕೆ ಸರ್ಕಾರದ ವ್ಯವಸ್ಥೆಯನ್ನು ಒಪ್ಪಿಕೊಳ್ಳುವಂತೆ ಮಾಡಿ ಪರೀಕ್ಷಕರಿಗೆ ವರದಿಯನ್ನು ಸಲ್ಲಿಸುವುದು.

23. ವಸ್ತ್ರ ವಿನ್ಯಾಸಕಿ (Fashion Designer)

1. ವಸ್ತ್ರ ವಿನ್ಯಾಸಕ್ಕೆ ಸಂಬಂಧಪಟ್ಟ ವಿವಿಧ ಕ್ಷೇತ್ರಗಳ ಬಗ್ಗೆ ತಿಳಿಯುವುದು.
2. ವಸ್ತ್ರ ವಿನ್ಯಾಸಕ್ಕೆ ಸಂಬಂಧಿಸಿದ ಶಬ್ದ/ ಶಬ್ದ ಸಮೂಹಗಳನ್ನು ತಿಳಿಯುವುದು.
3. ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದರ ನಾಲ್ಕು ನಮೂನೆಗಳ ಚಿತ್ರ ಬಿಡಿಸುವುದು.

   ಅ) ಸಾದಾ ಫ್ರಾಕ್
   ಆ) ರವಿಕೆ
   ಇ) ಸಾದಾ ಟಿ–ಷರ್ಟ್
   ಈ) ಷರ್ಟ್
   ಉ) ಹೆಣ್ಣುಮಕ್ಕಳ ಮೇಲಂಗಿ

4. 5 ವಸ್ತ್ರ ವಿನ್ಯಾಸ ಸಂಸ್ಥೆಗಳ ಪಟ್ಟಿಯನ್ನು ತಯಾರಿಸುವುದು.
5. 5ರಿಂದ 8 ವರ್ಷದ ಮಕ್ಕಳಿಗೆ ಪರೀಕ್ಷಕರ ಆಯ್ಕೆಯ ಟಿ–ಷರ್ಟ್ ಅಥವಾ ಹುಡುಗಿಯರ ಮೇಲಂಗಿಯನ್ನು ತಯಾರಿಸುವುದು.
6. ಒಂದು ವಿನ್ಯಾಸದಲ್ಲಿ ಗೆರೆ, ಆಕಾರ, ಬಣ್ಣ ಮತ್ತು ನೇಯ್ಗೆ (Texture) ಮುಂತಾದವುಗಳನ್ನು ಉಪಯೋಗಿಸುವುದು.
7. ವಿನ್ಯಾಸದ ಸಮತೋಲನ (Balance), ಪ್ರಮಾಣ (Proportion), ಹೊಂದಿಕೆ (Harmony), ಆಕಾರ ಮತ್ತು ಅಂತರಗಳ ಬಗ್ಗೆ ಅರಿವು.
8. ಲಂಗ (Skirt) ಅಥವಾ ಷರಾಯಿ (ಪಾಯಿಜಾಮ) (Trousers) ಇವುಗಳ ವಿನ್ಯಾಸದ ಮೂಲತತ್ತ್ವ / ಭಾವನೆಗಳನ್ನು ಅರಿಯುವುದು.

24. ಲಲಿತ ಕಲೆ (Fine Art)

1. ರೇಂಜರ್‌ಳು ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಆರಿಸಿಕೊಳ್ಳಬಹುದು.

   i) ಚಿತ್ರ ಬಿಡಿಸುವುದು ಮತ್ತು ಬಣ್ಣ ತುಂಬುವುದು, ಪ್ರಮಾಣ ಚಿತ್ರಕಲೆ (Proportion Sketching), ಚಿತ್ರಕಲೆ, ನಕ್ಷೆ, ಬೆಳಕು ಮತ್ತು ಕತ್ತಲೆ, ಬಣ್ಣದ ಸ್ಥಿರಚಿತ್ರ, ರಮ್ಯ ದೃಶ್ಯ.

   ii) **ಶಿಲ್ಪಕಲೆ:** ಗುಂಡನೆ ಕೆತ್ತನೆಯ, ಶಿಲ್ಪಕಲೆ, ಜೇಡಿಮಣ್ಣಿನೊಂದಿಗೆ ಪ್ರತಿಕೃತಿಶಿಲ್ಪ, ಜೇಡಿಮಣ್ಣಿನ ಆಕೃತಿಗಳು, ಟೆರಕೋಟ, ಮರದ ಕೆತ್ತನೆ, ಕಲ್ಲಿನಲ್ಲಿ ಕೆತ್ತನೆ, ಕಂಚಿನಲ್ಲಿ ಎರಕ ಹೊಯ್ಯುವುದು. ಗ್ರಾಫಿಕ್ಸ್.

   iii) **ಕಲ್ಪಿತ ಕಲೆ (Applied Art):** ಈ ಕೆಳಗಿನ ಯಾವುದಾದ ರೊಂದರಲ್ಲಿ ವಿನ್ಯಾಸ ಮಾಡಿ ನಿಮ್ಮ ದಕ್ಷತೆಯನ್ನು ತೋರಿಸುವುದು.

   ಅ) ಕೈಗಾರಿಕಾ ವಿನ್ಯಾಸ –
   ಆ) ಗ್ರಾಫಿಕ್ ವಿನ್ಯಾಸ
   ಇ) ವಸ್ತ್ರ ವಿನ್ಯಾಸ
   ಈ) ಒಳಾಂಗಣ ವಿನ್ಯಾಸ
   ಉ) ಅಲಂಕಾರಿಕ ಕಲೆ
   ಊ) ವಾಸ್ತುಶಿಲ್ಪ
   ಋ) ಛಾಯಾಚಿತ್ರಣ

   iv) **ವಾಣಿಜ್ಯ ಕಲೆ (Commercial Arts):** ಪತ್ರಿಕೆಯ ಮುಖಪುಟ ಅಥವಾ ವಾರ್ತಾ ಪತ್ರಿಕೆಯ ಮುಖಪುಟದ ವಿನ್ಯಾಸ ಮಾಡುವುದು.

2. ಅನುಪಮ ಶಿಲ್ಪವನ್ನು ಮಾಡಿ ಅದನ್ನು ತರಬೇತಿ ಕೇಂದ್ರ ಅಥವಾ ವಸ್ತು ಪ್ರದರ್ಶನದಲ್ಲಿ ಪ್ರದರ್ಶಿಸುವುದು. ಈ ಶಿಲ್ಪವನ್ನು ಪರೀಕ್ಷಕರ ಎದುರಿನಲ್ಲೇ ಮಾಡಬೇಕು.

25. ಪ್ರಥಮ ಚಿಕಿತ್ಸಕಿ (First Aider)

1. ಪ್ರಥಮ ಚಿಕಿತ್ಸೆಯ ತತ್ತ್ವಗಳು ಮತ್ತು ಅತ್ಯಮೂಲ್ಯ ನಿಯಮಗಳು (Golden Rules).
2. ಒಬ್ಬ ವ್ಯಕ್ತಿಯ ಬಟ್ಟೆಗಳಿಗೆ ಬೆಂಕಿ ತಗುಲಿದಾಗ ಸಹಾಯ ಮಾಡುವ ಬಗೆ.
3. ಬಟ್ಟೆಗಳಿಗೆ ಬೆಂಕಿ ಬಿದ್ದಾಗ ತೆಗೆದುಕೊಳ್ಳಲೇಬೇಕಾದ ಕ್ರಮವನ್ನು ಅಣಕು ಕವಾಯತು (Mock Drill) ಮೂಲಕ ನಿಮ್ಮ ಸ್ಥಳೀಯರಿಗೆ ಪ್ರದರ್ಶಿಸುವುದು.
4. ಬೆಂಕಿ ಬಿದ್ದಾಗ ಮತ್ತು ವಿಷ ಅನಿಲದಿಂದ ವ್ಯಕ್ತಿಗಳನ್ನು ಕಾಪಾಡುವ ಬಗೆಯನ್ನು ದಳದ ರೇಂಜರ್ಸ್‌ಗಳಿಗೆ ತರಬೇತು ನೀಡುವುದು ಮತ್ತು ಪ್ರದರ್ಶಿಸುವುದು.
5. ಜೀವರಕ್ಷಕ ಗಂಟನ್ನು ಎಸೆದು, ಮುಳುಗುತ್ತಿರುವವರನ್ನು ರಕ್ಷಿಸಿ, ಹೊರತರುವುದು ಮತ್ತು ಕೃತಕ ಉಸಿರಾಟವನ್ನು ಮಾಡಿ ಉಳಿಸುವುದು (CPR)
6. ಹತ್ತಿರದ ಆರೋಗ್ಯ ಕೇಂದ್ರ / ಪ್ರಥಮ ಚಿಕಿತ್ಸಾ ಕೇಂದ್ರ / ಆಸ್ಪತ್ರೆಯಲ್ಲಿ 3 ತಿಂಗಳು ಸೇವೆ ಮಾಡಿ ಪರೀಕ್ಷಕರಿಗೆ ವರದಿಯನ್ನು ಸಲ್ಲಿಸುವುದು.

26. ಮೊದಲ ಗಂಟು (First Knot)

1. ಹಗ್ಗಗಳ ವಿಧ ಮತ್ತು ಅವುಗಳ ಭಾಗಗಳನ್ನು ಅರಿಯುವುದು.
2. ಮಲುಕ (Hitch), ಬಾಗು/ತಿರುವು (Bend), ಬೈಟ್ (Bight), ತಡೆಗಂಟು (Stopper Knot) ಇವುಗಳನ್ನು ತಿಳಿಯುವುದು.
3. JIM ಬಗ್ಗೆ ತಿಳಿಯುವುದು.
4. ಅಗ್ರಗಾಮಿ ಪದಕ (Pioneer Badge)ವನ್ನು ಪಡೆಯುವುದು.
5. ಈ ಕೆಳಗಿನ ಗಂಟುಗಳನ್ನು ಹಾಕಲು ಮತ್ತು ಅದರ ಉಪಯೋಗಗಳನ್ನು ಅರಿತಿರಬೇಕು.

ಅ) ದ್ವಿಗುಣ ಮೂಲೆಗಂಟು (Double Sheet Bend)
ಆ) ಬಿಗಿ ಹುರಿ ಮಲುಕ (Tautline Hitch)
ಇ) ಎಡಗೈ ಮೂಲೆಗಂಟು (Left Handed Sheet Bend)
ಈ) ಕಳ್ಳರ ಗಂಟು (Thief Knot)
ಉ) ಮೇಲುಗೈ ಗಂಟು (Over Hand Knot)
ಊ) ಸವಾಯ್ ಗಂಟು (Sawoy Knot)
ಋ) ಜಲಗಾರನ ಗಂಟು (Watermans Knot)
ೠ) ಲಾರ್ಕ್‌ನ ತಲೆ (ಭಾರಧ್ವಾಜದ ತಲೆ)

27. ಅರಣ್ಯಾಧಿಕಾರಿ (Forester)

1. ಅರಣ್ಯ, ಅದರ ಬೆಳವಣಿಗೆ ಮತ್ತು ಜೀವನ ಚಕ್ರದ ಮೇಲೆ ಅರಣ್ಯದ ಪ್ರಭಾವದ ಬಗ್ಗೆ ಜ್ಞಾನ.

2. ಒಂದು ಮರವನ್ನು ಅದರ ಎಲೆಗಳು, ಕಾಂಡ ಮತ್ತು ಮರದ ಆಕಾರದಿಂದ ಗುರುತಿಸುವುದು.
3. ಕನಿಷ್ಠ 50 ಮರಗಳ ಉಪಯೋಗ ವನ್ನು ಪಟ್ಟಿ ಮಾಡುವುದು.
4. ಕಾಡಿನ ನಾಶ / ವನಗಳ ಧ್ವಂಸ ಹಾಗೂ ಅದರ ಹಾನಿಕರ ಫಲಿತಾಂಶ (Effects)ಗಳ ಬಗ್ಗೆ ಜನರಿಗೆ ತಿಳಿಸುವುದು.
5. ಮರದ ಬದಲು ಬೇರೆ ಇಂಧನಗಳ ಪಟ್ಟಿ ತಯಾರಿಸುವುದು.
6. **ಹಸಿರು ಮನೆಯ ಪರಿಣಾಮ:** Green House Effectನ್ನು ವಿವರಿಸುವುದು.
7. ಕಾಡಿನ ವಿಧಗಳನ್ನು ಗುರುತಿಸಿ ಪಟ್ಟಿ ಮಾಡುವುದು.
8. ವಿವೇಚನೆಯಿಂದ / ನ್ಯಾಯುಬದ್ಧವಾಗಿ ಮರವನ್ನು ಉಪಯೋಗಿಸುವುದರ ಬಗ್ಗೆ ತಿಳಿಸುವುದು ಮತ್ತು ಶಿಬಿರಾಗ್ನಿಯ ಸಮಯದಲ್ಲಿ ಬದಲಿ ವಸ್ತುಗಳ ಬಗ್ಗೆ ತಿಳುವಳಿಕೆ ನೀಡುವುದು.
9. ವಿಶ್ವವನ ದಿನಾಚರಣೆ ಹಾಗು ವನಮಹೋತ್ಸವವನ್ನು ಆಚರಿಸಿ, ಕನಿಷ್ಠ 20 ಗಿಡಗಳನ್ನಾದರೂ ನೆಡುವುದು.

28. ನನ್ನ ಮುಕ್ತ ಇರುವಿಕೆ (Free Being Me)

1. FBMನ ಭಾವನೆ / ಕಲ್ಪನೆಯುನ್ನು ಅರ್ಥಮಾಡಿಕೊಳ್ಳುವುದು.
2. FBMನ "Peer Educator Workshop" ನಲ್ಲಿ ತರಬೇತಿ ಹೊಂದುವುದು.

3. ಕನಿಷ್ಠ 50 ಗೈಡ್‌ಗಳಿಗೆ FBM ಪದಕ ವನ್ನು ಗಳಿಸಲು ಸಹಾಯ ಮಾಡು ವುದು.
4. ಕನಿಷ್ಠ 20 ಗೈಡ್‌ಗಳನ್ನು ಶಾಂತಿದೂತ (Messanger of Peace) ಕಾರ್ಯಕ್ರಮದಲ್ಲಿ ನೋಂದಣಿ ಮಾಡಿಸುವುದು.
5. ಶಾಂತಿದೂತ ತಾಣ (Mop Site)ದಲ್ಲಿ ಕನಿಷ್ಠ 200 ಗಂಟೆಗಳ ಸೇವೆಯನ್ನು ಅಳವಡಿಸುವುದು.

29. ಅಂಗ ಸಾಧಕಿ (Gymnast)

ತರಬೇತಿ ಹೊಂದಿದ ಅಂಗಸಾಧಕರ ಮಾರ್ಗದರ್ಶನವಿಲ್ಲದೆ ಈ ಪದಕಕ್ಕೆ ತಯಾರಿ ನಡೆಸಬಾರದು.

i) ನೆಟ್ಟಗೆ ನಿಲ್ಲುವುದು, ನಡೆಯುವುದು ಮತ್ತು ಓಡುವುದು.

ii) ಅಂಗಸಾಧನೆಯ ತರಗತಿಗಳಲ್ಲಿ ಶಾಲೆ ಅಥವಾ ಯಾವುದಾದರೂ ಅಧಿಕೃತ ಕೇಂದ್ರದಲ್ಲಿ ವಾರಕ್ಕೊಮ್ಮೆಯಾದರೂ ತ.ರಬೇತಿ ಪಡೆಯುವುದು.

iii) ಮುಕ್ತವಾಗಿ ನಿಂತು ಮಾಡುವ ವ್ಯಾಯಾಮಗಳನ್ನು ಪರೀಕ್ಷಕರ ಅನುಮತಿಯ ಮೇರೆಗೆ ಮಾಡುವುದು.

iv) ಕೆಳಗಿನ ವ್ಯಾಯಾಮಗಳನ್ನು ಒಳ್ಳೆಯ ಭಂಗಿಯಲ್ಲಿ ಸಮತೋಲನ ಪಟ್ಟಿಯ ಕಿರಿದಾದ ಭಾಗದಲ್ಲಿ ನಿಂತು ಮಾಡುವುದು.

ಅ) ಹೆಜ್ಜೆ ಹೆಜ್ಜೆಗೂ ಚೆಂಡನ್ನು ಎಸೆಯುತ್ತಾ, ಹಿಡಿಯುತ್ತಾ ಮುಂದೆ ನಡೆಯುವುದು.

ಆ) ಆಧಾರವಿಲ್ಲದೆ ಅಡ್ಡಡ್ಡಲಾಗಿ ನಡೆಯುವುದು.

ಇ) ತೋಳುಗಳನ್ನು ಎತ್ತಿ ಬಲಗಾಲನ್ನು ಪಕ್ಕಕ್ಕೆ ಚಾಚಿ ನಿಲ್ಲುವುದು, ಸಮಸ್ಥಿತಿಗೆ ಬರುವುದು, ನಂತರ ಒಂದು ಹೆಜ್ಜೆ ಮುಂದಿಟ್ಟು ತೋಳುಗಳನ್ನು ಎತ್ತಿ ಎಡಗಾಲನ್ನು ಚಾಚಿ ಸಮಸ್ಥಿತಿಯಲ್ಲಿ ನಿಲ್ಲುವುದು.

ಈ) ಮೊಣಕಾಲನ್ನು ಪೂರ್ಣವಾಗಿ ಬಗ್ಗಿಸಿ ನಡೆಯುವುದು ಪ್ರತಿ ಮೂರನೇ ಹೆಜ್ಜೆಗೆ ಹಿಗ್ಗಿಸುವುದು.

v. ಈ ಕೆಳಗಿನ ಯಾವುದಾದರೊಂದು (ಅ) ಅಥವಾ (ಆ)ನಲ್ಲಿರುವ ವ್ಯಾಯಾಮಗಳನ್ನು ಮಾಡುವುದು.

ಅ) ಒಂದು ಹಗ್ಗದ ಮೇಲೆ 5 ಮೀಟರ್ ಹತ್ತುವುದು. ಪಟ್ಟಿಯ ಮೇಲೆ ಪಕ್ಕಕ್ಕೆ ಅಥವಾ ಗೋಡೆಪಟ್ಟಿಯ (Wall Bar) ಮೇಲೆ, ಎರಡೂ ದಿಕ್ಕಿನಲ್ಲಿ ನಡೆಯುವುದು.

ಅಥವಾ

ಆ ಪಟ್ಟಿಯ ಮೇಲೆ ಹಿಮ್ಮುಖವಾಗಿ ನಡೆಯುವುದು.

ಆ) ಹಸ್ತ ಆನಿಸಿ ಆಧಾರವಿಲ್ಲದೆ ಪಟ್ಟಿಯ ಮೇಲೆ ನಿಲ್ಲುವುದು **ಅಥವಾ** ಸುಧಾರಿತ ಸಲಕರಣೆಯ ಮೇಲೆ ಅಥವಾ ಕೆಳಗೆ ಲಾಗ ಹಾಕಿ ನಿಲ್ಲುವುದು **ಅಥವಾ** ಎರಡು ಹಗ್ಗಗಳ ಮಧ್ಯೆ ತಲೆಕೆಳಗಾಗಿ ತೂಗು ಬೀಳುವುದು.

30. ಕೇಶ ವಿನ್ಯಾಸಕಿ (Hair Dresser)

1. ಕೂದಲು ಕತ್ತರಿಸುವುದರ ಬಗ್ಗೆ ಅರಿವು ಮತ್ತು ಕತ್ತರಿಸಲು ಗೊತ್ತಿರಬೇಕು.
2. ಕೆಲಸದ ಜವಾಬ್ದಾರಿಯನ್ನು ತಿಳಿದಿರಬೇಕು. ಹತ್ತಿರದ ಪಾರ್ಲರ್‌ಗೆ ಭೇಟಿ ನೀಡಿ ಕೇಶಕ್ಕೆ ಚಿಕಿತ್ಸಾಕ್ರಮ, ತಿಕ್ಕುವುದು (Massage), ಬಣ್ಣ ಹಾಕುವಿಕೆ, ಬೇರೆ ಬೇರೆ ರೀತಿಯ ಕೇಶಕ್ಕೆ ಸರಿ ಹೊಂದುವ ಷಾಂಪೂ ಬಳಕೆಯ ಬಗ್ಗೆ ತಿಳಿಯುವುದು.
3. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕೇಶವಿನ್ಯಾಸವನ್ನು ಬದಲಿಸಿ ಪರೀಕ್ಷಕರಿಗೆ ವರದಿ ಸಲ್ಲಿಸುವುದು.
4. ಕೂದಲಿಗೆ ಬಣ್ಣ ಹಚ್ಚುವುದನ್ನು ಕಲಿತು, ಕನಿಷ್ಠ ಇಬ್ಬರಿಗೆ ಹಾಕುವುದು.

31. ಪರಂಪರೆ (Heritage)

ರೇಂಜರ್ ತನಗೆ ತಿಳಿದಿರುವ ಈ ಕೆಳಗಿನ ಮಾಹಿತಿಗಳನ್ನು ಸಂಗ್ರಹಿಸಿ ಒಂದು ಸಂಪನ್ಮೂಲ ಪುಸ್ತಕವನ್ನು (Log Book) ತಯಾರಿಸುವುದು.



i) ಭಾರತದ ಭೌತ ಪರಿಸ್ಥಿತಿಯಲ್ಲಿ (ಪ್ರಸಿದ್ಧ ಪರ್ವತಗಳು, ನದಿಗಳು ಇತ್ಯಾದಿ) ಸಾಮಾನ್ಯ ಮರಗಿಡಗಳು ಮತ್ತು ಅದರ ಉಪಯೋಗ, ಸಾಮಾನ್ಯ ಪಕ್ಷಿಗಳು, ಪ್ರಾದೇಶಿಕ ಅಪರೂಪದ ಸಸ್ಯ ಮತ್ತು ಪ್ರಾಣಿಗಳು ಋತುಗಳು ಮತ್ತು ಹಬ್ಬಗಳು ಅವುಗಳ ಅರ್ಥ ಮತ್ತು ಮಹತ್ವ, ಅವರ ಕುಟುಂಬ

ಮತ್ತು ಹಬ್ಬಗಳು, ಸಂಪ್ರದಾಯ ಸಂಬಂಧಿಸಿದ ಹಬ್ಬಗಳು, ಋತುಗಳು, ಸ್ಥಳೀಯ ಭಾಷೆಗಳು ಮತ್ತು ಹಾಡುಗಳು.

ii) ಭಾರತೀಯು ಸಂಸ್ಕೃತಿ ಪರಂಪರೆ, ಕಲೆ ಸಾಹಿತ್ಯದ ಮೂಲಭೂತಜ್ಞಾನ.

iii) ಭಾರತ ಹಾಗೂ ವಿಶ್ವದ ಶಿಲ್ಪವಿನ್ಯಾಸಗಳು, ನಾಟಕ ಪ್ರಕಾರಗಳು, ಸಾಹಿತ್ಯ, ನೃತ್ಯ, ಪೂಜಾಕೇಂದ್ರಗಳು, ಸಾಹಿತ್ಯ ಪ್ರಸಿದ್ಧ ಸಾಹಿತಿಗಳು ಮತ್ತು ಕವಿಗಳು.

iv) ಪ್ರಾಯೋಗಿಕ ಚಟುವಟಿಕೆಗಳು (ಯಾವುದಾದರೂ ನಾಲ್ಕನ್ನು ಮಾಡುವುದು.)

ಅ) 5 ಜನರಿಗೆ ಭಾರತೀಯ ಕಲೆ ಸಾಹಿತ್ಯ, ಸಂಸ್ಕೃತಿ, ಧರ್ಮಗಳು, ಸಾಮಾಜಿಕ ಅಭಿವೃದ್ಧಿ ಕುರಿತು ಶಿಕ್ಷಣ ನೀಡಿ, ಹೊರದೇಶಗಳ ಮೇಲೆ ಇವುಗಳ ಪ್ರಭಾವದ ಬಗ್ಗೆ ತಿಳಿಸುವುದು.

ಆ) ಕಲೆ, ಪ್ರಾಚ್ಯವಸ್ತು ಹಾಗೂ ಅವಶೇಷಗಳ ಸಂರಕ್ಷಣೆ, ಪುರಾತನ ಸ್ಮಾರಕಗಳ ಸಂರಕ್ಷಣೆಗಾಗಿ ಸರ್ಕಾರ/ಸರ್ಕಾರೇತರ ಸಂಘಟನೆಗಳು ಕೈಗೊಂಡಿರುವ ಪುನರುಜ್ಜೀವನ ಹಾಗೂ ಸಂರಕ್ಷಣಾ ಕ್ರಮಗಳನ್ನು ತಿಳಿದು, ಒಂದು ಸಂಕ್ಷಿಪ್ತ ವರದಿಯನ್ನು ತಯಾರಿಸುವುದು.

ಇ) ಸಂಸ್ಕೃತಿ ಪರಂಪರೆ ಕುರಿತು ರಸಪ್ರಶ್ನೆ / ವಸ್ತುಪ್ರದರ್ಶನ / ಸ್ಪರ್ಧೆ ಯಾವುದಾದರೂ ಒಂದನ್ನು ಏರ್ಪಡಿಸುವುದು.

ಈ) ಭಾರತದಲ್ಲಿ ವನ್ಯಮೃಗಗಳು ಆಕ್ರಮಿಸಿರುವ ಪ್ರಮುಖ ಪ್ರದೇಶಗಳನ್ನು ಗುರುತಿಸಿ, ಈ ಬಗ್ಗೆ ಒಂದು ಪ್ರಬಂಧವನ್ನು ರಚಿಸುವುದು.

ಉ) ಪ್ರಾಚ್ಯವಸ್ತು/ಪ್ರದೇಶ ಸ್ಮಾರಕಗಳನ್ನು ದತ್ತಿ ತೆಗೆದುಕೊಂಡು 2 ತಿಂಗಳ ಕಾಲ ಸಂರಕ್ಷಿಸಿ ವರದಿ ಸಲ್ಲಿಸುವುದು.

ಊ) ಪುರಾತನ ಸ್ಮಾರಕ ಅಥವಾ ಪ್ರಾಚ್ಯವಸ್ತು ಪ್ರದೇಶವನ್ನು ಅಧ್ಯಯನ ಮಾಡಿ ಮಾರ್ಗದರ್ಶಿಯಾಗಿ ಸೇವೆ ಸಲ್ಲಿಸುವುದು. ಕನಿಷ್ಠ ಒಂದು ಬಾರಿಯಾದರೂ ಇಂತಹ ಸ್ಥಳಗಳಿಗೆ ಸ್ಥಳೀಯ ಶಾಲಾ ಅಥವಾ ಸಮುದಾಯ ತಂಡವನ್ನು ಕರೆದುಕೊಂಡು ಹೋಗಿ ವಿವರಣೆ ನೀಡುವುದು.

32. ಅತಿಥೇಯಳು (Hostess)

1. ಅತಿಥಿಗಳನ್ನು ನಗುಮುಖದೊಂದಿಗೆ ಸ್ವಾಗತಿಸಿ ಅತಿಥಿ ಸತ್ಕಾರ ಮಾಡಲು ತಿಳಿದಿರಬೇಕು.
2. ಧ್ವನಿಯನ್ನು ಸಂತೋಷ / ತೃಪ್ತಿಕರ ಧ್ವನಿಯಾಗಿ ಬದಲಾಯಿಸಲು ತಿಳಿದಿರಬೇಕು.

3. ಅತಿಥಿ ಸತ್ಕಾರ ವಿಧಿಗಳನ್ನು ಅರಿತು, ತನ್ನ ರಾಜ್ಯವನ್ನು ಹೊರತುಪಡಿಸಿ, ಕನಿಷ್ಠ ಬೇರೆ ಮೂರು ಪ್ರದೇಶಗಳ ಅತಿಥಿ ಸತ್ಕಾರ ವಿಧಿಯ ಬಗ್ಗೆ ತಿಳಿದಿರಬೇಕು.
4. ತನ್ನ ಪ್ರದೇಶದ ಸಾಂಸ್ಕೃತಿಕ ಸ್ವಾಗತ ಮತ್ತು ಸತ್ಕಾರದ ಬಗ್ಗೆ ಒಂದು ಭಾಷಣವನ್ನು ತಯಾರಿಸುವುದು.
5. ಅಡಿಗೆ ಸಿದ್ಧತೆಯನ್ನು ಪ್ರಕಟಿಸುವುದು ಮತ್ತು ಊಟವನ್ನು ಅತಿಥಿಗಳಿಗೆ ಬಡಿಸುವ ವಿಧಾನ ತಿಳಿದಿರಬೇಕು.

6. ಜಿಲ್ಲಾ / ರಾಜ್ಯ / ರಾಷ್ಟ್ರ ಮಟ್ಟದ ಸೇವಾ ಶಿಬಿರಗಳಲ್ಲಿ ಕನಿಷ್ಠ ಮೂರು ದಿನವಾದರೂ "ಸ್ವಾಗತ ಸಮಿತಿ"ಯಲ್ಲಿ ಸೇವೆ ಸಲ್ಲಿಸುವುದು.

33. **ಮಾಹಿತಿ ತಂತ್ರಜ್ಞಾನ (Information Technology)**

1. Operating Systemಗಳ ಕಾರ್ಯ ನಿರ್ವಹಣೆಯ ಬಗ್ಗೆ ಸಾಮಾನ್ಯ ಜ್ಞಾನ.
2. ಮಾಹಿತಿ ಸಂಗ್ರಹಣೆ (Data Storage) ಮತ್ತು ಅದರ ವರ್ಗೀಕರಣ.

3. Photoshop ಮತ್ತು Coraldraw Software ಕಾರ್ಯರೂಪಕ್ಕೆ ತರುವ ಜ್ಞಾನ.
4. Data Base ನ ಕಾರ್ಯದ ಬಗ್ಗೆ ತಿಳಿಯುವುದು.
5. 10 ಜಾಲತಾಣಗಳ ಬಗ್ಗೆ ಮತ್ತು ಅದರ ಉಪಯೋಗದ ಬಗ್ಗೆ ಅರಿವು.
6. ದಳದ ಸದಸ್ಯರನ್ನು ಅವರದೇ ಆದ ಅಂತರ್ಜಾಲ ವಿಳಾಸವನ್ನು ಹೊಂದಿ ಅದರ ಮೂಲಕ ಪತ್ರವನ್ನು ರಚಿಸಲು ಮನದಟ್ಟು ಮಾಡುವುದು.
7. ದೂರ ಸಂಪರ್ಕವನ್ನು ಉದಾಹರಣೆಗಳೊಂದಿಗೆ ವಿವರಿಸುವುದು.
8. ಇತ್ತೀಚಿನ Operating System ಅನ್ನು Microsoft ತಂತ್ರಜ್ಞಾನದ ಮೂಲಕ ವಿವರಿಸುವುದು.

9. ಅಂತರ್ಜಾಲದ ಉಪಯೋಗವನ್ನು ತೋರಿಸಿ ಅದರ ಪ್ರಾಮುಖ್ಯತೆಯನ್ನು ತಿಳಿಸುವುದು.

10. Internet ನ Protocol (ಅಂತರ್ಜಾಲದ ವಿಧಿ ವಿಧಾನ) ಗಳನ್ನು ಪಟ್ಟಿಮಾಡಿ, ದಿನಚರಿಯನ್ನು ಪರೀಕ್ಷಕರಿಗೆ ಸಲ್ಲಿಸುವುದು.

34. ಪತ್ರಿಕೋದ್ಯಮಿ (Journalist)

1) ದಳ/ಸ್ಥಳೀಯ/ಜಿಲ್ಲೆಯ ಚಟುವಟಿಕೆಗಳ ಬಗ್ಗೆ ತಾನೇ ಬರೆದ ಎರಡು ಪುಟಗಳ ವರದಿಯನ್ನು ತಯಾರಿಸುವುದು.

2) ಈ ಕೆಳಗಿನ ಒಂದು ವಿಷಯದ ಬಗ್ಗೆ ವರದಿಯನ್ನು ತಯಾರಿಸುವುದು: ಪಾಠ (ಉಪನ್ಯಾಸ)/ ಭಾಷಣ, ಚರ್ಚೆ/ ಸವಾಂದ/ ಔತಣಕೂಟ/ ಮೇಳ.

3) ಆರು ಸನ್ನಿವೇಶಗಳಲ್ಲಿ ಬರಹಗಾರನಾಗಿ ಸೇವೆ ಸಲ್ಲಿಸುವುದು.

4) ಯಾವುದಾದರೂ ಭಾಷಣ ಅಥವಾ ವರದಿಯನ್ನು ತಿದ್ದಿ, (ಪ್ರಕಟಣೆಗೆ ಸಿದ್ಧಪಡಿಸು) ಪರೀಕ್ಷಕರು ಒಪ್ಪುವಂತೆ ಮಂಡಿಸುವುದು.

5) ಪತ್ರಿಕೆ ಅಥವಾ ಸಾಹಿತ್ಯಕ ಪುರವಣಿಯ ಪತ್ರಿಕಾ ಸಂಪಾದಕ ಮಂಡಳಿಯಲ್ಲಿ ಕನಿಷ್ಠ ಆರು ತಿಂಗಳು ಕಾರ್ಯ ನಿರ್ವಹಿಸಿರಬೇಕು.

6) ಮುದ್ರಣಕಾರರ ತಿದ್ದುಪಡಿ ಚಿಹ್ನೆಗಳನ್ನು ತಿಳಿದುಕೊಂಡು, ಕನಿಷ್ಠ ಒಂದು ಪುಸ್ತಕ ಅಥವಾ ಪತ್ರಿಕೆಯ ತಿದ್ದುಪಡಿ ಮಾಡಿ ಪರೀಕ್ಷಕರಿಗೆ ತೋರಿಸುವುದು.

7. ಯಾವುದಾದರೂ ಮುಖ್ಯ ಘಟನೆಯ ಪತ್ರಿಕಾ ಸಂದರ್ಶನವನ್ನು () ಸಿದ್ಧಪಡಿಸಿ ಅದನ್ನು ವೃತ್ತಪತ್ರಿಕೆಯಲ್ಲಿ ಪ್ರಕಟಿಸುವುದು.

35. ಸಾಕ್ಷರತೆ (Literacy)

1. ವಯಸ್ಕರ ಸಾಕ್ಷರತಾ ಆಂದೋಲನವನ್ನು ನಿಮ್ಮ ಗ್ರಾಮ/ ಬಡಾವಣೆಯಲ್ಲಿ ಏರ್ಪಡಿಸುವುದು.
2. ನಿಮ್ಮ ಬಡಾವಣೆ /ಗ್ರಾಮದಲ್ಲಿ ಸಮೀಕ್ಷೆ ನಡೆಸಿ (Survey), ತಂದೆತಾಯಿಗಳನ್ನು ಪ್ರೇರೇಪಿಸಿ ಅಲ್ಲಿ ಶಿಕ್ಷಣ ಪಡೆಯದ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸಲು ಹುರಿದುಂಬಿಸುವುದು. ಎಲ್ಲ ಹೆಣ್ಣುಮಕ್ಕಳೂ ಶಾಲೆಗೆ ಹೋಗುವಂತೆ ನೋಡಿಕೊಳ್ಳುವುದು. ಅಲ್ಲಿ ಶಿಕ್ಷಣ ಪಡೆಯದ ಒಂದು ಹೆಣ್ಣುಮಗುವೂ ಇಲ್ಲದಂತೆ ಖಚಿತಪಡಿಸಿಕೊಳ್ಳುವುದು.
3. ವಯಸ್ಕರಿಗೆ / ಶಾಲೆ ಬಿಟ್ಟವರಿಗೆ / ಹೆಣ್ಣುಮಕ್ಕಳಿಗೆ ರಾತ್ರಿ ಶಾಲೆಯನ್ನು ಪ್ರಾರಂಭಿಸಲು ಸಹಾಯ ಮಾಡುವುದು / ಶಾಲೆಯನ್ನು ತೆರೆಯುವುದು.
4. ಹತ್ತು ಅನಕ್ಷರಸ್ಥ ವಯಸ್ಕರಿಗೆ 3R (ರೀಡಿಂಗ್, ರೈಟಿಂಗ್, ಅರಿತ್‌ಮಿಟಿಕ್), ಓದುವುದು, ಬರೆಯುವುದು ಮತ್ತು ಸರಳ ಗಣಿತವನ್ನು ಕಲಿಸುವುದು ಅಥವಾ 10 ಮಕ್ಕಳಿಗೆ ಅವರ ಶಿಕ್ಷಣದಲ್ಲಿ ಸಹಾಯ ಮಾಡುವುದು.
5. ವಯಸ್ಕರ ಶಿಕ್ಷಣ ಮತ್ತು ಹೆಣ್ಣುಮಕ್ಕಳ ಶಿಕ್ಷಣ ಅಭಿಯಾನಕ್ಕಾಗಿ 10 ಭಿತ್ತಿಚಿತ್ರಗಳನ್ನು ತಯಾರಿಸುವುದು.

6. ಸರ್ಕಾರಿ ಮತ್ತು ಇತರೆ ಸಂಸ್ಥೆಗಳು ತಯಾರಿಸಿರುವ ಭಿತ್ತಿಚಿತ್ರಗಳ ವಸ್ತುಪ್ರದರ್ಶನವನ್ನು ಏರ್ಪಡಿಸುವುದು.
7. ಇದರ ಬಗ್ಗೆ ಅರಿವು ಮೂಡಿಸಲು ನಿಮ್ಮ ಬಡಾವಣೆಯಲ್ಲಿ; ಜನಜಾಗೃತಿಗಾಗಿ ಬೀದಿನಾಟಕವನ್ನು / ಕಿರುನಾಟಕವನ್ನು ಏರ್ಪಡಿಸುವುದು.

36. ರೂಪದರ್ಶಿ (Modelling)



1. ರೂಪದರ್ಶಿಯಾಗಿರಲು ಸ್ವಚ್ಛ / ನಿರ್ಮಲ ಮತ್ತು ಹೊಳಪಿನ ಚರ್ಮ / ತ್ವಚೆ, ಹೊಳೆಯುತ್ತಿರುವ ಮತ್ತು ಆರೋಗ್ಯ ಕೂದಲು ಬಹಳ ಮುಖ್ಯ. ಒಳ್ಳೆಯ ಆರೋಗ್ಯ (Fitness) ಸಹ ಮುಖ್ಯ. ಇವೆಲ್ಲಕ್ಕೂ ಗಮನ ಕೊಡಬೇಕು.
2. ಯಾವ ರೀತಿಯ ರೂಪದರ್ಶಿ ಆಗಬೇಕು ಎಂಬುದನ್ನು ನಿರ್ಧರಿಸಬೇಕು.
3. ರೂಪದರ್ಶಿ ಸಂಸ್ಥೆ / ಸ್ಟುಡಿಯೋಗೆ ಭೇಟಿ ನೀಡಿ (2 ವಾರಗಳ ಕಾಲ), ಕೆಲವು ಛಾಯಾಚಿತ್ರ (Snap Shot)ಗಳನ್ನು ತೆಗೆದುಕೊಳ್ಳುವುದು.
4. ವೃತ್ತಿಪರ, ಸಭ್ಯ ಮತ್ತು ವಿನಯಶೀಲಳಾಗಿರಬೇಕು.
5. ಛಾಯಾಗ್ರಾಹಕರನ್ನು ಸಂಪರ್ಕಿಸಿ, ರೂಪದರ್ಶಿಯಾಗುವುದನ್ನು ಒಂದು ವೃತ್ತಿಯಾಗಿ ನಿರ್ಧರಿಸಿ ಕನಿಷ್ಠ ನೂರು ಛಾಯಾಚಿತ್ರಗಳ ನಿಮ್ಮ Profile ತಯಾರಿಸುವುದು.

6. ಸ್ಥಳೀಯವಾಗಿ ಮತ್ತು ನಿಮ್ಮ ಕಾಲೇಜಿನಲ್ಲಿ ರೂಪದರ್ಶಿ ಸ್ಪರ್ಧೆ ಹಾಗೂ ಸೌಂದರ್ಯ ಸ್ಪರ್ಧೆ (Fashion Show) ಏರ್ಪಡಿಸಿ ಭಾಗವಹಿಸುವುದು.

37. ವಾಹನ ತಂತ್ರಜ್ಞ (Motor Mechanic)

1. Internal Combusion Engineನ ಭಾಗಗಳನ್ನು ಅರಿತು, ಎಲ್ಲ ಮುಖ್ಯ ಭಾಗಗಳ ಹೆಸರು ಮತ್ತು ಕಾರ್ಯ ವನ್ನು ತಿಳಿಯುವುದು.

2. ಈ ಕೆಳಗಿನವುಗಳನ್ನು ಮಾಡುವ ಸಾಮರ್ಥ್ಯ ತೋರಿಸಬೇಕು.

i) ಛಾಸಿಯ ನಿರ್ದಿಷ್ಟ ಭಾಗಗಳಿಗೆ ಜಿಡ್ಡು (Grease) ಮತ್ತು ಎಣ್ಣೆಯನ್ನು ಬಳಿಯಲು, ಉಪಕರಣಗಳ ಪೆಟ್ಟಿಗೆ (Tool Box) ಮತ್ತು ಹಿಂದಿನ ಗಾಲಿಯ ಅಚ್ಚು (Back Axle)ನಲ್ಲಿ ಎಣ್ಣೆಯ ಮಟ್ಟ ನೋಡಲು.

ii) Battery ಶಕ್ತಿಯನ್ನು ಅಧಿಕಗೊಳಿಸಲು

iii) Breakಗಳನ್ನು ಹೊಂದಿಸಲು

iv) ಕಾರಿನ ಚಕ್ರವನ್ನು ಬದಲಾಯಿಸಲು

v) Ignition ಗೆ ತೆಗೆದುಕೊಳ್ಳುವ ಕಾಲವನ್ನು ಪರೀಕ್ಷಿಸಲು, Spark Plug ಅನ್ನು ಶುದ್ಧ ಮಾಡಿ ಪರೀಕ್ಷಿಸಲು

vi) ಕಾರ್ಬೊರೇಟರ್ ಅನ್ನು ಬಿಚ್ಚಿ, ಶುದ್ಧ ಮಾಡಿ ಮತ್ತೆ ಜೋಡಿಸಿ ಸರಿಮಾಡುವುದು.

3. ಒಂದು ಲೀಟರ್ ಪೆಟ್ರೋಲ್‌ಗೆ ಎಷ್ಟು ಕಿ.ಮೀ. ಓಡಿಸಬಹುದೆಂದು ತೋರಿಸಲು.

4. ಕಾರ್ ಚಲಿಸಲಾಗದಿದ್ದಾಗ ಸರಿಯಾಗಿ ಪರೀಕ್ಷಿಸಿ ದೋಷವನ್ನು ಕಂಡುಹಿಡಿಯುವುದು.

5. ಮೋಟರ್ ಚಾಲನಾ ಅನುಮತಿ ಪಡೆದು ಕಾರನ್ನು 50 ಕಿ.ಮೀ. ಓಡಿಸಬೇಕು.

38. ವ್ಯಕ್ತಿತ್ವ ವಿಕಾಸ (Personality Development)

1. ಸಭ್ಯ ವರ್ತನೆ, ಕೌಶಲ್ಯ, ತಾಳ್ಮೆ, ಪಟ್ಟು ಹಿಡಿದು ಕೆಲಸ ಮಾಡುವ ಮತ್ತು ನಂಬಿಕೆ ಇವುಗಳನ್ನು ಬೆಳೆಸಿಕೊಳ್ಳಬೇಕು.

2. ವ್ಯಕ್ತಿತ್ವ ವಿಕಾಸಕ್ಕೆ ಬೇಕಾದ ವಿಷಯಗಳನ್ನು ಅರಿತು, ಅವುಗಳಲ್ಲಿ ಪ್ರಗತಿ ತೋರಿಸುವುದು.

3. ಒಳ್ಳೆಯ ಸಂವಹನ ಕಲೆ (Communication Skill) ಗೊತ್ತಿರಬೇಕು.

4. ದಳದ 5 ಸದಸ್ಯರ ವ್ಯಕ್ತಿತ್ವ ವಿಕಾಸದಲ್ಲಿ ಸಹಾಯ ಮಾಡುವುದು.

39. ಛಾಯಾಗ್ರಾಹಕಿ (Photographer)

1. 8 ಬೇರೆ ಬೇರೆ ವಿಷಯಗಳ ಛಾಯಾಚಿತ್ರ, 2 ಒಳಾಂಗಣ, 2 ಭೂದೃಶ್ಯ ಮತ್ತು ಸಮಯ ಸ್ಫೂರ್ತಿ ಛಾಯಾಚಿತ್ರಗಳನ್ನು ತೆಗೆದು ಮುದ್ರಿಸಬೇಕು.

2. ಛಾಯಾಗ್ರಹಣದ ಮಸೂರ (Lens)ದ ಬಳಕೆ, ಡಿಜಿಟಲ್ ಕ್ಯಾಮರಾದ ರಚನೆ ಮತ್ತು ಫೋಟೋಗಳನ್ನು ತಯಾರಿಸಲು ಗೊತ್ತಿರಬೇಕು.

3. ಪ್ರಾಕೃತಿಕ ದೃಶ್ಯಗಳು ಮತ್ತು ರೇಂಜರ್ ಚಟುವಟಿಕೆಗಳ ಛಾಯಾಚಿತ್ರಗಳನ್ನು ತೆಗೆದು ಅದರ ಮೃದು ಅಥವಾ ಗಡಸು (Soft / Hard) ಪ್ರತಿಗಳ ಪುಸ್ತಕವನ್ನು ತಯಾರಿಸುವುದು.

4. ಜಿಲ್ಲಾ / ರಾಜ್ಯ / ರಾಷ್ಟ್ರೀಯ ಸ್ಕೌಟ್– ಗೈಡ್ ಘಟನೆ (Event)ಗಳ ಛಾಯಾಗ್ರಾಹಕರಾಗುವುದು.

40. ಮಾಲಿನ್ಯ ನಿಯಂತ್ರಣ (Pollution Control)

1. ವಿವಿಧ ಮಾಲಿನ್ಯಗಳ ಬಗ್ಗೆ ಅರಿವು ಮತ್ತು ಅವುಗಳ ನಿಯಂತ್ರಣ ವಿಧಾನಗಳು.

2. ಈ ವಿಷಯದ ಬಗ್ಗೆ ಕಾರ್ಯನಿರತರಾಗಿರುವ ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳು, ಜಾಗತಿಕ ಮಟ್ಟದಲ್ಲಿ ಮಾಲಿನ್ಯ ನಿಯಂತ್ರಣಕ್ಕಾಗಿ ಕೆಲಸ ಮಾಡುತ್ತಿರುವ ಮಾಧ್ಯಮಗಳ ಬಗ್ಗೆ ಅರಿವು.

3. ಪರಿಸರ ಮಾಲಿನ್ಯದ ಸಮಸ್ಯೆಗಳ ಬಗ್ಗೆ ಭಿತ್ತಿಚಿತ್ರ ಅಥವಾ 20 ಘೋಷಣೆಗಳ ತಯಾರಿಕೆ.

4. ನಿಮ್ಮ ಬಡಾವಣೆಯಲ್ಲಿ ಮಾಲಿನ್ಯ ನಿಯಂತ್ರಣದ ಬಗ್ಗೆ ಒಂದು ಅಭಿಯಾನದ ವ್ಯವಸ್ಥೆ.

5. ಮಾಲಿನ್ಯ ನಿಯಂತ್ರಣದ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸಲು ನಿಮ್ಮ ಬಡಾವಣೆಯಲ್ಲಿರುವ ಶಾಲೆಯಲ್ಲಿ ರಸಪ್ರಶ್ನೆಯನ್ನು ಆಯೋಜಿಸುವುದು.

41. ಜನಸಂಖ್ಯಾ ಶಿಕ್ಷಣ (Population Education)

i) ಜನತೆಗೆ ಈ ಬಗ್ಗೆ ಶಿಕ್ಷಣ ಕೊಡುವುದು.

ಅ) ಮಕ್ಕಳ ಹಕ್ಕು

ಆ) ಹೆಚ್ಚು ಮಕ್ಕಳಾದಾಗ ಉಂಟಾಗುವ ಪ್ರತಿಕೂಲ ಪರಿಣಾಮ

i) ಮಕ್ಕಳ ಮೇಲೆ

ii) ತಾಯಿಯ ಮೇಲೆ

iii) ಕುಟುಂಬದ ಮೇಲೆ iv) ಸಮುದಾಯದ ಮೇಲೆ

ಇ) ಜನಸಂಖ್ಯಾ ಸ್ಫೋಟದಿಂದ ಉಂಟಾಗಿರುವ ರಾಷ್ಟ್ರೀಯ ಸಮಸ್ಯೆಗಳು

ii) ಕುಟುಂಬ ಕಲ್ಯಾಣ ಕಾರ್ಯಕ್ರಮವನ್ನು ಸ್ವೀಕರಿಸಲು 5 ಜನರಿಗೆ ಪ್ರೇರಣೆ ನೀಡುವುದು.

iii) ಅವಶ್ಯಕತೆ ಇರುವ ಪ್ರದೇಶದಲ್ಲಿ ಕುಟುಂಬ ಯೋಜನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.

iv) ಈ ವಿಷಯ ಕುರಿತು UNO (ವಿಶ್ವ ಸಂಸ್ಥೆ) ಪ್ರಕಟಿಸಿರುವ ಭಿತ್ತಿಚಿತ್ರಗಳ ಪ್ರದರ್ಶನ ಮಾಡುವುದು.

42. ಭಾಷಣಗಾರ್ತಿ (Public Speaker)

1. ಭಾಷಣ ಮಾಡುವಾಗ ಗಮನದಲ್ಲಿಡ ಬೇಕಾದ ವಿಷಯುಗಳನ್ನು ಪಟ್ಟಿ ಮಾಡಬೇಕು ಮತ್ತು ಶ್ರೋತೃಗಳ ಮಟ್ಟ ತಿಳಿದಿರಬೇಕು.
2. ಈ ಕೆಳಗಿನ ಯಾವುದಾದರೂ 5 ವಿಷಯಗಳ ಬಗ್ಗೆ ಭಾಷಣ ತಯಾರು ಮಾಡುವುದು.

i) ಸಾಮಾಜಿಕ ಸಮಸ್ಯೆಗಳು (ವರದಕ್ಷಿಣೆ/ ಹೆಣ್ಣು ಭ್ರೂಣ ಹತ್ಯೆ / ಕೋಮುಗಲಭೆ).

ii) ಪರಿಸರದ ವಿಷಯಗಳು.

iii) ನಮ್ಮ ದೇಶ ಮತ್ತು ವಿಶ್ವದ ರಾಜಕೀಯ ವ್ಯಕ್ತಿಗಳು

iv) ಮಕ್ಕಳಿಗೆ ಸಂಬಂಧಿಸಿದ ವಿಷಯಗಳು (ಬಾಲ ಕಾರ್ಮಿಕರು, ಮಕ್ಕಳ ದುರುಪಯೋಗ, ಬಾಲ್ಯವಿವಾಹ)

v) ಭಾರತದ ಸಾಂಸ್ಕೃತಿಕ ವೈವಿಧ್ಯ

vi) ನಮ್ಮ ದೇಶದಲ್ಲಿ ಮಾಧ್ಯಮಗಳ ಪಾತ್ರ

vii) ಮತ ಸಹಿಷ್ಣತೆ

viii) ಜೀವನ ವೃತ್ತಿಯ ವಿಕಾಸ

3. ನಿಮ್ಮ ಇಷ್ಟದ ಶ್ರೋತೃಗಳಿಗೆ ವಿಷಯುದ ಮೇಲೆ 10 ನಿಮಿಷಗಳ ಭಾಷಣ ಮಾಡುವುದು.
4. ಪರೀಕ್ಷಕರು ಕೊಟ್ಟ ವಿಷಯದ ಮೇಲೆ ಒಂದು ಗುಂಪಿನ ಶ್ರೋತೃಗಳಿಗೆ 15 ನಿಮಿಷಗಳ ಭಾಷಣ.

43. ಅಲೆಮಾರಿ (Rambler)



1. ಗೈಡ್‌ಗಳಿಗೆ ಶಿಬಿರವಾಸಿ, ಆರೋಹಿ, ಪರಿಶೋಧಕಿ, ಹೊರ ಸಂಚಾರಿ, ಅಗ್ರಗಾಮಿ ಈ ಪ್ರಾವೀಣ್ಯತಾ ಪದಕ ಗಳಿಗೆ ತಯಾರಿ ನಡೆಸಲು ಕಲಿಸುವ ಸಾಮರ್ಥ್ಯವನ್ನು ಹೊಂದಿರಬೇಕು ಮತ್ತು ಕನಿಷ್ಠ ಒಬ್ಬ ಗೈಡ್‌ಳನ್ನಾದರೂ ಮೇಲಿನ ಒಂದಾದರೂ ಪ್ರಾವೀಣ್ಯತಾ ಪದಕ ಗಳಿಸಲು ತರಬೇತಿ ನೀಡಿರಬೇಕು.

2. ಪ್ರಥಮ ಚಿಕಿತ್ಸೆಯಲ್ಲಿ ಗೈಡ್‌ನ ಚರಚಿಕಿತ್ಸೆ ಪದಕಕ್ಕೆ ಅರ್ಹತೆ ಹೊಂದಿರಬೇಕು.

3. ನಡಿಗೆ / ತೆಪ್ಪ (ಕಯಾಕ್) ಅಥವಾ ದೋಣಿ (ಹಾಯುವ / ಹುಟ್ಟು ಹಾಕುವ) ದೋಣಿಯಲ್ಲಿ 161 ಕಿ.ಮೀ. ಅಥವಾ 100 ಮೈಲಿ ಅಥವಾ 300 ಕಿ.ಮೀ. ಸೈಕಲ್ ಪ್ರಯಾಣ– ರಾತ್ರಿಯಲ್ಲಿ ಊರ ಹೊರಗಡೆ ವಾಸ ಮಾಡುತ್ತಾ ಅಥವಾ ವಿಶ್ರಾಂತಿ / ರಜಾ ದಿನಗಳ ಹೊರಸಂಚಾರ 500 ಕಿ.ಮೀ. ಮೋಟರ್ ಸೈಕಲ್ ಮೇಲೆ, ಸರಿಯಾದ ಚಾಲನಾ ಅನುಮತಿ, ವಾಹನದ ದಾಖಲೆ ಪತ್ರಗಳೊಂದಿಗೆ ದಿನಚರಿ ಪುಸ್ತಕವನ್ನು ಪ್ರವಾಸ ಮುಗಿದ ನಂತರ ವರದಿ ಸಲ್ಲಿಸುವುದು.

   ಈ ದಿನಚರಿ ಪುಸ್ತಕದಲ್ಲಿ ಕ್ರಮಿಸಿದ ದೂರ, ದಿನಾಂಕ, ಸಮಯ, ವೀಕ್ಷಿಸಿದ ಸ್ಥಳಗಳು ಇತ್ಯಾದಿ ಮುಂದೆ ಹೋಗುವ ಹೊರ ಸಂಚಾರಿಗಳಿಗೆ ಸಹಾಯವಾಗುವಂತೆ ಪ್ರೇಕ್ಷಣೀಯ ಸ್ಥಳಗಳಿಗೆ ಅಲ್ಲಿ ಹೋಗುವ ಮಾರ್ಗ, ಬಿಡಾರ ಹೂಡಲು

ಸರಿಯಾದ ಸ್ಥಳ/ ಧರ್ಮಶಾಲೆ, ಮಾರ್ಗದಲ್ಲಿ ದಾರಿಯಲ್ಲಿ ಕಠಿಣವಾಗುವ ಸಮಯದಲ್ಲಿ ಸೂಚನೆಗಳು, ದೋಣಿಯಲ್ಲಿ ಹೋಗಬೇಕಿದ್ದರೆ ಅದರ ಬಗ್ಗೆ ಸೂಚನೆ, ಉಬ್ಬರ ಇಳಿತಗಳ ಬಗ್ಗೆ ಸಮಾಚಾರ, ಇತರೆ ಉಪಯುಕ್ತ ವಿಷಯಗಳು, ನಕ್ಷೆಗಳು, ಪ್ರಕೃತಿಯ ಬಗ್ಗೆ ವಿವರಗಳು ಎಲ್ಲವನ್ನೂ ಸೂಚಿಸುವುದು.

44. ಶಿಲಾರೋಹಿ (Rock Climber)

1. 16 ವರ್ಷ ತುಂಬಿರಬೇಕು.
2. ಶಿಲಾರೋಹಣದ ಬೇರೆ ಬೇರೆ ವಿಧಗಳನ್ನು ತಿಳಿದುಕೊಂಡು ಮಾಹಿತಿ ಪುಸ್ತಕದಲ್ಲಿ ದಾಖಲಿಸುವುದು.
3. ಆಪತ್ಕಾಲದಲ್ಲಿ ವಿಷಯವನ್ನು ತಿಳಿಸುವ ಕೌಶಲ್ಯವನ್ನು ಹೊಂದಿರಬೇಕು.
4. ತುರ್ತುಪರಿಸ್ಥಿತಿಯಲ್ಲಿ ಪ್ರಥಮ ಚಿಕಿತ್ಸೆ ಮಾಡಲು ಅರಿತಿರಬೇಕು.
5. 1200 ಮೀಟರ್ ಎತ್ತರವನ್ನು 5 ದಿನದೊಳಗೆ ಕ್ರಮಿಸಬೇಕು.
6. ಶಿಲಾರೋಹಣ ಸಂಸ್ಥೆಯ ಸದಸ್ಯತ್ವ ಹೊಂದಿ ಶಿಲಾರೋಹಣ ಕಾರ್ಯಕ್ರಮದಲ್ಲಿ ಪಾಲ್ಗೊಂಡ ವಿಷಯದಲ್ಲಿ ವರದಿ ದಾಖಲೆಗಳೊಂದಿಗೆ ಸಲ್ಲಿಸುವುದು.

ಅಥವಾ

ರಾಜ್ಯ ಅಥವಾ ರಾಷ್ಟ್ರೀಯ ಸಾಹಸ ಸಂಸ್ಥೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಏರ್ಪಡಿಸಿದ ಕಾರ್ಯಕ್ರಮದಲ್ಲಿ ಭಾಗವಹಿಸಿ, ವರದಿಯನ್ನು ಪರೀಕ್ಷಕರಿಗೆ ಸಲ್ಲಿಸುವುದು.

45. ಗ್ರಾಮ ಕಾರ್ಯಕರ್ತೆ (Rural Worker)

i) ಒಂದು ಗ್ರಾಮದ ವಿಸ್ತೀರ್ಣ, ಜನಸಂಖ್ಯೆ, ವೃತ್ತಿ, ಉತ್ಪನ್ನಗಳು, ಬಾವಿಗಳು, ಜಲಸಂಪನ್ಮೂಲ, ಸಂಪ್ರದಾಯಗಳು ಹಾಗೂ ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ, ಅಕ್ಷರಸ್ಥರ ಸಂಖ್ಯೆ ಬಗ್ಗೆ ವಿವರ ಮಾಹಿತಿ ಸಂಗ್ರಹಿಸುವುದು:

ii) ಗ್ರಾಮ ನೈರ್ಮಲ್ಯದ (ರೋಗಗಳು ಹರಡದಂತೆ) ಗ್ರಾಮ ಆಡಳಿತ ಮತ್ತು ಗ್ರಾಮ ಪಂಚಾಯಿತಿ ಬಗ್ಗೆ ಸಾಮಾನ್ಯ ಅರಿವನ್ನು ಹೊಂದಿರುವುದು.

iii) ಕನಿಷ್ಠ 6 ತಿಂಗಳು ಗ್ರಾಮದಲ್ಲಿ ಅವಿರತವಾಗಿ ಸಾಕ್ಷರತೆ, ವಯಸ್ಕರ ಶಿಕ್ಷಣ, ನೈರ್ಮಲ್ಯ ಮತ್ತು ಸ್ವಚ್ಛತೆ, ಬೇಸಾಯ, ಕೂಲಿಕೆಲಸ, ನಿಷೇಧಗಳು, ಆಟಗಳು ಮುಂತಾದವುಗಳಲ್ಲಿ ಉಪಯುಕ್ತ ಸೇವೆ ಸಲ್ಲಿಸಿ ಈ ಬಗ್ಗೆ ದಾಖಲೆಯನ್ನು ನೀಡುವುದು ಅಥವಾ ಕನಿಷ್ಠ 15 ದಿನಗಳ ಕಾಲ ಗ್ರಾಮದ ಕೂಲಿಗಾರರ ಶಿಬಿರದಲ್ಲಿ ಕೆಲಸ ಮಾಡುವುದು.

iv) ಕನಿಷ್ಠ 50 ಜನರಿಗೆ ಕುಷ್ಠರೋಗ ತಪಾಸಣೆ ಮಾಡಿಸುವುದು.

v) ಕನಿಷ್ಠ 20 ಮಕ್ಕಳಿಗೆ ಸೋಂಕು ನಿರೋಧಕ ಚುಚ್ಚುಮದ್ದನ್ನು ಹಾಕಿಸುವುದು.

vi) ಬಾಯಿಯ ಮೂಲಕ ಜಲಪೂರಕ ಚಿಕಿತ್ಸೆ (Oral Rehydration) ಕುರಿತು 6 ತಾಯಂದಿರಿಗೆ ಶಿಕ್ಷಣ ನೀಡುವುದು.

vii) ನೇತ್ರ ಶಿಬಿರ/ದಂತ ಶಿಬಿರಗಳನ್ನು ನಿಮ್ಮ ಮೊಹಲ್ಲಾ/ಬಡಾವಣೆ ಅಥವಾ ಹತ್ತಿರದ ಕೊಳಚೆ ಪ್ರದೇಶದಲ್ಲಿ ಏರ್ಪಡಿಸುವುದು.

viii) ನೆರೆಹೊರೆಯವರಿಗೆ ಅಜೀರ್ಣ, ಅತಿಸಾರ (Diarrhoea) ಮತ್ತು ಆಮಶಂಖೆ (Dysentery) ಮತ್ತು ಹೆಂಗಸರಿಗೆ ತಲೆಯಲ್ಲಿ ಹೇನುಗಳಿಲ್ಲದಂತೆ ಮಾಡುವ ಬಗ್ಗೆ ತಿಳುವಳಿಕೆ ನೀಡುವುದು.

46. ನೈರ್ಮಲ್ಯ ಪ್ರವರ್ಧಕಿ (Sanitation Promoter)

ಗೊತ್ತುಪಡಿಸಿದ ಪ್ರದೇಶದಲ್ಲಿ ಸಮೀಕ್ಷೆ ನಡೆಸಿ ಜನಗಳಿಗೆ ಕೆಳಗಿನ ರೀತಿಯಲ್ಲಿ ಸಹಾಯಮಾಡಿ:

i) ಅ. ಕುಡಿಯಲು ಶುದ್ಧ ನೀರನ್ನು ಬಳಸುವುದು.

ಆ. ನೀರನ್ನು ಕುದಿಸಿ, ಶೋಧಿಸಿ, ಸಂಗ್ರಹಿಸುವ ಕ್ರಮವನ್ನು ಪ್ರದರ್ಶಿಸುವುದು.

ಇ. ಇದ್ದಿಲು ಜಲಶೋಧಕದ ಉಪಯೋಗ ತಿಳಿಸುವುದು.

ii) ಇಲಿ ಮುಂತಾದ ದಂಶಕಗಳಿಂದ ದವಸ ಧಾನ್ಯಗಳ ರಕ್ಷಣೆ

iii) ಬೇಯಿಸಿದ, ಕರಿದ ಆಹಾರ ಪದಾರ್ಥಗಳನ್ನು ಸೊಳ್ಳೆ, ನೊಣ ಮತ್ತು ಧೂಳಿನಿಂದ ರಕ್ಷಿಸುವುದು.

iv) ಕಸ ವಿಲೇವಾರಿ ಕ್ರಮ ಮತ್ತು ಕಾಂಪೋಸ್ಟ್ ಗೊಬ್ಬರದ ಉಪಯೋಗ ತಿಳಿಸುವುದು.

v) ಬಯಲಿನಲ್ಲಿ ಮಲಮೂತ್ರವಿಸರ್ಜನೆಯ ಅಪಾಯಗಳ ಬಗ್ಗೆ ತಿಳಿಸುವುದು.

vi) ಕಡಿಮೆ ವೆಚ್ಚದ ಮತ್ತು ಪ್ರಭಾವಪೂರ್ಣ ಶೌಚಾಲಯುದ ನಿರ್ಮಾಣದ ವ್ಯವಸ್ಥೆ.

vii) ಧೂಮರಹಿತ ಒಲೆ ಬಳಸಲು ಮಹಿಳೆಯರ ಮನವೊಲಿಸುವುದು.

viii) ಆರೋಗ್ಯಕರ ಐಯೋಡಿನ್ ಪೂರಿತ (Iodised) ಉಪ್ಪು ಬಳಸಲು ಅವಳೇ ತಯಾರಿಸಿದ ಕರಪತ್ರಗಳು / ಭಿತ್ತಿಚಿತ್ರಗಳಸಹಿತ 25 ಮಹಿಳೆಯರ ಮನವೊಲಿಸುವುದು.

47. ಎರಡನೇ ಗಂಟು (Second Knot)

ಈ ಕೆಳಗಿನ ಗಂಟುಗಳನ್ನು ಹಾಕಲು ಮತ್ತು ಅದರ ಉಪಯೋಗಗಳನ್ನು ತಿಳಿದಿರಬೇಕು.

ಅ. ನಾವಿಕನ / ಕಡಲ ಗಂಟು (Nautical Knot)

ಆ. ಕ್ಯಾರಿಕ್ ತಿರುವು (Carrick Bend)

ಇ. ನಾವಿಕರ ಗಂಟುಗಳು (Sailers Knots)

ಈ. ಕಪಿಮುಷ್ಟಿ ಗಂಟು (Monkey Fist Knot)

ಉ. ಗಲ್ಲಿಗೇರಿಸುವವನ ಗಂಟು (ಉರುಳು ಹಾಕುವ ಗಂಟು) (Hangman's Knot)

48. ಸ್ವಸಂರಕ್ಷಣೆ (Self Defence)

ಕರಾಟೆ ಅಥವಾ ಜೂಡೋ ಅಥವಾ ಕುಂಗ್ಫು ಕಲಿಯಬೇಕು.

ಅ. **ಕರಾಟೆ:** ಕರಾಟೆ ತಜ್ಞರಿಂದ ಕ್ರಮಬದ್ಧ ಮೈ ಮೇಲೆ ಧಾಳಿ ಮಾಡುವವರ ವಿರುದ್ಧ ಸಂರಕ್ಷಣೆಯನ್ನು ಪಡೆಯುವ ತರಬೇತಿ ಹೊಂದಿರಬೇಕು.

ಈ ಕೆಳಗಿನ ಎರಡು ಗುಂಪುಗಳಿಂದ ಯಾವುದಾದರೂ ಎರಡನ್ನು ('ಎ' ಅಥವಾ 'ಬಿ' ಗುಂಪಿನಿಂದ) ಪರೀಕ್ಷಕರಿಗೆ ಮಾಡಿ ತೋರಿಸುವುದು.

ಗುಂಪು ಎ

ಸಿದ್ಧತಾ ವ್ಯಾಯಾಮ– ಕರಾಟೆ ನಿಲುವು ಸ್ಟಾನ್ಸ್ (Stances), ಗುದ್ದುವ ಮತ್ತು ಹೊಡೆಯುವ (Striking) ತಂತ್ರಗಳು, ಉಸಿರಾಟದ ತಂತ್ರಗಳು, ಯಾವುದಾದರೂ 4 ಕರಾಟೆ ಕ್ರಮಗಳನ್ನು ಹಾಗೂ ಎಳೆದು ಧಾಳಿ ಮಾಡುವ ವಿರುದ್ಧ ರಕ್ಷಣೆ.

ಗುಂಪು ಬಿ

ಸಿದ್ಧತಾ ವ್ಯಾಯಾಮ, ಕರಾಟೆ ಸ್ಟಾನ್ಸ್, ಉಸಿರಾಟದ ತಂತ್ರ, ತಡೆಯುವ ರಕ್ಷಣಾ ಕರಾಟೆ ತಂತ್ರ (Defensive Blocking Technique) ಯಾವುದಾದರೂ 4 ಕರಾಟೆ ಕ್ರಮ ಎಳೆದು ದಾಳಿ ಮಾಡುವ ವಿರುದ್ಧ ರಕ್ಷಣೆಗೆ.

ಆ. ಜುಡೋ

ನುರಿತ ತರಬೇತುದಾರರಿಂದ ಈ ಕೆಳಕಂಡವುಗಳ ಬಗ್ಗೆ ತರಬೇತಿ ಪಡೆಯುವುದು.

i) ಈ ಕೆಳಕಂಡ ವಿಷಯಗಳಲ್ಲಿ ಯಾವುದಾದರೂ ಎರಡನ್ನು ಪ್ರದರ್ಶಿಸುವುದು.

ಅ. ಬದಿಗೆ ಬೀಳುವುದನ್ನು ತಡೆಗಟ್ಟುವುದು. ಹಿಂದಕ್ಕೆ ಬೀಳುವುದನ್ನು ತಡೆಗಟ್ಟುವುದು. ಮುಂದೆ ಉರುಳುವುದು.

ಆ. ಸಮತೋಲನವನ್ನು ಕಳೆದುಕೊಳ್ಳುವುದು

ಇ. ಮೂಲಭೂತ ಸ್ಥಿತಿಗಳು Tsugiashi ಮತ್ತು Taisbaki

ಈ. A Hip throw

ಉ. ಓ–ಸೋಟೋ–ಗಾರಿ (O-Soto-Gari)

ಊ. ಕೆಸಾಗಟಾಮೆ (Kesagatame)

ii. ಮೂಲ ಸ್ವರಕ್ಷಣೆ ತಂತ್ರಗಳ ಬಗ್ಗೆ ಅರಿವು ಈ ಕೆಳಗಿನವುಗಳನ್ನು ಒಳಗೊಂಡು

ಅ. ದೇಹದ ಮೇಲೆ ದಾಳಿ ಮಾಡಬಹುದಾದ ಆರು ಸ್ಥಾನಗಳು.

ಆ. ಕುತ್ತಿಗೆ ಹಿಸುಕಿ ಕೊಲ್ಲುವ ಎದುರಾಳಿಯ ಮುಂಗೈ ಹಿಡಿತದಿಂದ ತಪ್ಪಿಸಿಕೊಳ್ಳುವ ಅಥವಾ ಬಿಡಿಸಿಕೊಳ್ಳುವ ವಿಧಾನ.

ಇ. **ಕುಂಗ್ಫೂ (Koongfoo):** Koongfoo ನಲ್ಲಿ ಬಿಳಿಸೊಂಟಪಟ್ಟಿ (White Belt) ಗಳಿಸಬೇಕು.

49. ಮಣ್ಣಿನ ಸಂರಕ್ಷಣೆ (Soil Conservation)

i) ಸವಕಳಿ, ಸಾರಿಗೆ ಮತ್ತು ತ್ಯಾಜ್ಯ ವಸ್ತುಗಳ ರಾಶಿ ಹಾಕುವುದರಿಂದ ಭೂಮೇಲ್ಮೈಯಲ್ಲಿ ಉಂಟಾಗುವ ಬದಲಾವಣೆಗಳನ್ನು ಮತ್ತು ಅದಕ್ಕೆ ಕಾರಣಗಳನ್ನು ತಿಳಿಯುವುದು.

ii) ಸವಕಳಿ ಬಗ್ಗೆ ಸಾಮಾನ್ಯ ಜ್ಞಾನ ಹೊಂದಿದ್ದು ಇದರಿಂದ ಉಂಟಾಗುವ ಅಪಾಯದ ವಿಧ, ಕಾರಣ ಮತ್ತು ಅದನ್ನು ತಡೆಗಟ್ಟುವ ಕ್ರಮವನ್ನು ತಿಳಿಯುವುದು.

iii) ಸವಕಳಿ ಬಗ್ಗೆ ಅಧ್ಯಯನ ಮಾಡಿ ಸವಕಳಿಯ ಬಗ್ಗೆ ಹಾಗೂ ಸಂರಕ್ಷಣೆ, ಅರಣ್ಯಾಭಿವೃದ್ಧಿ ಮತ್ತು ನೀರಿನ ಕೊರತೆ ನಿರ್ಮೂಲನೆ. ರಾಷ್ಟ್ರದಲ್ಲಿ ಈ ಬಗ್ಗೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳನ್ನು ಮೂರು ತಿಂಗಳ ಕಾಲ ಅಧ್ಯಯನ ಮಾಡಬೇಕು. ಜೊತೆಗೆ ಸ್ಥಳೀಯ ಅಧ್ಯಯನದ ಅನುಭವ ವನ್ನು ಸೇರಿಸಿ ಸಂಪನ್ಮೂಲ ಪುಸ್ತಕ ತಯಾರಿಸುವುದು.

iv) ಮಣ್ಣಿನ ಸಂರಕ್ಷಣೆಯ ವಿಧಾನಗಳ ಪ್ರಾಮುಖ್ಯತೆ ಹಾಗೂ ಹಳ್ಳ ತುಂಬುವುದು ಮುಂತಾದ ಮಣ್ಣಿನ ಸಂರಕ್ಷಣಾಕ್ರಮದ ಮಹತ್ವವನ್ನು ತಿಳಿಯುವುದು. ಇಂತಹ ಕಾರ್ಯಕ್ರಮದಲ್ಲಿ ಕನಿಷ್ಠ 24 ಗಂಟೆ ಭಾಗವಹಿಸಿ ಇದರ ಪ್ರಮಾಣಪತ್ರವನ್ನು ಸಲ್ಲಿಸುವುದು.

v) ತನ್ನ ತಂಡದೊಡನೆ ಸೇರಿ ಕನಿಷ್ಠ ಹತ್ತು ಹಣ್ಣು ಬಿಡುವ ಗಿಡಗಳ ಸಸಿಗಳನ್ನು ನೆಟ್ಟು ಮೂರು ತಿಂಗಳವರೆಗೆ ಬೆಳೆಸುವುದು.

vi) ನಿಮ್ಮ ಬಡಾವಣೆಯಲ್ಲಿರುವ ಮಣ್ಣು ಸಂರಕ್ಷಣಾ ಮಂಡಳಿ ಮಾಡುವ ಕೆಲಸಗಳ ಬಗ್ಗೆ ಮಾಹಿತಿ ಸಂಗ್ರಹಿಸುವುದು.

vii) ಮಣ್ಣಿನ ಸಂರಕ್ಷಣೆಗಾಗಿ 40 ಗಂಟೆಗಳ ಕಾಲ ಸೇವೆ ಸಲ್ಲಿಸಬೇಕು.

viii) ಪ್ರಕೃತಿಯ ಸಮತೋಲನದ ಸಿದ್ಧಾಂತವನ್ನು ಅರ್ಥಮಾಡಿ ಕೊಂಡು, ಸಸ್ಯ ಮತ್ತು ಪ್ರಾಣಿಗಳ ಜೀವನದಲ್ಲಿ ಇರುವ ಎರಡು ಸಂಬಂಧವನ್ನಾದರೂ ವಿವರಿಸುವ ಸಾಮರ್ಥ್ಯವನ್ನು ಪಡೆಯುವುದು. ಸಸ್ಯವರ್ಗ ಮತ್ತು ಪ್ರಾಣಿವರ್ಗಗಳ ಸಂರಕ್ಷಣೆಗಾಗಿ ಕೈಗೊಳ್ಳುತ್ತಿರುವ ಕಾರ್ಯಕ್ರಮಗಳನ್ನು ತಿಳಿದುಕೊಂಡು ಅವುಗಳಲ್ಲಿ ಭಾಗವಹಿಸುವುದು.

50. ಆಟಗಾರ್ತಿ (Sportswoman)

1. ಪ್ರಧಾನ ಆಟಗಾರರ ಜೀವನ ಚರಿತ್ರೆಯನ್ನು ಓದಬೇಕು.
2. ಕನಿಷ್ಠ 4 ರಾಷ್ಟ್ರೀಯ / ಅಂತಾರಾಷ್ಟ್ರೀಯ ಆಟಗಳ ನಿಯಮಗಳನ್ನು ತಿಳಿದಿರಬೇಕು.
3. ಈ ಕೆಳಕಂಡ ಯಾವುದಾದರೂ 2 ಆಟಗಳಲ್ಲಿ ಪ್ರಾವೀಣ್ಯತೆಯನ್ನು (ಒಂದೊಂದು ಗುಂಪಿನಿಂದ ಒಂದು) ತೋರಿಸುವುದು.

ಗುಂಪು ಎ: ಹಾಕಿ, ಕಾಲ್ಚೆಂಡು, ಟೆನ್ನಿಸ್, ಕ್ರಿಕೆಟ್, ಬ್ಯಾಡ್ಮಿಂಟನ್.

ಗುಂಪು ಬಿ: ನೆಟ್‌ಬಾಲ್, ಬ್ಯಾಸ್ಕೆಟ್ ಬಾಲ್, ಥ್ರೋಬಾಲ್, ದೂರ ಜಿಗಿತ, ಎತ್ತರ ಜಿಗಿತ.

4. 7 ಕಿ.ಮೀ.ಗಳನ್ನು ಒಂದು ಗಂಟೆಯಲ್ಲಿ ಕ್ರಮಿಸುವುದು ಮತ್ತು ಬ್ಲಾಕ್/ ಜಿಲ್ಲಾ ಮಟ್ಟದ ಆಟದಲ್ಲಿ ಭಾಗವಹಿಸುವುದು. ಅರ್ಹ ಕೋಚ್ ನಡೆಸುವ ಅಥವಾ 3 ತಿಂಗಳ ಕಾಲ ಕೋಚಿಂಗ್ ಕ್ಯಾಂಪ್‌ನಲ್ಲಿ ತರಬೇತಿ ಪಡೆದು ತೇರ್ಗಡೆಯಾಗುವುದು.

51. ಸಿಂಪಿಗಿತ್ತಿ (Tailor)

1. ಹತ್ತಿ ಮತ್ತು ಉಣ್ಣೆ ಬಟ್ಟೆಯಲ್ಲಿ ಪರೀಕ್ಷಕರು ಕೊಟ್ಟಿರುವ ಮಾದರಿಯನ್ನು ಕತ್ತರಿಸಿ ಸಿದ್ಧಗೊಳಿಸುವುದು.
2. ಈ ಕೆಳಗಿನ ಉಡುಪುಗಳನ್ನು ಹೊಲೆದು ಪರೀಕ್ಷಕರಿಗೆ ತಂದು ತೋರಿಸುವುದು.

i) ಬ್ಲೌಸ್ (ಕುಪ್ಪಸ) / ಮಗುವಿನ ಅಂಗಿ, ಫ್ರಾಕ್/ ಷರ್ಟ್

ii) ಒಂದು ಜೊತೆ ಕಾಚ / ಒಳಲಂಗ

3. ಕಾಜಾ ಮಾಡುವುದು, ತಿರುವು ಬಂದಾಗ ನೆರಿಗೆ ಮಾಡುವುದು, ತುದಿಯನ್ನು ಮಡಚುವುದು. ಹತ್ತಿ ಬಟ್ಟೆಯಲ್ಲಿ ಚಿತ್ತಾರ ಇರುವ ಫ್ಲಾನಲ್ ಬಟ್ಟೆ, ನೇಯ್ದ ಬಟ್ಟೆಯಲ್ಲಿ ತೇಪೆ ಹಾಕಲು ಗೊತ್ತಿರಬೇಕು.

4. ತನ್ನ ಯೂನಿಫಾರಂ ತಾನೇ ಹೊಲಿಯಬೇಕು.

52. ಜಾಲತಾಣದ ಭದ್ರತೆ (Web Safety)

1. ಯಾವುದಾದರೂ ಸಾಫ್ಟ್‌ವೇರನ್ನು ಗಣಕ ಯಂತ್ರದಲ್ಲಿ ಅಳವಡಿಸುವ ಮೊದಲು ಅನುಮತಿ ಕೊಡುವ ಒಪ್ಪಂದವನ್ನು ಓದಬೇಕು.

2. ವೈರಸ್ ತಡೆಗಟ್ಟುವ ಸಾಫ್ಟ್‌ವೇರ್ ಬಗ್ಗೆ ಜ್ಞಾನ. ಅದನ್ನು ಅಳವಡಿಸುವುದು ಮತ್ತು ಗಣಕ ಯಂತ್ರದಿಂದ ತೆಗೆಯುವ ವಿಧಾನ.

3. ಅಂತರ್ಜಾಲದ ಅನುಕೂಲ ಮತ್ತು ಅನಾನುಕೂಲಗಳು

4. ಗಣಕಯಂತ್ರವನ್ನು Hacking ನಿಂದ ತಡೆಯುವ ಬಗೆ

5. ಎರಡು ಸಾಮಾಜಿಕ ಮಾಧ್ಯಮಗಳನ್ನು ಉಪಯೋಗಿಸಿ, ಅಂತರ್ಜಾಲದ ಕ್ಷೇಮ ಮತ್ತು ಭದ್ರತೆಯನ್ನು, ಅದನ್ನು ಉಪಯೋಗಿಸುವ 10 ಜನಕ್ಕೆ ತಿಳಿಸುವುದು.

6. ನಿಮ್ಮ ಪ್ರದೇಶದಲ್ಲಿ ಮೂರು ತಿಂಗಳ ಕಾಲ ಜಾಲತಾಣದ ಭದ್ರತೆಯ ಆಂದೋಲನವನ್ನು ನಡೆಸುವುದು.

53. ವಿಶ್ವ ಸಂರಕ್ಷಣೆ (World Conservation)

1. ಕೆಳಗಿನ ಪದಗಳ ಅರ್ಥ ವಿವರಿಸಿ.
   ಜೀವ ಪರಿಸ್ಥಿತಿ, ಸಂರಕ್ಷಣೆ, ಪ್ರಕೃತಿ ಸಮತೋಲನ, ಜೀವನಸರಪಳಿ, ಜೀವನಚಕ್ರ, Bio sides, ಪುನರ್ ಬಳಕೆ, ದ್ಯುತಿಸಂಶ್ಲೇಷಣೆ, ಸಾವಯವ ಮತ್ತು ನಿರವಯವ ರಾಸಾಯನಿಕಗಳು (Organic & Inorganic Materials), ಮೇಲ್ಮಣ್ಣು (Humus).
2. ಆಮ್ಲಜನಕ ಚಕ್ರವನ್ನು ಚಿತ್ರಿಸಿ.
3. ಜೀವಪರಿಸ್ಥಿತಿಯಲ್ಲಿ ಮಹಿಳೆ, ಪ್ರಾಣಿ, ಸಸ್ಯಗಳು ಮತ್ತು ಇತರೆ ಸಂಪನ್ಮೂಲ ಗಳ ಅಂತರಾವಲಂಬನೆ ಮತ್ತು ಸಂಬಂಧವನ್ನು ದೃಷ್ಟಾಂತಸಹಿತ ವಿವರಿಸುವುದು.
4. ಕಾಳ್ಗಿಚ್ಚು, ನೀರಿನ ಮಾಲಿನ್ಯದಿಂದ ವನ್ಯಪ್ರಾಣಿಗಳು ಹಾಗೂ ಮನುಷ್ಯರ ಇತರ ಚಟುವಟಿಕೆಗಳಿಂದ ವನ್ಯಜೀವಿಗಳ ಮೇಲೆ ಉಂಟಾಗುವ ಪರಿಣಾಮ.
5. ಪ್ರವಾಹಕ್ಕೆ ಕಾರಣ ಮತ್ತು ಪ್ರವಾಹದ ನಿಯಂತ್ರಣ.
6. ರಾಷ್ಟ್ರದ ಪ್ರಮುಖ ಸಂರಕ್ಷಣಾ ಸಂಘಟನೆ ಮತ್ತು ಸಂಸ್ಥೆಗಳ ಬಗ್ಗೆ ತಿಳಿದಿರುವುದು.
7. ರಾಷ್ಟ್ರದ ಪ್ರಧಾನ ಆರಕ್ಷಿತ ನೈಸರ್ಗಿಕ (ಅಭಯಾರಣ್ಯ ಆರಕ್ಷಿತಧಾಮ) ಪ್ರದೇಶಗಳನ್ನು ತಿಳಿಯುವುದು ಮತ್ತು ಯಾವ ಕಾರಣಕ್ಕಾಗಿ ಅಭಯಾರಣ್ಯಗಳು ಎನ್ನುವ ಅರಿವನ್ನು ಹೊಂದಿರಬೇಕು.

8. ಸಂರಕ್ಷಣಾ ಕಾನೂನುಗಳ ಅರಿವು ಹೊಂದಿರಬೇಕು.

9. ಕೆಳಗಿನವುಗಳಲ್ಲಿ 2 ಚಟುವಟಿಕೆಗಳನ್ನು ಮಾಡಿ:

ಅ) ವಿಶ್ವ ವನ್ಯಜೀವಿಗಳ ಸಂಸ್ಥೆ ಅಥವಾ (International Union of Conservation of Nature) ಅಂತಾರಾಷ್ಟ್ರೀಯ ನಿಸರ್ಗ ಸಂರಕ್ಷಣಾ ಸಂಸ್ಥೆಗಳು ಏರ್ಪಡಿಸಿದ ಯೋಜನಾ ಕಾರ್ಯದಲ್ಲಿ ಕನಿಷ್ಠ 24 ಗಂಟೆ ಭಾಗವಹಿಸುವುದು (ಒಮ್ಮೆಗೆ 8 ಗಂಟೆ ಮೀರದಂತೆ)

ಆ) ಕೆಳಗಿನ ಸಂರಕ್ಷಣಾ ಕಾರ್ಯಯೋಜನೆಯಲ್ಲಿ ಯಾವುದಾದರೂ ಒಂದನ್ನು ಮಾಡುವುದು.

- i) ಎಸೆದಾಡುವ ಕಸದ (Litters) ವಿರುದ್ಧ ಚಳವಳಿ
- ii) ಒಂದು ತುಂಡು ನೆಲವನ್ನು ಸುಂದರ ಹಾಗೂ ಫಲವತ್ತಾಗಿ ಮಾಡುವುದು.
- iii) ಸಾರ್ವಜನಿಕರನ್ನು ಒಟ್ಟುಗೂಡಿಸಿ ಮಾಹಿತಿ ಅಭಿಯಾನಗಳ ಮೂಲಕ ಅಭಿಪ್ರಾಯ ಸಂಗ್ರಹ.
- iv) ಭಿತ್ತಿಚಿತ್ರಗಳನ್ನು ಮಾಡುವುದು.
- v) ಪ್ರಾತ್ಯಕ್ಷಿಕೆ / ಪ್ರದರ್ಶನ ಏರ್ಪಡಿಸುವುದು.
- vi) ವಸ್ತು ಪ್ರದರ್ಶನ ಏರ್ಪಡಿಸುವುದು.
- vii) ಕೈಪತ್ರಿಕೆಗಳನ್ನು ಮಾಡಿ ಹಂಚುವುದು.

10. ಕೆಳಗಿನವುಗಳಲ್ಲಿ ಒಂದನ್ನು ಮಾಡಿ:

ಅ) 4 ಗಂಟೆಗಳ 2 ಅವಧಿಯನ್ನು ವನ್ಯರಕ್ಷಕ ಅಥವಾ ವನ್ಯ ಸಂರಕ್ಷಣಾಧಿಕಾರಿಯೊಡನೆ ಸಂಭಾಷಿಸಿ, ಅವಳ ಅಲ್ಲಿಯವರೆಗಿನ ವೀಕ್ಷಣೆಯನ್ನೂ ಆಧರಿಸಿ ವರದಿ ತಯಾರಿಸುವುದು.

ಆ) ಸಂರಕ್ಷಣೆ ಮತ್ತು ಪ್ರಕೃತಿ ಅಧ್ಯಯನ ಪ್ರಧಾನವಾದ ಚಟುವಟಿಕೆಗಳನ್ನು ಹೊಂದಿರುವ ಶಿಬಿರದಲ್ಲಿ ಕನಿಷ್ಠ ಮೂರುದಿನಗಳು ಭಾಗವಹಿಸುವುದು.

11. ಪರೀಕ್ಷಕರು ಆಯ್ಕೆ ಮಾಡಿದ ಸಂರಕ್ಷಣಾ ವಿಷಯಗಳನ್ನು ಕುರಿತು ವಿಶೇಷ ಸಂರಕ್ಷಣಾ ಕಾರ್ಯವನ್ನು ಏರ್ಪಡಿಸಿ ಪೂರ್ಣಗೊಳಿಸಬೇಕು.

ಸೂಚನೆ: **ಈ ಪ್ರಮಾಣಪತ್ರವನ್ನು ರಾಜ್ಯ ಪ್ರಧಾನ ಆಯುಕ್ತರು ಸಹಿ ಮಾಡುತ್ತಾರೆ. ಈ ಪದಕವನ್ನು ರಾಷ್ಟ್ರಪತಿ ರೇಂಜರ್ ಪದಕದ ಕೆಳಗೆ ಧರಿಸಬೇಕು.**

54. ವಿಶ್ವಮಿತ್ರೆ (World Friendship)

1. ಮೂರು ಹೊರದೇಶಗಳ ಚರಿತ್ರೆ, ಭೂಗೋಳ ಮತ್ತು ಜನಜೀವನದ ಬಗ್ಗೆ ತಿಳಿದುಕೊಳ್ಳುವುದು.
2. ಹೊರದೇಶದ ರೇಂಜರ್ ಜೊತೆ ಕನಿಷ್ಠ ಒಂದು ವರ್ಷ ಸಂಪರ್ಕಿಸಿ, 9 ಪತ್ರಗಳನ್ನು ಹೊಂದಿರಬೇಕು.
3. ವಿಶ್ವಗೈಡ್ ಸಂಸ್ಥೆಯ (WAGGGS) ಚಟುವಟಿಕೆಗಳ ಬಗ್ಗೆ ಮತ್ತು ಅಂತಾರಾಷ್ಟ್ರೀಯ ಗೈಡಿಂಗ್‌ನ ಬಗ್ಗೆ ವಿಷಯಗಳನ್ನು ಸಂಗ್ರಹಿಸಿ ಸಂಪನ್ಮೂಲ ಪುಸ್ತಕ ತಯಾರಿಸುವುದು.
4. ಕೆಳಗಿನವುಗಳಲ್ಲಿ ಯಾವುದಾದರೂ 3 ಚಟುವಟಿಕೆ ಮಾಡುವುದು:

ಅ) ಒಂದು ಹೊರ ರಾಷ್ಟ್ರದ ರೇಂಜರ್ಸ್ ಚಟುವಟಿಕೆಗಳಾದ ಆಟ, ಸಂಸ್ಕೃತಿ, ರಾಷ್ಟ್ರೀಯ ಆಗುಹೋಗುಗಳ ಮತ್ತು ಕೌಟುಂಬಿಕ ಜೀವನ ಕುರಿತು ದೃಷ್ಟಾಂತಸಹಿತ ಒಂದು ಚಿತ್ರಕೋಶವನ್ನು ತಯಾರಿಸುವುದು.

ಆ) ವಿಶ್ವಸಂಸ್ಥೆಯ (UNO) ಉದ್ದೇಶ, ರಚನೆ, ವ್ಯವಸ್ಥೆ, ಕಾರ್ಯ ಇದರ ಸಹಾಯಧನ ಮಧ್ಯವರ್ತಿಗಳು (Subsidiary Agencies), ಇದರ ಸನ್ನದು, ಪ್ರಮುಖ ಸಿದ್ಧಾಂತವಾದ ಮಾನವಹಕ್ಕು ಮುಂತಾದವುಗಳ ಸರಳ ವಿವರಣೆ ನೀಡುವ ಸಾಮರ್ಥ್ಯ ಪಡೆಯುವುದು.

ಇ) ವಿಶ್ವ ಸೋದರಿತ್ವದ ಪ್ರಸಾರಕ್ಕಾಗಿ ವಿಶ್ವಸಂಸ್ಥೆಯು ನೀಡುವ ಪರಿಹಾರ ಸರಬರಾಜುಗಳನ್ನು ಪಡೆಯುವುದು, ಹಂಚುವುದು ಮತ್ತು ಪಕ್ಷೇತರ ಸಂಘಟನೆಗಳ (Non-Partisan Organisation) ಕಾರ್ಯಯೋಜನೆಯಲ್ಲಿ ಸಹಾಯ ಮಾಡುವುದು.

ಈ) ಹೊರದೇಶದ ಮೂರು ರೇಂಜರ್‌ಗಳಿಗೆ ತನ್ನ ಮನೆಯಲ್ಲಿ ತಂಗುವ ವ್ಯವಸ್ಥೆ ಮಾಡಿ ಸತ್ಕರಿಸುವುದು.

ಉ) ವರ್ತಮಾನದ ವಿಶ್ವದ ಆಗುಹೋಗುಗಳನ್ನು (Affairs) ಕುರಿತು ಒಂದು ಕಿರುಪ್ರಬಂಧವನ್ನು ಬರೆಯುವುದು.

55. ವಿಶ್ವ ಗೈಡ್ ಪರಿಸರ (World Guide Environment)

ಇದು ಒಂದು ಅಂತಾರಾಷ್ಟ್ರೀಯ ಪದಕ. ವಿಶ್ವದಾದ್ಯಂತ ಎಲ್ಲ ಗೈಡ್‌ಗಳೂ ಈ ಪದಕವನ್ನು ಅವರ ಯೂನಿಫಾರಂ ಮೇಲೆ ತಮ್ಮ ಗೈಡಿಂಗ್ ಮೇಲೆ ಇರುವ ಆಸಕ್ತಿಯನ್ನು ತೋರಿಸಲು ಮತ್ತು ಸಕ್ರಿಯವಾಗಿ ಪರಿಸರದ ಕಾರ್ಯಕ್ರಮಗಳಲ್ಲಿ ಜವಾಬ್ದಾರಿ ವಹಿಸಲು ಧರಿಸುತ್ತಾರೆ.

ಅವಶ್ಯಕತೆಗಳು:

1. ಪ್ರಜೆಗಳು ಮತ್ತು ಪ್ರಕೃತಿಯಲ್ಲಿ ಶುದ್ಧ ಜಲ ನೀರು.

ಅ) ನಿಮ್ಮ ಸಮುದಾಯದ ಜಲ ಶುದ್ಧೀಕರಣದ ಸೌಲಭ್ಯಕ್ಕೆ ಭೇಟಿ ಕೊಡುವುದು. ಸಮುದಾಯದ ಶುದ್ಧ ಜಲ ಸಂಪನ್ಮೂಲಗಳನ್ನು ಕಂಡುಹಿಡಿಯುವುದು.

ಆ) ಸ್ಥಳೀಯ ಗಾಳಿಯ ಗುಣಮಟ್ಟವನ್ನು ಸಂಶೋಧನೆ ಮಾಡುವುದು.

2. ಪ್ರಾದೇಶಿಕ ಸಸ್ಯ ಮತ್ತು ಮೃಗಗಳ ಎಲ್ಲ ಪ್ರಕಾರಗಳೂ ಇರಲು ಸಾಕಷ್ಟು ಸಂಪನ್ಮೂಲಗಳು ಇರುವುದು.

ಅ) ಒಂದು ಪ್ರಾಕೃತಿಕ ತಾಣಕ್ಕೆ ಭೇಟಿ ನೀಡಿ ಅಲ್ಲಿಯೇ 36 ಗಂಟೆಗಳ ಕಾಲ ಉಳಿಯುವುದು.

ಈ ಸಮಯದಲ್ಲಿ ಅಲ್ಲಿಯ ವಾತಾವರಣ, ಬೆಳಕು, ಶಬ್ದಗಳು, ವಾಸನೆಗಳು, ಮೃಗಗಳು, ಹಕ್ಕಿಗಳು ಮುಂತಾದವುಗಳಲ್ಲಿ ಆಗುವ ಬದಲಾವಣೆಗಳನ್ನು ದಾಖಲಿಸುವುದು.

ಆ) ಪ್ರಕೃತಿಯಲ್ಲಿ ಒಂದು ಹೆಕ್ಟೇರ್ ಜಾಗದಲ್ಲಿ ನಡೆದು ಅಲ್ಲಿಯ ಗಿಡಮರಗಳು ಮತ್ತು ಮೃಗಗಳು ಹೇಗೆ ಒಂದಕ್ಕೊಂದು ಸಂಬಂಧ ಹೊಂದಿವೆ ಎನ್ನುವುದನ್ನು ದಾಖಲಿಸುವುದು.

3. ಜನರಿಗೆ ಮತ್ತು ಪರಿಸರಕ್ಕೆ ಕೆಡುಕು ಮಾಡುವಂತಹ ಪದಾರ್ಥ/ ವಿಷಯಗಳನ್ನು ಕಡಿಮೆ ಮಾಡುವುದು.

ಅ) ಸಮುದಾಯದಲ್ಲಿ ಉಪಯೋಗಿಸುತ್ತಿರುವ ರಾಸಾಯನಿಕ ಪದಾರ್ಥಗಳನ್ನು ಪಟ್ಟಿ ಮಾಡುವುದು.

ಆ) ಸ್ಥಳೀಯರಿಗೆ ಕೆಡುಕು ಮಾಡುವ ಪದಾರ್ಥಗಳ ಹಾವಳಿಯನ್ನು ಕಂಡುಹಿಡಿಯುವುದು.

ಇ) ತುರ್ತುಪರಿಸ್ಥಿತಿಯ ಸಿದ್ಧತೆಗೆ ಸಜ್ಜಾಗಿರುವ ಸಂಸ್ಥೆಯ ಬಗ್ಗೆ ಅರಿತು, ಅಲ್ಲಿ ಮೂಲ ತರಬೇತಿಯನ್ನು ಪಡೆಯುವುದು.

ಈ) ತುರ್ತು ಪ್ರಥಮ ಚಿಕಿತ್ಸೆ, 72 ಗಂಟೆಗಳ ತುರ್ತು ಚಿಕಿತ್ಸೆಗೆ ಅಣಿ ಮಾಡಿದ ಪೆಟ್ಟಿಗೆ, ಹುಡುಕಾಟ ಮತ್ತು ಕಾಪಾಡುವಿಕೆ, ಪ್ರಾದೇಶಿಕ ತುರ್ತುಪರಿಸ್ಥಿತಿಯ ಸೂಕ್ತ ಕಾರ್ಯಕ್ರಮಗಳು, ಕಾನನ/ ಮರುಭೂಮಿಯಲ್ಲಿ ಪ್ರಥಮ ಚಿಕಿತ್ಸೆ.

4. ನಿಮ್ಮ ಸ್ಥಳೀಯ ಪರಿಸರಕ್ಕೆ ಸರಿಹೊಂದುವ, ನೀವು ಆಗಲೇ ಅಧ್ಯಯನ ಮಾಡಿರುವ ಪರಿಸರದ ವಿಷಯವನ್ನು ಆಯ್ಕೆ ಮಾಡಿಕೊಳ್ಳುವುದು.

56. ಯೋಗ ಶಿಕ್ಷಕಿ (Yoga Instructor)

ಯೋಗ ಶಿಕ್ಷಕಿಯ ಮೂಲ ತರಬೇತಿಯನ್ನು ಹೊಂದುವುದು.

1. ವ್ಯಕ್ತಿಯ ಆರೋಗ್ಯಕ್ಕೆ ಅವಶ್ಯಕವಾದ ದೇಹ ಮತ್ತು ಮನಸ್ಸಿನ ಸಮನ್ವಯದ ಭಾರತೀಯ ಪದ್ಧತಿಯ ವ್ಯಾಯಾಮ ವಾದ ಯೋಗಾಸನದ ಬಗ್ಗೆ ಸಾಮಾನ್ಯ ಜ್ಞಾನ ಪಡೆಯುವುದು.

2. ಯೋಗ ಶಿಕ್ಷಕಿಯಾಗಿ ದಳದ ಸದಸ್ಯರಿಗೆ ಸರಿಯಾದ ಭಂಗಿ ಮತ್ತು ಹಾನಿಯನ್ನು ನಿವಾರಿಸುವ ಬಗ್ಗೆ ತೋರಿಸುವುದು.

3. ಯೋಗ ತರಗತಿಯನ್ನು ಒಂದು ವ್ಯಾಯಾಮ ಅಥವಾ ಶ್ರಮದ ಕೆಲಸದಂತೆ ಬೋಧಿಸುವುದನ್ನು ಕಲಿಯುವುದು.

4. ಕನಿಷ್ಠ 3 ತಿಂಗಳಾದರೂ ಯೋಗಾಸನಗಳನ್ನು ಅಭ್ಯಾಸ ಮಾಡಿರಬೇಕು.

5. ಪರೀಕ್ಷಕರಿಗೆ ತೃಪ್ತಿಕರವಾಗುವಂತೆ ಯೋಗ ಪ್ರದರ್ಶನ ಮಾಡುವುದು.

6. 3 ತಿಂಗಳೊಳಗೆ ಯೋಗದ ಚರಿತ್ರೆ ಮತ್ತು ಯೋಗಾಸನಗಳ ಬಗ್ಗೆ ಒಂದು ಕಿರುಹೊತ್ತಿಗೆಯನ್ನು ಸಿದ್ಧಪಡಿಸುವುದು. ಪರೀಕ್ಷಕರು ಅನುಮೋದಿಸಿದ ಮೇಲೆ ಯೋಗ ತರಗತಿಯಲ್ಲಿ ಹಂಚಬಹುದು.

ಪ್ರಾದೇಶಿಕ ಆಸಕ್ತಿ ಪದಕ

ಉದ್ದೇಶಗಳು

1. ತಮ್ಮ ಸದಸ್ಯತ್ವವಿರುವ ಏಷ್ಯಾ ಪೆಸಿಫಿಕ್ ಪ್ರದೇಶದ ಬಗ್ಗೆ ಅರಿವು ಮೂಡಿಸುವುದು.

2. ಈ ಪ್ರದೇಶವು ಒಳಗೊಂಡಿರುವ ಭೌಗೋಳಿಕ ವೈಶಾಲ್ಯ / ವಿಶಾಲತೆ, ದ್ವೀಪಗಳು (Archipelago), ಸಮುದ್ರಗಳು ಅರ್ಧದಷ್ಟು ಜನಸಂಖ್ಯಾಭರಿತ ದ್ವೀಪ ಸಮೂಹಗಳನ್ನು ಹೊಂದಿರುವ ಬಗ್ಗೆ ತಿಳಿದುಕೊಂಡು ಮೆಚ್ಚುಗೆಯನ್ನು ವ್ಯಕ್ತಪಡಿಸುವುದು.

3. ಈ ಪ್ರದೇಶದಲ್ಲಿರುವ ಜನಾಂಗಗಳು, ಧರ್ಮಗಳು, ಚರಿತ್ರೆ ಮತ್ತು ಸಂಸ್ಕೃತಿಯಲ್ಲಿನ ವೈವಿಧ್ಯತೆಯ ಬಗ್ಗೆ ತಿಳಿದುಕೊಳ್ಳುವುದು.

4. ಸಹ ಚಟುವಟಿಕೆ ಮತ್ತು ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವುದರ ಮೂಲಕ ಪ್ರದೇಶದಲ್ಲಿ ಸಹಕಾರ ಮತ್ತು ಸ್ನೇಹವನ್ನು ಬೆಳೆಸಿ ಕೊಳ್ಳುವುದು.

ಪದಕ: ಹತ್ತಿ ಬಟ್ಟೆಯ ಮೇಲೆ ಏಷ್ಯಾ ಪೆಸಿಫಿಕ್ ಲಾಂಛನ ಹೊಂದಿರುವ ಪದಕ

ಮೌಲ್ಯಮಾಪನ: ಈ ಪದಕದ ಮೌಲ್ಯಮಾಪಕರನ್ನು ರಾಷ್ಟ್ರಸಂಸ್ಥೆ ನೇಮಕ ಮಾಡುವುದು.

1. **ಪ್ರಾದೇಶಿಕ ಅರಿವು (Knowledge of the Region)**

ಈ ಕೆಳಗಿನ ವಿಷಯಗಳ ಬಗ್ಗೆ ಅರಿವು

ಅ)(i) ಏಷ್ಯಾಪೆಸಿಫಿಕ್ ಬಿಡಿಪುಟ (leaflet)ದಿಂದ ಪ್ರದೇಶದ ಬಗ್ಗೆ ಲಾಂಛನ ಮತ್ತು ಅದರ ಭಾಗಗಳ ಅರ್ಥದ ಬಗ್ಗೆ ತಿಳಿಯುವುದು.

(ii) ನಮ್ಮ ಪ್ರದೇಶದಲ್ಲಿರುವ **'ಸಂಗಮ್'** ಅಂತಾರಾಷ್ಟ್ರೀಯ ಭವನದ ಪರಿಚಯ ಮಾಡಿಕೊಂಡು ಉದ್ದೇಶಗಳನ್ನು ತಿಳಿಯುವುದು.

ಆ) ನಿಮ್ಮ ತಂಡದ ಸದಸ್ಯರಿಗೆ ಈ ವಿಷಯಗಳಲ್ಲಿ ಆಸಕ್ತಿ ಮೂಡುವಂತೆ ತಿಳಿಯಪಡಿಸುವುದು.

2. **ಕಲಿಕೆ ಮತ್ತು ಹಂಚಿಕೆ (Learning & Sharing)**

ಅ) ಕೆಳಗಿನವುಗಳನ್ನು, ಸದಸ್ಯ ರಾಷ್ಟ್ರಗಳ ಪ್ರವಾಸಿಗರಿಂದ ಅಥವಾ ಆ ರಾಷ್ಟ್ರಗಳ ಜನರು ನಿಮ್ಮಲ್ಲಿ ನೆಲೆಸಿದ್ದರೆ ಅವರನ್ನು ಸಂಪರ್ಕಿಸಿ ತಿಳಿದುಕೊಳ್ಳುವುದು.

i) ಶುಭಕೋರುವ ವಿಧಾನ ಮತ್ತು ವಿವಿಧ ಭಾಷೆಗಳಲ್ಲಿ ವ್ಯವಹಾರಿಕ ವಿಷಯಗಳ ವಾಕ್ಯಾಂಗ (Phrases)ಗಳನ್ನು ಕಲಿಯುವುದು.

ii) ಸದಸ್ಯ ದೇಶಗಳ ಪದ್ಧತಿ ಮತ್ತು ಹಬ್ಬಗಳು

ಆ) ಯಾವುದಾದರೊಂದು ಸದಸ್ಯ ರಾಷ್ಟ್ರ ಗರ್ಲ್‌ಗೈಡ್ / ಗರ್ಲ್ ಸ್ಕೌಟ್‌ನ ಬಗ್ಗೆ ಪ್ರದರ್ಶಕ ಸಂಚಿ (Display Kit) ಅಥವಾ ಕಥನ ಪುಸ್ತಕ (Scrap Book) ತಯಾರಿಸುವುದು.

ಈ ಕೆಳಕಂಡ ವಿಷಯುಗಳನ್ನು ಇದರಲ್ಲಿ ಅಳವಡಿಸಿ ಕೊಳ್ಳುವುದು.

ಯುವ ಚಟುವಟಿಕೆ, ಸರ್ಕಾರದ ವಿಧ, ಸಂಸ್ಕೃತಿ-ಸಂಪ್ರದಾಯ, ಆರ್ಥಿಕ ಚಟುವಟಿಕೆ, ಹವಾಮಾನದ ಪರಿಸ್ಥಿತಿ, ಸಸ್ಯ ಮತ್ತು ಪ್ರಾಣಿ ಸಮುದಾಯ, ಪ್ರವಾಸ ಮಾಹಿತಿ ಕಿರುಪುಸ್ತಕ (Travel Brochures) ಇತ್ಯಾದಿ.

ಇ. ಕೆಳಗಿನವುಗಳಲ್ಲಿ ಎರಡನ್ನು ಮಾಡುವುದು:

i) ಪ್ರಾದೇಶಿಕ ತಿನಿಸುಗಳ ಪುಸ್ತಕ ತಯಾರಿಸಿ, ಒಂದೆರಡು ತಿನಿಸುಗಳ ತಯಾರಿಕೆಯನ್ನು ಪ್ರದರ್ಶಿಸುವುದು.

ii) ಯಾವುದಾದರೂ ಎರಡು ರಾಷ್ಟ್ರಗಳ ಆಗುಹೋಗು (affair) ಅಥವಾ ಸಂಗತಿಗಳನ್ನು ಕುರಿತು ವೃತ್ತಪತ್ರಿಕೆ ತುಣುಕುಗಳನ್ನು (cuttings) ಸಂಗ್ರಹಿಸುವುದು.

iii) ಅನ್ಯ ಸದಸ್ಯ ರಾಷ್ಟ್ರಗಳ ಕರಕುಶಲತೆಯನ್ನು ಕಲಿಯುವುದು.

ಮೇಲಿನ i, ii, iii ಕಲಿತ ವಿಷಯಗಳ ಹಾಗೂ ಸಂಗ್ರಹಿಸಿದ ವಸ್ತುಗಳು ಮತ್ತು ಕೌಶಲ್ಯಗಳನ್ನು ನಮ್ಮ ಹಿರಿಯ ಗೈಡ್ಸ್/ರೇಂಜರ್ಸ್/ ಯುವತಿಯರು/ ವಯಸ್ಕ ಮಹಿಳೆಯರಿಗೆ ತೋರಿಸಿ, ಆಸಕ್ತಿ ಮೂಡುವಂತೆ ಮಾಡುವುದು.

3. ಸೇವೆಗಳು

ಕೆಳಗಿನವುಗಳಲ್ಲಿ ಒಂದನ್ನು ಮಾಡಿ:

i) ಯಾವುದಾದರೂ ಸದಸ್ಯ ರಾಷ್ಟ್ರದ ಸಮುದಾಯ ಯೋಜನೆಗಳಲ್ಲಿ ಭಾಗವಹಿಸುವುದು.

ii) ನಿಮ್ಮ ರಾಷ್ಟ್ರದ ಇತರ ಸಂಘ ಸಂಸ್ಥೆಗಳು/ದಳ/ತಂಡಗಳು ಹಮ್ಮಿಕೊಂಡಿರುವ ಕಾರ್ಯಕ್ರಮಗಳಲ್ಲಿ ಅವರ ಜೊತೆಗೂಡಿ (Twining) ಸಮುದಾಯ ಯೋಜನಾ ಅಭಿವೃದ್ಧಿ ಕಾರ್ಯದಲ್ಲಿ ಭಾಗವಹಿಸುವುದು.

iii) ವಿಶ್ವಗೈಡ್ ಕೇಂದ್ರವಾದ ಸಂಗಮ್‌ಗೆ ಧನ ಸಂಗ್ರಹಿಸಲು ಒಂದು ಉಪಯುಕ್ತ ವಸ್ತುವನ್ನು ಮಾಡಿಕೊಡುವುದು.

ರೇಂಜರ್ ಪ್ರತಿಜ್ಞೆಮತ್ತು ನಿಯಮ

ಪ್ರತಿಜ್ಞೆ:

ನಾನು ನನ್ನ ಗೌರವಸಾಕ್ಷಿಯಾಗಿ ಕೈಲಾದಮಟ್ಟಿಗೆ ದೇವರಿಗೂ ಮತ್ತು ನನ್ನ ದೇಶಕ್ಕೂ ನನ್ನ ಕರ್ತವ್ಯವನ್ನು ಸಲ್ಲಿಸುತ್ತೇನೆಂದೂ ಇತರರಿಗೆ ಸಹಾಯ ಮಾಡುತ್ತೇನೆಂದೂ ಗೈಡ್ ನಿಯಮವನ್ನು ಪಾಲಿಸುತ್ತೇನೆಂದೂ ಪ್ರತಿಜ್ಞೆ ಗೈಯುತ್ತೇನೆ.

ರೇಂಜರಳಾಗಿ ವಿಶೇಷ ಭಾದ್ಯತೆ:

ರೇಂಜರಳಾಗಿ ಈ ಪ್ರತಿಜ್ಞೆಯ ಅರಿವನ್ನು ವಿಶಾಲ ಜಗತ್ತಿಗೆ ಮೂಡಿಸಿ ಸೇವೆಯನ್ನು ಮಾಡುವುದು ನನ್ನ ವಿಶೇಷ ಭಾದ್ಯತೆಯಾಗಿರುತ್ತದೆ.

ನಿಯಮ

1. ಗೈಡ್/ರೇಂಜರ್ ವಿಶ್ವಾಸಾರ್ಹಳು – Trustworthy
2. ಗೈಡ್/ರೇಂಜರ್ ನಿಷ್ಠಾವಂತಳು – Loyal
3. ಗೈಡ್/ರೇಂಜರ್ ಎಲ್ಲರ ಮಿತ್ರಳು ಮತ್ತು ಇತರ ಗೈಡ್‌ಗಳ ಸೋದರಿ – Friend to all and a Sister to every other Guide
4. ಗೈಡ್/ರೇಂಜರ್ ವಿನಯಶೀಲಳು – Courteous
5. ಗೈಡ್/ರೇಂಜರ್ ಪ್ರಾಣಿಮಿತ್ರಳು ಮತ್ತು ಪ್ರಕೃತಿ ಪ್ರೇಮಿಯಾಗಿರುವಳು – Friend to animals and loves nature
6. ಗೈಡ್/ರೇಂಜರ್ ಶಿಸ್ತುಳ್ಳವಳು ಮತ್ತು ಸಾರ್ವಜನಿಕ ಆಸ್ತಿಯನ್ನು ರಕ್ಷಿಸಲು ಸಹಾಯ ಮಾಡುವಳು – Disciplined and helps to protect public property.

7. ಗೈಡ್/ರೇಂಜರ್ ಧೈರ್ಯವಂತಳು – Courageous
8. ಗೈಡ್/ರೇಂಜರ್ ಮಿತವ್ಯಯಿ ಆಗಿರುವಳು – Thirfty
9. ಗೈಡ್/ರೇಂಜರ್ ಕಾಯಾ ವಾಚಾ ಮನಸಾ ಪರಿಶುದ್ಧಳು – Pure in thought, word and deed

ಸೂಚನೆ: ರೇಂಜರ್‌ಗಳು ಗೈಡ್ ಪ್ರತಿಜ್ಞೆ ಮತ್ತು ನಿಯಮಗಳನ್ನೇ ಅನುಸರಿಸಬೇಕು.

ಸ್ಕೌಟ್ಸ್ ಮತ್ತು ಗೈಡ್ಸ್ ಪ್ರಾರ್ಥನೆ

ದಯಾ ಕರ್ ದಾನ್ ಭಕ್ತೀ ಕಾ
ಹಮೇ ಪರಮಾತ್ಮಾ ದೇನಾ ।
ದಯಾ ಕರನಾ ಹಮಾರೀ
ಆತ್ಮಾ ಮೆ ಶುದ್ಧತಾ ದೇನಾ ॥

ಹಮಾರೆ ಧ್ಯಾನ್ ಮೆ ಆವೋ
ಪ್ರಭು, ಆಂಖೋಮೆ ಬಸ್ ಜಾವೋ ।
ಅಂಧೇರೆ ದಿಲ್ ಮೆ ಆಕರ್ ಕೆ
ಪರಂಜ್ಯೋತಿ ಜಗಾದೇನಾ ॥

ಬಹಾ ದೋ ಪ್ರೇಮ್ ಕೀ ಗಂಗಾ,
ದಿಲೋ ಮೆ ಪ್ರೇಮ್ ಕಾ ಸಾಗರ್ ।
ಹಮೆ ಆಪಸ್ ಮೆ ಮಿಲ್ ಜುಲ್ ಕರ್
ಪ್ರಭು, ರೆಹನಾ ಸಿಖಾದೇನಾ ॥

ಹಮಾರಾ ಕರ್ಮ್ ಹೋ ಸೇವಾ,
ಹಮಾರಾ ಧರ್ಮ್ ಹೋ ಸೇವಾ ।
ಸದಾ ಈಮಾನ್ ಹೋ ಸೇವಾ,
ವಹ್ ಸೇವಕ್ ಚರ್ ಬನಾದೇನಾ ॥

ವತನ್ ಕೆ ವಾಸತೆ ಜೀನಾ,
ವತನ್ ಕೆ ವಾಸತೆ ಮರನಾ ।
ವತನ್ ಪರ್ ಜಾನ್ ಫಿದಾ ಕರ್‌ನಾ
ಪ್ರಭು, ಹಮ್‌ಕೋ ಸಿಖಾ ದೇನಾ
॥ ದಯಾಕರ್ ॥

ಧ್ವಜಗೀತೆ

ಭಾರತ್ ಸ್ಕೌಟ್ ಗೈಡ್ ಝುಂಡಾ
ಊಂಚಾ ಸದಾ ರಹೇಗಾ ।
ಊಂಚಾ ಸದಾ ರಹೇಗಾ ಝುಂಡಾ
ಊಂಚಾ ಸದಾ ರಹೇಗಾ ॥

ನೀಲಾ ರಂಗ್ ಗಗನ್ ಸಾ ವಿಸ್ತೃತ
ಭಾತೃ ಭಾವ್ ಫೈಲಾತಾ ।
ತ್ರಿದಲ ಕಮಲನಿತ್ ತೀನ್
ಪ್ರತಿಜ್ಞಾವೊಂ ಕೀ ಯಾದ್ ದಿಲಾತಾ ।
ಔರ್ ಚಕ್ರ ಕಹತಾಹೈ
ಪ್ರತಿಪಲ್ ಆಗೆ ಕದಂ ಬಢೇಗಾ ॥

ಊಂಚಾ ಸದಾ ರಹೇಗಾ ಝುಂಡಾ
ಊಂಚಾ ಸದಾ ರಹೇಗಾ ।
ಭಾರತ್ ಸ್ಕೌಟ್ ಗೈಡ್ ಝುಂಡಾ
ಊಂಚಾ ಸದಾ ರಹೇಗಾ ॥

ಲೇಡಿ ಅಲೇವ್ ಬೇಡನ್ ಪೊವೆಲ್‌ರವರ ನಲ್ನುಡಿ

* ಹೇ ಪ್ರಭು! ಕೊನೆಯುಸಿರಿರುವವರೆಗೂ ನನಗೆ ಕೆಲಸವನ್ನು ಕೊಡು. ಈ ಕೆಲಸವನ್ನು ಮುಗಿಸುವವರೆಗೂ ಬದುಕಲು ಬಿಡು.

* "ಗೈಡಿಂಗ್" – ಈ ಉಡುಗೊರೆಯಿಂದ ನಮಗೆ ಬಹಳಷ್ಟು ಸಂತೋಷ ದೊರೆಯುತ್ತದೆ. ಬಹಳಷ್ಟು ಸ್ನೇಹಿತರನ್ನು ಪಡೆಯುತ್ತೇವೆ. ವಿನೋದವು ಸಂಸ್ಥೆಯ ಕೊಟ್ಟು ಕೊಳ್ಳುವ ವ್ಯವಹಾರವಾಗಿದೆ.

* ಯುದ್ಧವನ್ನು ಗೆಲ್ಲುವುದಕ್ಕಿಂತಲೂ ಶಾಂತಿಯನ್ನು ಗೆಲ್ಲುವ ಪ್ರಶ್ನೆ ಅತೀ ಮಹತ್ವವಾದುದು.

* ಯಾರು ಅಸಾಧ್ಯವನ್ನು ಸಾಧ್ಯ ಮಾಡಬಲ್ಲರೋ ಅಂತಹವರನ್ನು ಸ್ವಯಂಸೇವಕರಾಗಿ ತೆಗೆದುಕೊಳ್ಳಿ.

* ನಾವು ಮಾಡದಿರುವುದು ಏನೂ ಇಲ್ಲ, ನಾವು ಮಾಡಲಾಗದ್ದೂ ಏನೂ ಇಲ್ಲ. ಆದರೆ ಹೀಗೆ ಮಾಡಲು ನಾವು ಶ್ರಮಿಸಬೇಕು.

* ನೀವು ಆಗಮಿಸಿದಾಗ ಇದ್ದ ಜಗತ್ತಿಗಿಂತ, ನೀವು ನಿರ್ಗಮಿಸುವಾಗಿನ ಜಗತ್ತನ್ನು ಉತ್ತಮಗೊಳಿಸಿ.

Left Hand Sleeve (Ranger)



Right Hand Sleeve (Ranger)



ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ

ದೂರದರ್ಶಿತ್ವ - 2024

2024ರ ವೇಳೆಗೆ, ಅತ್ಯಂತ ಕ್ರಿಯಾಶೀಲ
ಯುವಚಳವಳಿಯಾದ ಅಂತರರಾಷ್ಟ್ರೀಯ ವ್ಯಾಪ್ತಿಯ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು
ಮೌಲ್ಯಾಧಾರಿತವಾದ, ಅತ್ಯಾಕರ್ಷಕ ಗುಣಗಳುಳ್ಳ,
ಸ್ವಾವಲಂಬಿಯಾದ, ಲಿಂಗತಾರತಮ್ಯವಿಲ್ಲದ
ಯುವಜನಾಂಗದ ಅವಶ್ಯಕತೆಗಳಿಗನುಗುಣವಾಗಿ ಬೆಳೆಯುತ್ತದೆ.

ಅಲ್ಲದೆ, ಸಮರ್ಥ ನಾಯಕರುಗಳ ಪರಿಣಾಮಕಾರಿ
ಮಾರ್ಗದರ್ಶನದ ಮೂಲಕ ಮುಂದುವರೆದ ತಂತ್ರಜ್ಞಾನ,
ಉತ್ತಮ ಆಡಳಿತ ವ್ಯವಸ್ಥೆಯುಳ್ಳ ಸವಾಲಿನಿಂದ ಕೂಡಿದ
ಸಂಸ್ಥೆಯಾಗುತ್ತದೆ.